بِسْمِ اللّٰهِ الرَّحْمٰنِ الرَّحِيْمِ نَحْمَدُهٗ وَنُصَلِّيْ عَلٰى رَسُوْلِهِ الْكَرِيْمِ وَعَلٰى عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ವರ್ಷ: 01

ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ಸಂಚಿಕೆ: 42

ವಾರ್ಷಿಕ ಶುಲ್ಕ ರೂ.500/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

29 ಅಕ್ಟೋಬರ್ 2020, 29 ಅಖಾ 1399 ಹಿಜರಿ ಶಮ್‌ಸಿ,
11 ರಬಿಉಲ್ ಅವ್ವಲ್ 1442 ಹಿಜರಿ ಖಮರಿ.

## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ- ಆಮೀನ್

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ

## ಅಲ್ಲಾಹನ ಉಪದೇಶ

وَاِذَا حُيِّيْتُمْ بِتَحِيَّةٍ
فَحَيُّوْا بِاَحْسَنَ مِنْهَاۤ اَوْ رُدُّوْهَا ؕ
اِنَّ اللّٰهَ كَانَ عَلٰى كُلِّ شَيْءٍ حَسِيْبًا

*(ಅನ್ನಿಸಾಅ್:87)*

ಅಂದರೆ: ಯಾರಿಂದಾದರೂ ನೀವು ಶುಭ ಹಾರೈಸಲ್ಪಟ್ಟರೆ, ಅದಕ್ಕಿಂತ ಉತ್ತಮವಾದ ರೀತಿಯಲ್ಲಿ ನೀವು ಶುಭ ಹಾರೈಸಿರಿ ಅಥವಾ (ಕಡಿಮೆ ಪಕ್ಷ) ಅದಕ್ಕೆ ಸಮಾನವಾದ ರೀತಿಯಲ್ಲಾದರೂ. ನಿಸ್ಸಂದೇಹವಾಗಿ ಅಲ್ಲಾಹನು ಎಲ್ಲ ವಿಚಾರಗಳ ಬಗ್ಗೆ ಲೆಕ್ಕ ತೆಗೆಯುವವನಾಗಿದ್ದಾನೆ.

## ಪ್ರವಾದಿ ಮುಹಮ್ಮದ್[(ಸ)]ರವರ ಉಪದೇಶ

### ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಈ ದುಆ ಮಾಡುತ್ತಿದ್ದರು

* ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಪತ್ನಿ ಹಝ್ರತ್ ಆಯಿಶಾ(ರ) ವರದಿ ಮಾಡುತ್ತಾರೆ- ರಸೂಲುಲ್ಲಾಹ್(ಸ) ನಮಾಝಿನಲ್ಲಿ (ತಶಹ್ಹುದ್ ನಂತರ) ಈ ದುಆ ಮಾಡುತ್ತಿದ್ದರು- **ಅಲ್ಲಾಹುಮ್ಮ ಇನ್ನಿ ಅಊಝುಬಿಕ ಮಿನ್ ಅಝಾಬಿಲ್ ಖಬರಿ ವ ಅಊಝುಬಿಕ ಮಿನ್ ಫಿತ್‌ನತಿಲ್ ಮಸೀಹಿದ್ದಜ್ಜಾಲಿ ವ ಅಊಝುಬಿಕ ಮಿನ್ ಫಿತ್‌ನತಿಲ್ ಮಹ್ಯಾ ವ ಫಿತ್‌ನತಿಲ್ ಮಮಾತಿ, ಅಲ್ಲಾಹುಮ್ಮ ಇನ್ನಿ ಅಊಝುಬಿಕ ಮಿನಲ್ ಮಅ್‌ಸಮಿ ವಲ್ ಮಗ್‌ರಮಿ** ಅಂದರೆ ಓ ಅಲ್ಲಾಹನೇ! ಗೋರಿಯ ಶಿಕ್ಷೆಯಿಂದ ನಿನ್ನ ಅಭಯ ಯಾಚಿಸುತ್ತೇನೆ. ಮಸೀಹ್ ದಜ್ಜಾಲಿನ ಉಪದ್ರವಗಳಿಂದಲೂ ನಿನ್ನ ಅಭಯ ಯಾಚಿಸುತ್ತೇನೆ, ಓ ಅಲ್ಲಾಹ್! ಪಾಪ ಮತ್ತು ಸಾಲಗಳಿಂದಲೂ ನಿನ್ನ ಅಭಯ ಯಾಚಿಸುತ್ತೇನೆ. ಓರ್ವರು ರಸೂಲುಲ್ಲಾಹ್(ಸ) ರವರಲ್ಲಿ ಕೇಳಿದರು: ನೀವು ಸಾಲದಿಂದ ಆಗಾಗ ಅಭಯ ಕೇಳುವುದನ್ನು ನೋಡಿ ತುಂಬ ಆಶ್ಚರ್ಯವಾಗುತ್ತದೆ. ಆಗ ಅವರು ಹೇಳಿದರು: ಸಾಲದಿಂದ ಮನುಷ್ಯನು ಮಾತು ತಪ್ಪಿಸುವವನಾಗುತ್ತಾನೆ, ಸುಳ್ಳುಗಾರನಾಗುತ್ತಾನೆ, ಭರವಸೆ ನೀಡುತ್ತಾನೆ ಆದರೆ ಭರವಸೆ ಈಡೇರಿಸುವುದಿಲ್ಲ. **(ಸಹೀ ಬುಖಾರಿ, ಸಂಪುಟ-2, ಕಿತಾಬುಲ್ ಅಝಾನ್, ಮುದ್ರಣ ಖಾದಿಯಾನ್ 2006)**

**ದೈವಿಕ ಜ್ಞಾನದಿಂದ ಎಂದೂ ಕಣ್ಣಿಗೆ ಕಾಣದಂತಹ, ಕಿವಿಗಳು ಕೇಳಿಸದಂತಹ ಮತ್ತು ಜ್ಞಾನೇಂದ್ರಿಯಗಳು ಅನುಭವಿಸದಂತಹ ಸಂತೋಷದ ವಿಷಯವಾಗಿದೆ.**

## ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

### ಲೋಕ ಮತ್ತು ಲೌಕಿಕ ಸಂತೋಷಗಳ ವಾಸ್ತವ

ಲೋಕ ಮತ್ತು ಲೌಕಿಕ ಸಂತೋಷಗಳು ವಿನೋದ ಆಟಕ್ಕಿಂತ ಹೆಚ್ಚೇನಿಲ್ಲ. ಅದು ಒಂದಂತೂ ತಾತ್ಕಾಲಿಕವಾದುದು ಮತ್ತು ಕೆಲವು ದಿವಸಗಳದ್ದು ಮಾತ್ರ ಈ ಸಂತೋಷಗಳ ಪರಿಣಾಮವಾಗಿ ಮನುಷ್ಯನು ಅಲ್ಲಾಹನಿಂದ ದೂರ ಆಗಿ ಬಿಡುತ್ತಾನೆ. ಆದರೆ ದೇವಜ್ಞಾನ (ಅಲ್ಲಾಹನ ಮಾರಿಫತ್) ಎಂದೂ ಕಣ್ಣಿಗೆ ಕಾಣಿಸದಂತ, ಕಿವಿಗಳು ಕೇಳಿಸದಂತಹ ಮತ್ತು ಜ್ಞಾನೇಂದ್ರಿಯಗಳು ಅನುಭವಿಸದಂತ ಸಂತೋಷವಾಗಿರುತ್ತದೆ. ಅದು ಮನಮುಟ್ಟುವಂತಹ ವಸ್ತುವಾಗಿದೆ. ಪ್ರತಿ ಕ್ಷಣ ಒಂದು ಹೊಸ ರೀತಿಯ ಸಂತೋಷ ಅದರಿಂದ ಉಂಟಾಗುತ್ತದೆ ಅದು ಮೊದಲು ಎಂದೋ ನೀಡದಂತಹ.

### ಅಲ್ಲಾಹನೊಡನೆ ಮನುಷ್ಯ ಒಂದು ಆಪ್ತ ಸಂಬಂಧವಿರುತ್ತದೆ

ಆಧ್ಯಾತ್ಮಿಕ ಜ್ಞಾನಯುಳ್ಳವರು ಮಾನವ ಮತ್ತು ದೇವನ ಸಂಬಂಧವಾಗಿ ತುಂಬ ಅನ್ಯೋನ್ಯವಾಗಿ ಚರ್ಚೆ ಮುಂದಿಟ್ಟಿದ್ದಾರೆ. ಒಂದು ಮಗುವಿನ ಬಾಯಿ ಕಲ್ಲಿಗೆ ಹಚ್ಚಿದರೆ ಯಾವನಾದರೂ ಬುದ್ಧಿವಂತ ಆ ಕಲ್ಲಿನಿಂದ ಹಾಲು ಬರುವುದೆಂದು ನಿರೀಕ್ಷಿಸಬಹುದೇ. ಮಗುವಿನ ದಾಹ ನೀಗುತ್ತದೆಯೇ! ಖಂಡಿತವಾಗಿಯೂ ಇಲ್ಲ ಅದೇ ರೀತಿ ಎಲ್ಲಿಯವರೆಗೆ ಮನುಷ್ಯನು ಅಲ್ಲಾಹನ ಸಮ್ಮುಖ ಬೀಳುವುದಿಲ್ಲವೋ, ಆತನ ಆತ್ಮ ವಿನೀತನಾಗಿ ತನ್ನ ಪರಿಪಾಲಕನೊಡನೆ ಸಂಬಧ ಜೋಡಿಸುವುದಿಲ್ಲವೋ, ಜೋಡಿಸಲು ಪ್ರಯತ್ನಿಸುವುದಿಲ್ಲವೋ ಎಲ್ಲಿಯ ತನಕ ಅವನು ಅಲ್ಲಾಹನ ಮುಂದೆ ತನ್ನ ಅಸ್ತಿತ್ವ ಕಳೆದುಕೊಳ್ಳುವುದಿಲ್ಲವೋ, ಏಕೆಂದರೆ ಇದು ಪರಿಪಾಲಕನ ಬಯಕೆಯಾಗಿರುತ್ತದೆ. ಅಲ್ಲಿಯ ತನಕ ಅವನು ಆಧ್ಯಾತ್ಮಿಕ ಹಾಲಿನಿಂದ ಪೋಷಿಸಲ್ಪಡುವುದಿಲ್ಲ.

ಲಗೂ (ವಿನೋದ) ದಲ್ಲಿ ಊಟ ಕುಡಿತ ಎಲ್ಲಾ ಸ್ವಾದಗಳು ಸೇರಿವೆ. ಅದರ ಪರಿಣಾಮ ಕ್ಷಣಿಕವಲ್ಲದೆ ಇನ್ನೇನಿದೆ. ಸೌಂದರ್ಯ, ವಾಹನ, ಆರಾಮಗಳ ಮೇಲೆ ಗರ್ವ ಪಡುವುದು ಅಥವಾ ಆಡಳಿತ, ಸ್ಥಾನಮಾನ, ವಂಶದ ಮೇಲೆ ಗರ್ವ ಪಡುವುದು ಇವೆಲ್ಲದರಿಂದ ಅಂತಿಮವಾಗಿ ಒಂದು ರೀತಿಯ ಅಸಹ್ಯ ಉಂಟು ಮಾಡುತ್ತದೆ ಅದು ದುಃಖಕ್ಕೆ ಕಾರಣವಾಗುತ್ತದೆ ಮತ್ತು ಮನುಷ್ಯನನ್ನು ನಿರಾಶೆಗೊಳಿಸುತ್ತದೆ.

ಲಅಬ್ (ದಾಹ) ನಲ್ಲಿ ಸ್ತ್ರೀಯರ ಪ್ರೀತಿಯು ಸೇರಿದೆ. ಮನುಷ್ಯನು ಸ್ತ್ರೀಯ ಬಳಿಗೆ ಹೋಗುತ್ತಾನೆ ಆದರೆ ಸ್ವಲ್ಪವೇ ಹೊತ್ತಿನಲ್ಲಿ ಆ ಪ್ರೀತಿ ಸಂತೋಷ ಅಸಹ್ಯತೆಯಲ್ಲಿ ಪರಿವರ್ತನೆಗೊಳ್ಳುತ್ತದೆ. ಆದರೆ ಇದೆಲ್ಲ ಕೇವಲ ಅಲ್ಲಾಹನೊಡನೆ ಸಂಬಂಧಕ್ಕಾಗಿ ನಿಜವಾದ ಪ್ರೀತಿಯೆಂದಾದರೆ ಅದು ಸುಖ ಸಂತೋಷವನ್ನು ನೀಡುತ್ತದೆ. ಅಂತಿಮವಾಗಿ ದೈವಿಕ ಸತ್ಯದ ಬಾಗಿಲುಗಳು ತೆರೆಯಲ್ಪಡುತ್ತವೆ ಮತ್ತು ಒಂದು ಶಾಶ್ವತವಾದ ಸಂತೋಷ ಸುಖಗಳಲ್ಲಿ ಪಾದರ್ಪಣೆ ಮಾಡುತ್ತಾನೆ. ಅಲ್ಲಿ ಪರಿಶುದ್ಧತೆ ಹೊರತು ಏನೂ ಇಲ್ಲ. ಆ ಸಂತೋಷ ಅಲ್ಲಾಹನಲ್ಲಿದೆ ಅದನ್ನು ಪಡೆಯಲು ಪ್ರಯತ್ನ ಮಾಡಬೇಕು ಅದುವೆ ನಿಜವಾದ ಸಂತೋಷವಾಗಿದೆ.

**(ಮಲ್‌ಫೂಝಾತ್, ಸಂಪುಟ-1, ಪುಟ-195-196, ಮುದ್ರಣ ಖಾದಿಯಾನ್ 2018)**

**ಇಸ್ಲಾಮ್ ಧರ್ಮವು ಜುಮುಅ ದಿವಸಕ್ಕಾಗಿ ಈ ವಿಶೇಷತೆಗಳನ್ನು ನಿಗದಿಪಡಿಸಿದೆ ಆ ದಿನ ರಜೆ ಇರಬೇಕು, ಹೆಚ್ಚು ಹೆಚ್ಚು ಆರಾಧನೆ ಮಾಡಬೇಕು, ಆ ದಿವಸವನ್ನು ಸಾಮೂಹಿಕ ಸಮಾವೇಶದ ದಿನವನ್ನಾಗಿ ಮಾಡಬೇಕು, ಸ್ನಾನ ಮಾಡಬೇಕು, ಸ್ವಚ್ಛತೆ ಇರಬೇಕು, ರೋಗಿಗಳನ್ನು ಕಾಣಬೇಕು ಅದೇ ರೀತಿ ಸಾಮುದಾಯಿಕ ಮತ್ತು ಸಾಂಸ್ಕೃತಿಕ ಕಾರ್ಯಗಳನ್ನು ಆಯೋಜಿಸಬೇಕು.**

**ಅಹ್ಮದಿಯಾ ಸಂಘಟನೆಯ ಸ್ಥಾಪಕರ ಕೋರಿಕೆಯ ಮೇರೆಗೆ ಮತ್ತು ಅಹ್ಮದಿಯಾ ಜಮಾಅತ್ತಿನ ಸತತ ಪ್ರಯತ್ನಗಳ ನಂತರ ಸರಕಾರವು ಜಮಾಅತ್ ನಮಾಝಿಗೋಸ್ಕರ ಒಂದು ಗಂಟೆಯ ರಜೆ ಮಂಜೂರು ಮಾಡಿತ್ತು.**

ಯಹೂದಿಯರಲ್ಲಿ ಸಬ್ತ್ ಶನಿವಾರದ ದಿನ ಆಚರಿಸಲಾಗುತ್ತಿತ್ತು. ಬೈಬಲಿನಲ್ಲಿ ಶನಿವಾರದ ದಿನವೇ ಅದಕ್ಕಾಗಿ ನಿಗದಿಪಡಿಸಿದೆ (ಆದುದರಿಂದ ಸಬ್ತ್ ಎಂದರೆ ಶನಿವಾರ ಎಂದಾಗಿಬಿಟ್ಟಿದೆ ಆದರೆ ವಾಸ್ತವದಲ್ಲಿ ಸಬ್ತ್ ಅರ್ಥ ಆ ದಿನಕ್ಕಾಗಿ ತಮ್ಮ ದಿನ ನಿತ್ಯದ ಕಾರ್ಯಗಳನ್ನು ಬಿಡಬೇಕು, ಹೀಗೆ ನಾವು ಹೇಳಬಹುದು ಬನಿ ಇಸ್ರಾಈಲರಿಗೆ ಸಬ್ತ್ ಶನಿವಾರವಾದರೆ ಮುಸ್ಲಿಮರಿಗೆ ಜುಮುಅ).

ಕ್ರೈಸ್ತರು ಸಹ ಸಬ್ತ್ ಪ್ರಾಮುಖ್ಯತೆಯನ್ನು ಒಪ್ಪಿಕೊಂಡಿರುತ್ತಾರೆ ಆದರೆ ಅದಕ್ಕಾಗಿ ಭಾನುವಾರದ ದಿನವನ್ನು ನಿಗದಿಪಡಿಸಿಕೊಂಡಿದ್ದಾರೆ. ಅದರ ಕಾರಣ ಏನೆಂದರೆ ಕೆಲವು ಯೂರೋಪಿಯನ್ ದೇಶಗಳು ಮತ್ತು ದೊರೆಗಳು ಕ್ರೈಸ್ತ

*(ಪುಟ ಸಂಖೆ 09 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

**ಹಝ಼್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: “ನನ್ನನ್ನು ಸ್ವರ್ಗಕ್ಕೆ ರಾತ್ರಿ ಸಮಯದಲ್ಲಿ ಕೊಂಡುಹೋಗಲಾದಾಗ, ನನಗೆ ಹೆಜ್ಜೆಗಳ ಸಪ್ಪಳ ಕೇಳಿಬಂತು. ಈ ಸಪ್ಪಳದ ಶಬ್ದ ಯಾರದ್ದು ಎಂದು ನಾನು ಜಿಬ್ರೀಲ್ ಅಲೈಹಿಸ್ಸಲಾಮರೊಡನೆ ಕೇಳಿದೆ. ಅದು ಬಿಲಾಲ್‌ರದ್ದು ಎಂದು ಜಿಬ್ರೀಲ್ ಅಲೈಹಿಸ್ಸಲಾಮ್ ಹೇಳಿದರು.**

---

**ಹಝ಼್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: “ಮೂರು ವ್ಯಕ್ತಿಗಳನ್ನು ಸ್ವರ್ಗವು ಹಂಬಲದಿಂದ ಪ್ರತೀಕ್ಷಿಸುತ್ತಿದೆ. ಅವರು ಹಝ಼್ರತ್ ಅಲಿ ರಝ಼ಿಯಲ್ಲಾಹು ಅನ್‌ಹು, ಹಝ಼್ರತ್ ಅಮ್ಮಾರ್ ರಝ಼ಿಯಲ್ಲಾಹು ಅನ್‌ಹು ಮತ್ತು ಹಝ಼್ರತ್ ಬಿಲಾಲ್ ರಝ಼ಿಯಲ್ಲಾಹು ಅನ್‌ಹು ಆಗಿರುವರು.”**

---

**ಹಝ಼್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: “ಬಿಲಾಲ್ ಎಂತಹ ಉತ್ತಮ ಮನುಷ್ಯನಾಗಿರುವನು. ಅವರು ಎಲ್ಲ ಮುಅಧ್ಧಿನ್‌ರ ಎಂದರೆ ಅಧ಼ಾನ್ ನೀಡುವವರ ನೇತಾರರಾಗಿರುವರು. ಅವರನ್ನು ಅಧ಼ಾನ್ ನೀಡುವವರೇ ಹಿಂಬಾಲಿಸುವರು ಮತ್ತು ಖಿಯಾಮತ್ ದಿನದಂದು ಅತ್ಯಂತ ಉದ್ದ ಕುತ್ತಿಗೆಯವರು ಮುಅಧ್ಧಿನ್‌ಗಳಾಗಿವರು.”**

---

**ಹಝ಼್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: “ಹಝ಼್ರತ್ ಬಿಲಾಲ್‌ರಿಗೆ ಸ್ವರ್ಗದ ಒಂಟೆಗಳಲ್ಲಿ ಒಂದು ಒಂಟೆಯನ್ನು ಕೊಡಲಾಗುವುದು. ಅವರು ಅದರಲ್ಲಿ ಸವಾರರಾಗುವರು.”**

**ಹಝ಼್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮುಅಧ್ಧಿನ್, ಹಬ್‌ಶರಲ್ಲಿ ಮೊದಲಿಗರು ಪ್ರವಾದಿ ಮುಹಮ್ಮದ್(ಸ)ರವರೊಂದಿಗೆ ನಿಷ್ಠೆಯ ಸಂಬಂಧ ಹೋಂದಿದ ಬದರಿ ಸಹಾಬಿಯಾದ ಹಝ಼್ರತ್ ಬಿಲಾಲ್(ರ)ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ.**

**ಇತ್ತೀಚೆಗೆ ನಿಧನ ಹೊಂದಿದ ಐದು ದಿವಂಗತರು ಮೌಲಾನ ತಾಲಿಬ್ ಯಾಖೂಬ್ ಸಾಹಿಬ್ ಮುಬಲ್ಲಿಗ್ ಟ್ರಿನಿಡಾಡ್, ಸನ್ಮಾನ್ಯ ಇಫ್ತಿಖ಼ಾರ್ ಅಲಿ ಖುರೈಶಿ ಸಾಹಿಬ್, ಮೌಲವಿ ಹಕೀಂ ಖುರ್ಶಿದ್ ಸಾಹಿಬ್‌ರ ಪತ್ನಿಯಾದ ರಝ಼ಿಯಾ ಸುಲ್ತಾನ ಸಾಹಿಬ, ಖಾದಿಯಾನಿನ ನಾಇಬ್ ನಾಝ಼ಿರ್ ಬೈತುಲ್ ಮಾಲ್ ಮುಹಮ್ಮದ್ ತಾಹಿರ್ ಸಾಹಿಬ್, ಮಿರ್ಝ಼ಾ ಖ಼ಲೀಲ್ ಅಹ್ಮದ್ ಬೇಗ್ ಸಾಹಿಬರ ಮಗನಾದ ಅಖೀಲ್ ಅಹ್ಮದ್ ಸಾಹಿಬ್ ಅವರೆಲ್ಲರ ಸದ್ಗುಣಗಳ ಪ್ರಸ್ತಾವನೆ ಮತ್ತು ಅವರೆಲ್ಲರ ನಮಾಝ಼ೆ ಜನಾಝ಼ ಗಾಯಿಬ್ ನಿರ್ವಹಣೆ.**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ಼್ರತ್ ಮಿರ್ಝ಼ಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **‘ಮಸ್ಜಿದ್ ಮುಬಾರಕ್’** ನಿಂದ **25–09–2020** ರಂದು ನೀಡಿದ **ಜುಮುಅ ಖುತ್‌ಬ**

أَشْهَدُ أَنْ لَّا إِلٰهَ إِلَّا اللهُ وَحْدَهُ لَا شَرِيكَ لَهُ وَأَشْهَدُ أَنَّ مُحَمَّدًا عَبْدُهُ وَرَسُولُهُ

أَمَّا بَعْدُ فَأَعُوذُ بِاللهِ مِنَ الشَّيْطٰنِ الرَّجِيمِ - بِسْمِ اللهِ الرَّحْمٰنِ الرَّحِيمِ

اَلْحَمْدُ لِلّٰهِ رَبِّ الْعَالَمِينَ۔ اَلرَّحْمٰنِ الرَّحِيمِ۔ مٰلِكِ يَوْمِ الدِّينِ۔

اِيَّاكَ نَعْبُدُ وَاِيَّاكَ نَسْتَعِينُ۔ اِهْدِنَا الصِّرَاطَ الْمُسْتَقِيمَ۔

صِرَاطَ الَّذِينَ اَنْعَمْتَ عَلَيْهِمْ غَيْرِ الْمَغْضُوبِ عَلَيْهِمْ وَلَا الضَّآلِّينَ۔

ಹಝ಼್ರತ್ ಬಿಲಾಲ್ ರಝ಼ಿಯಲ್ಲಾಹು ಅನ್‌ಹುರ ಪ್ರಸ್ತಾಪ ನಡೆಯುತ್ತಿತ್ತು. ಅಬ್ದುಲ್ಲಾಹ್ ಬಿನ್ ಬರೀದ ತನ್ನ ತಂದೆಯಿಂದ ವರದಿ ಮಾಡುತ್ತಾರೆ: ಒಂದು ದಿನ ಬೆಳಿಗ್ಗೆ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ಼್ರತ್ ಬಿಲಾಲ್ ರಝ಼ಿಯಲ್ಲಾಹು ಅನ್‌ಹುರನ್ನು ಕರೆದು ಕೇಳಿದರು: ಸ್ವರ್ಗದಲ್ಲಿ ನೀನು ನನಗಿಂತ ಮುಂದೆ ಇರಲು ಕಾರಣವೇನು? ನಾನು ನಿನ್ನೆ ರಾತ್ರಿ ಸ್ವರ್ಗದಲ್ಲಿ ಪ್ರವೇಶಿಸಿದಾಗ ಅಲ್ಲಿ ನನಗೆ ನಿನ್ನ ಹೆಜ್ಜೆಯ ಸಪ್ಪಳ ಕೇಳಿಬಂತು. ಹಝ಼್ರತ್ ಬಿಲಾಲ್ ರಝ಼ಿಯಲ್ಲಾಹು ಅನ್‌ಹು ಹೀಗೆ ಉತ್ತರಿಸಿದರು: ನಾನು ಅಝ಼ಾನ್ ನೀಡಿದ ನಂತರ ಯಾವಾಗಲೂ ಎರಡು ರಕಅತ್ ನಫ್‌ಲ್ ನಮಾಝ಼್ ನಿರ್ವಹಿಸುತ್ತೇನೆ ಮತ್ತು ವುಝ಼ೂ ಮುರಿಯುವಾಗಲೆಲ್ಲ ವುಝ಼ೂ ಮಾಡುತ್ತೇನೆ. ಹೀಗೆ ಎರಡು ರಕಅತ್ ನಮಾಝ಼್ ನಿರ್ವಹಿಸುವುದು ನನಗೆ ಅಲ್ಲಾಹನು ಕಡ್ಡಾಯಗೊಳಿಸಿದ್ದಾನೆ ಎಂದು ನಾನು ಭಾವಿಸುತ್ತೇನೆ. ನಿನ್ನ ಹೆಜ್ಜೆಗಳ ಸಪ್ಪಳದ ಕಾರಣ ಇದೇ ಆಗಿರಬಹುದು ಈ ಉತ್ತರವನ್ನು ಕೇಳಿದಾಗ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು. (ಸನನ್ ತಿರ್‌ಮಿಝಿ, ಅಬ್ವಾಬುಲ್ ಮನಾಖಿಬ್, ಹದೀಸ್–3689)

ಹಝ಼್ರತ್ ಅಬೂಹುರೈರ ರಝ಼ಿಯಲ್ಲಾಹು ಅನ್‌ಹು ವರದಿ ಮಾಡುತ್ತಾರೆ: “ಹಝ಼್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಫಜ್ರ್ ನಮಾಝ಼ಿನ ಸಮಯದಲ್ಲಿ ಹಝ಼್ರತ್ ಬಿಲಾಲ್ ರಝ಼ಿಯಲ್ಲಾಹು ಅನ್‌ಹುರೊಡನೆ ಕೇಳಿದರು: ಹೇ ಬಿಲಾಲ್, ಅತ್ಯಂತ ಪ್ರತೀಕ್ಷೆಯಿರುವ ಯಾವ ಸತ್ಕರ್ಮವನ್ನು ನೀನು ಮುಸ್ಲಿಮನಾದ ನಂತರ ಮಾಡಿದ್ದೀಯ? ಏಕೆಂದರೆ ನಾನು ಸ್ವರ್ಗದಲ್ಲಿ ನನ್ನ ಮುಂದೆ ನಿನ್ನ ಹೆಜ್ಜೆಗಳ ಸಪ್ಪಳವನ್ನು ಕೇಳಿದೆ. ಹಝ಼್ರತ್ ಬಿಲಾಲ್ ಹೇಳಿದರು: ‘ನಾನು ಹಗಲು – ರಾತ್ರಿ ಸಮಯಗಳಲ್ಲಿ ವುಝ಼ೂ ಮಾಡಿದ ನಂತರ ಎರಡು ರಕಅತ್ ನಫ್‌ಲ್ ನಮಾಝ಼್ ಸಾಧ್ಯವಾದಾಗಲೆಲ್ಲ ನಿರ್ವಹಿಸುತ್ತೇನೆ. ನನ್ನ ಪ್ರಕಾರ ಇದಲ್ಲದೆ ಬೇರೆ ಯಾವ ಅತ್ಯಂತ ಪ್ರತೀಕ್ಷೆಯಿರುವ ಸತ್ಕರ್ಮವನ್ನು ನಾನು ಮಾಡಿಲ್ಲ. ಇದು ಬುಖ಼ಾರಿಯ ವರದಿಯಾಗಿದೆ. (ಸಹೀಹ್ ಬುಖಾರಿ, ಕಿತಾಬುಲ್ ತಹಜ್ಜುದ್, ಹದೀಸ್–1149) ಇದರಿಂದ ಹಝ಼್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗಿಂತ ಹಝ಼್ರತ್ ಬಿಲಾಲ್‌ರಿಗಿಂತ ಶ್ರೇಷ್ಠರು ಎಂದು ಅರ್ಥವಲ್ಲ. ಬದಲಿಗೆ ಪರಿಶುದ್ಧಿ ಮತ್ತು ರಹಸ್ಯವಾದ ಆರಾಧನೆಯ ಕಾರಣದಿಂದ ಅವರು ಈ ಲೋಕದಲ್ಲಿ ಹಝ಼್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಜೊತೆಗೆ ಇದ್ದ ಹಾಗೆಯೇ ಸ್ವರ್ಗದಲ್ಲಿಯೂ ಅವರ ಜೊತೆಗೆ ಇರುವಂತೆ ಮಾಡಿ ಅಲ್ಲಾಹನು ಅವರಿಗೆ ಶ್ರೇಷ್ಠ ಪದವಿಯನ್ನು ನೀಡಿದನು. ಹಿಂದೆ ಸಹ ಪ್ರಸ್ತಾಪಿಸಿದಂತೆ ಈದ್ ಹಬ್ಬದ ದಿವಸ ಹಝ಼್ರತ್ ಬಿಲಾಲ್ ರಝ಼ಿಯಲ್ಲಾಹು ಅನ್‌ಹು ಈಟಿಯನ್ನು ಹಿಡಿದುಕೊಂಡು ಹಝ಼್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮುಂದೆ ಮುಂದೆ ನಡೆಯುತ್ತಿದ್ದರು ಮತ್ತು ಖಿಬ್ಲದ ದಿಕ್ಕಿನಲ್ಲಿ ಅದನ್ನು ಸ್ಥಾಪಿಸುತ್ತಿದ್ದರು. ಅನಂತರ ಹಝ಼್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಈದ್ ನಮಾಝ಼್ ನಿರ್ವಹಿಸುತ್ತಿದ್ದರು. ಹೇಗಿದ್ದರೂ ಅವರ ಪರಿಶುದ್ಧಿ ಮತ್ತು ಆರಾಧನೆಯ ಕಾರಣದಿಂದ ಸ್ವರ್ಗದಲ್ಲಿಯೂ ಅವರಿಗೆ ಅಲ್ಲಾಹನು ಗೌರವಾನ್ವಿತ ಸ್ಥಾನವನ್ನು ನೀಡಿದನು. ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ಼್ರತ್ ಬಿಲಾಲ್‌ರನ್ನು ತನ್ನೊಂದು ಕನಸಿನಲ್ಲಿ ತನ್ನೊಂದಿಗೆ ಕಂಡಿದ್ದರು.

ಒಂದು ವರದಿಯಲ್ಲಿ ಹೀಗೆ ಬಂದಿದೆ: ಹಝ಼್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: “ನನ್ನನ್ನು ಸ್ವರ್ಗಕ್ಕೆ ರಾತ್ರಿ ಸಮಯದಲ್ಲಿ ಕೊಂಡುಹೋಗಲಾದಾಗ, ನನಗೆ ಹೆಜ್ಜೆಗಳ ಸಪ್ಪಳ ಕೇಳಿಬಂತು. ಈ ಸಪ್ಪಳದ ಶಬ್ದ ಯಾರದ್ದು ಎಂದು ನಾನು ಜಿಬ್ರೀಲ್ ಅಲೈಹಿಸ್ಸಲಾಮರೊಡನೆ ಕೇಳಿದೆ. ಅದು ಬಿಲಾಲ್‌ರದ್ದು ಎಂದು ಜಿಬ್ರೀಲ್ ಅಲೈಹಿಸ್ಸಲಾಮ್ ಹೇಳಿದರು. ಈ

ದಿವ್ಯದರ್ಶನದ ವಿವರಣೆಯನ್ನು ಕೇಳಿದಾಗ ಹಝ್ರತ್ ಅಬೂಬಕ್ಕರ್ ರಝಿಯಲ್ಲಾಹು ಅನ್‌ಹು ಹೇಳಿದರು: ನಾನು ಬಿಲಾಲ್‌ರ ತಾಯಿ ಗರ್ಭದಿಂದ ಜನಿಸಿದ್ದರೆ ಎಷ್ಟು ಚೆನ್ನಾಗಿತ್ತು! ಬಿಲಾಲಿನ ತಂದೆ ನನ್ನ ತಂದೆಯಾಗಿದ್ದರೆ ಮತ್ತು ನಾನು ಬಿಲಾಲಿನ ಹಾಗೆ ಆಗಿದ್ದರೆ ಎಷ್ಟು ಚೆನ್ನಾಗಿತ್ತು!" ಒಂದು ಕಾಲದಲ್ಲಿ ಕೀಳಾಗಿ ಭಾವಿಸುತ್ತಾ ಕಲ್ಲುಗಳ ಮೇಲೆ ಎಳೆಯಪಡುತ್ತಿದ್ದ ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹುರ ಸ್ಥಾನ ಎಷ್ಟು ಉನ್ನತವಾಗಿದೆ. 'ನಾನು ಬಿಲಾಲ್ ಆಗಿದ್ದರೆ ಎಷ್ಟು ಚೆನ್ನಾಗಿತ್ತು' ಎಂದು ಹಝ್ರತ್ ಅಬೂಬಕ್ಕರ್ ರಝಿಯಲ್ಲಾಹು ಅನ್‌ಹು ಬಯಸುತ್ತಾರೆ.

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ರಝಿಯಲ್ಲಾಹು ಅನ್‌ಹು ಆರಂಭ ಕಾಲದ ಸಹಾಬರ ಬಗ್ಗೆ ಪ್ರಸ್ತಾಪಿಸುತ್ತಾ ಒಂದು ಕಡೆ ಹೀಗೆ ಬರೆಯುತ್ತಾರೆ: "ಹಝ್ರತ್ ಬಿಲಾಲ್ ಬಿನ್ ರಬಾಹ್ ರಝಿಯಲ್ಲಾಹು ಉಮಯ್ಯ ಬಿನ್ ಖಲ್‌ಫರ ನೀಗ್ರೋ ಗುಲಾಮರಾಗಿದ್ದರು. ಮದೀನಕ್ಕೆ ವಲಸೆ ಹೋದ ನಂತರ ಅಧ಼ಾನ್ ನೀಡುವ ಕರ್ತವ್ಯ ಹಝ್ರತ್ ಬಿಲಾಲ್‌ರಿಗೆ ಒಪ್ಪಿಸಲಾಗಿತ್ತು. ಆದರೆ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನಿಧನದ ನಂತರ ಅವರು ಅಧ಼ಾನ್ ಕೊಡುವುದನ್ನು ನಿಲ್ಲಿಸಿದರು. ಅನಂತರ ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹುರ ಖಿಲಾಫತ್ ಕಾಲದಲ್ಲಿ ಸಿರಿಯಾ ದೇಶವನ್ನು ಮುಸ್ಲಿಮರು ಜಯಿಸಿದಾಗ, ಒಂದು ಸಲ ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹುರ ಒತ್ತಾಯದ ಮೇರೆಗೆ ಪುನಃ ಅಧ಼ಾನ್ ನೀಡಿದರು. ಆಗ ಎಲ್ಲರಿಗೂ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕಾಲಘಟ್ಟ ನೆನಪಿಗೆ ಬಂತು. ಆ ಸಮಯದಲ್ಲಿ ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹು ಸ್ವತಃ ಮತ್ತು ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹು ಹಾಗೂ ಅಲ್ಲಿದ್ದ ಇತರ ಸಹಾಬಿವರ್ಯರು ಬಹಳವಾಗಿ ಅತ್ತರು. ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹುರಿಗೆ ಹಝ್ರತ್ ಬಿಲಾಲ್‌ರೊಂದಿಗೆ ತುಂಬ ಪ್ರೀತಿಯಿತ್ತು. ಅವರು ನಿಧನರಾದಾಗ, ಮುಸ್ಲಿಮರ ಸರದಾರ ತೀರಿಹೋದರು ಎಂದು ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹು ಹೇಳಿದರು. ಇವು ಒಬ್ಬ ಬಡವನಾದ ಹಬ್‌ಶಿ ಗುಲಾಮರ ಬಗ್ಗೆ ಆ ಕಾಲಘಟ್ಟದ ಬಾದಶಾಹನ ಮಾತುಗಳಾಗಿದ್ದುವು.
(ಸೀರತ್ ಖಾತುಮುನ್ನಬೀಈನ್, ಪುಟ–124–125)

ಒಂದು ಸಂದರ್ಭದಲ್ಲಿ ಹಝ್ರತ್ ಖಲೀಫತುಲ್ ಮಸೀಹ್ ಸಾನಿ ರಝಿಯಲ್ಲಾಹು ಅನ್‌ಹು ಸ್ತ್ರೀಯರನ್ನು ಸಂಬೋಧಿಸಿ ಹೇಳಿದರು: **ಅಲ್‌ಮಾಲು ವಲ್‌ಬನೂನು ಝೀನತುಲ್ ಹಯಾತಿದ್ದುನ್‌ಯಾ ವಲ್‌ಬಾಖಿಯಾತುಸ್ಸಾಲಿಹಾತಿ ಖೈರುನ್ ಇಂದ ರಬ್ಬಿಕ ಸವಾಬನ್ ವಖೈರುನ್ ಅಮಲ**. ಒಂದೇ ಸಂಗತಿ ಶಾಶ್ವಯವಾಗಿರುವುದು. ಅದೇ **ಬಾಖಿಯಾತುಸ್ಸಾಲಿಹಾತ್** ಎಂದರೆ ಅಲ್ಲಾಹನಿಗಾಗಿ ಮಾಡುವ ಕೆಲಸಗಳು ಶಾಶ್ವತವಾಗಿರುವುವು. ಇಂದು ಅಬೂ ಹುರೈರ ರಝಿಯಲ್ಲಾಹು ಅನ್‌ಹುರ ಮಕ್ಕಳು ಎಲ್ಲಿರುವರು, ಅವರ ಮನೆ ಎಲ್ಲಿದೆ ಮತ್ತು ಅವರಿಗೆ ಸೊತ್ತುಗಳು ಇವೆಯೇ ಇಲ್ಲವೋ ಎಂದೂ ಅವರಿಗೆ ಮಕ್ಕಳು ಇರುವರೇ ಇಲ್ಲವೋ ಎಂದೂ ನಮಗೆ ಗೊತ್ತಿಲ್ಲ. ನಾವು ಅವರ ಮಕ್ಕಳನ್ನು, ಅವರ ಮನೆಯನ್ನು, ಅವರ ಸೊತ್ತುಗಳನ್ನು ಕಂಡಿಲ್ಲ. ಅವರ ಮಕ್ಕಳನ್ನು, ಅವರನ ಮನೆಯನ್ನು, ಅವರ ಸೊತ್ತುಗಳನ್ನು ಕಾಣದ ನಾವು ಅವರ ಹೆಸರು ಹೇಳುವಾಗ ರಝಿಯಲ್ಲಾಹು ಅನ್‌ಹು ಎಂದು ಹೇಳುತ್ತೇವೆ. ಕೆಲವು ದಿನಗಳ ಮುಂಚೆ ಒಬ್ಬ ಅರಬ್ ವ್ಯಕ್ತಿ ನನ್ನ ಬಳಿ ಬಂದರು. ಅವರು ಬಿಲಾಲ್ ರಝಿಯಲ್ಲಾಹು ಅನ್‌ಹುರ ಸಂತಾನ ಪರಂಪರೆಗೆ ಸೇರಿದವರು ಎಂದು ಸ್ವತಃ ಹೇಳುತ್ತಿದ್ದರು. ಅವರು ಹೇಳಿದ್ದು ಸತ್ಯವೋ ಸುಳ್ಳೋ ಎಂದು ಗೊತ್ತಿಲ್ಲ. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮಸೀದಿಯಲ್ಲಿ ಅಧ಼ಾನ್ ನೀಡುತ್ತಿದ್ದ ವ್ಯಕ್ತಿಯ ಸಂತಾನ ಪರಂಪರೆಗೆ ಸೇರಿದವರು ಎಂದು ಹೇಳಿದ್ದ ಕಾರಣದಿಂದ ನನ್ನ ಹೃದಯ ಅವರನ್ನು ಅಪ್ಪಿಕೊಳ್ಳಲು ಹಂಬಲಿಸುತ್ತಿತ್ತು. ಇಂದು ಹಝ್ರತ್ ಬಿಲಾಲ್‌ರ ಮಕ್ಕಳು ಎಲ್ಲಿರುವರು ಎಂದೂ ಅವರಿಗೆ ಮಕ್ಕಳು ಇರುವರೇ ಎಂದೂ ನಮಗೆ ಗೊತ್ತಿಲ್ಲ. ಅದೇ ರೀತಿಯಲ್ಲಿ ಅವರ ಮನೆ ಎಲ್ಲಿದೆ ಮತ್ತು ಅವರ ಸೊತ್ತುಗಳು ನಾವು ಕಾಣುತ್ತಿಲ್ಲ. ಆದರೆ ಅವರು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮಸೀದಿಯಲ್ಲಿ ನೀಡಿದ ಅಧ಼ಾನ್ ಈಗಲೂ ಬಾಕಿಯಿದೆ ಮತ್ತು ಬಾಕಿಯಾಗಿರುವುದು.
(ಮಸ್ತುರಾತ್ ಸೆ ಖೀತಾಬ್, ಅನ್ವಾರುಲ್ ಉಲೂಮ್, ಸಂಪುಟ–16, ಪುಟ–360, ಮೊಅಸ್ಸಸುಲ್ ರಿಸಾಲ 2014)

ಶಾಶ್ವತವಾಗಿರುವಂತಹ ಒಳಿತುಗಳು ಇವೇ ಆಗಿವೆ.

ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹುರಿಂದ 44 ಹದೀಸುಗಳು ವರದಿಯಾಗಿವೆ. ಬುಖ಼ಾರಿ ಮತ್ತು ಮುಸ್ಲಿಮಿನಲ್ಲಿ ನಾಲ್ಕು ವರದಿಗಳು ಬಂದಿವೆ.
(ಸೈರ್ ಅಲಾಮುಲ್ ನಬ್‌ಲಾ ಲಿಲ್ ಇಮಾಮುಝ್ಝುಹಬಿ, ಸಂಪುಟ–1, ಪುಟ–360, ಮೊಸಸುರ್‌ರಿಸಾಲ 2014)

ಒಂದು ವರದಿಯಲ್ಲಿ ಹೀಗೆ ಬಂದಿದೆ: ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: "ಮೂರು ವ್ಯಕ್ತಿಗಳನ್ನು ಸ್ವರ್ಗವು ಹಂಬಲದಿಂದ ಪ್ರತೀಕ್ಷಿಸುತ್ತಿದೆ. ಅವರು ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹು, ಹಝ್ರತ್ ಅಮ್ಮಾರ್ ರಝಿಯಲ್ಲಾಹು ಅನ್‌ಹು ಮತ್ತು ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹು ಆಗಿರುವರು." (ಸೈರ್ ಅಲಾಮುಲ್ ನಬ್‌ಲಾ ಲಿಲ್ ಇಮಾಮುಝ್ಝುಹಬಿ, ಸಂಪುಟ–1, ಪುಟ–360, ಮೊಸಸುರ್‌ರಿಸಾಲ 2014)

ಒಂದು ಸಲ ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹು ಹಝ್ರತ್ ಅಬೂಬಕ್ಕರ್ ರಝಿಯಲ್ಲಾಹು ಅನ್‌ಹುರ ಶ್ರೇಷ್ಠತೆಯನ್ನು ವಿವರಿಸುತ್ತಿದ್ದರು. ಅವರು ಹಝ್ರತ್ ಅಬೂಬಕ್ಕರ್ ರಝಿಯಲ್ಲಾಹು ಅನ್‌ಹುರ ಸದ್ಗುಣಗಳನ್ನು ವಿವರಿಸುತ್ತಾ ಅಲ್ಲಿ ಕುಳಿತಿದ್ದ ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹುರ ಕಡೆಗೆ ಬೊಟ್ಟುಮಾಡಿ ಹೇಳಿದರು: "ಇವರು ಬಿಲಾಲ್ ಆಗಿರುವರು, ಇವರು ನಮ್ಮ ನೇತಾರರಾಗಿರುವರು. ಮತ್ತು ಹಝ್ರತ್ ಅಬೂಬಕ್ಕರ್ ರಝಿಯಲ್ಲಾಹು ಅನ್‌ಹುರ ಸತ್ಕರ್ಮಗಳಲ್ಲಿ ಒಂದಾಗಿರುವರು. (ತಾರೀಖ್ ದಮಿಶ್ಖ್ ಅಲ್‌ಕಬೀರ್ ಲಿಇಬ್ನೆ ಅಸಾಕಿರ್, ಸಂಪುಟ–10, ಪುಟ–363, ದಾರ್ ಅಹ್ಯಾಉತ್ತುರಾಸುಲ್ ಅರಬಿ ಬೈರೂತ್ 2001) ಏಕೆಂದರೆ, ಹಝ್ರತ್ ಬಿಲಾಲ್‌ರನ್ನು ಹಝ್ರತ್ ಅಬೂಬಕ್ಕರ್ ರಝಿಯಲ್ಲಾಹು ಸ್ವತಂತ್ರಗೊಳಿಸಿದ್ದರು."

ಆಇಝ್ ಬಿನ್ ಅಮ್ರ್ ವರದಿ ಮಾಡುತ್ತಾರೆ: ಹಝ್ರತ್ ಸಲ್ಮಾನ್, ಹಝ್ರತ್ ಸುಹೈಬ್ ಮತ್ತು ಹಝ್ರತ್ ಬಿಲಾಲ್ ಒಂದು ಜನಕೂಟದಲ್ಲಿ ಇದ್ದಾಗ ಅಬೂ ಸುಫ್ಯಾನ್ ಅಲ್ಲಿಗೆ ಬಂದರು. ಜನರು ಹೇಳಿದರು: ಅಲ್ಲಾಹನಾಣೆ, ಅಲ್ಲಾಹನ ಖಡ್ಗ ಅಲ್ಲಾಹನ ಶತ್ರುವಿನ ಮೇಲೆ ಏಕೆ ಪ್ರಯೋಗಿಸಲಾಗಿಲ್ಲ. ಹಝುರತ್ ಅಬೂಬಕ್ಕರ್ ರಝಿಯಲ್ಲಾಹು ಅನ್‌ಹು ಹೇಳಿದರು: ಖುರೈಶಿನ ಆದರಣೀಯ ವ್ಯಕ್ತಿ ಮತ್ತು ಅವರ ಸರದಾರರ ಬಗ್ಗೆ ನೀವು ಹೀಗೆ ಹೇಳುತ್ತಿದ್ದೀರ? ಎಂದರೆ, ಸರಿಯಾಗಿ ನಾವು ಪ್ರತಿಕಾರ ಮಾಡಿಲ್ಲ ಎಂದು ಜನರು ಹೇಳಿದ ಮಾತುಗಳು ಹಝ್ರತ್ ಅಬೂಬಕ್ಕರ್ ರಝಿಯಲ್ಲಾಹು ಅನ್‌ಹುರಿಗೆ ಇಷ್ಟವಾಗಲಿಲ್ಲ. ಅನಂತರ ಹಝ್ರತ್ ಅಬೂಬಕ್ಕರ್ ರಝಿಯಲ್ಲಾಹು ಅನ್‌ಹು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸನ್ನಿಧಿಯಲ್ಲಿ ಹಾಜರಾಗಿ ನಡೆದ ಸಂಗತಿಯನ್ನು ಹೇಳಿದರು. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಹೇ ಅಬೂಬಕ್ಕರ್, ಬಹುಶಃ ನೀವು ಅವರನ್ನು ಬೇಸರಗೊಳಿಸಿರಬಹುದು. ನೀವು ಅವರನ್ನು ಬೇಸರಗೊಳಿಸಿದ್ದರೆ, ಖಂಡಿತವಾಗಿಯೂ ಅದು ಅಲ್ಲಾಹನ ಕೋಪಕ್ಕೆ ಕಾರಣವಾಗುವುದು." ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಜನರನ್ನು ತಡೆಯುವುದು ಅಥವಾ ಅದರ ಬಗ್ಗೆ ವಿಚಾರಿಸುವುದು ಎಂಬ ಪ್ರತೀಕ್ಷೆಯಿಂದ ಹಝ್ರತ್ ಅಬೂಬಕ್ಕರ್ ರಝಿಯಲ್ಲಾಹು ಅನ್‌ಹು ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸನ್ನಿಧಿಗೆ ಹೋಗಿದ್ದರು. ಆದರೆ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಅದರ ಬದಲಿಗೆ ಹಝ್ರತ್ ಅಬೂಬಕ್ಕರ್ ರಝಿಯಲ್ಲಾಹು ಅನ್‌ಹುರೊಡನೆ ಹೇಳುತ್ತಾರೆ: ನೀವು ಅವರನ್ನು ಬೇಸರಗೊಳಿಸಿದ್ದೀರಿ. ಹೇಗಿದ್ದರೂ ಹಝ್ರತ್ ಅಬೂಬಕ್ಕರ್ ರಝಿಯಲ್ಲಾಹು ಅನ್‌ಹುರ ಸ್ಥಾನವನ್ನು ನೋಡಿರಿ. ಅವರು ಬೇಗನೇ ಆ ಬಡ ಜನರ ಬಳಿಗೆ ಹೋಗಿ ಹೇಳಿದರು: ಎಲ್ಲೈ ನನ್ನ ಪ್ರಿಯ ಸಹೋದರರೇ, ನಾನು ನಿಮ್ಮನ್ನು ನಿರಾಶೆಗೊಳಿಸಿದ್ದೇನೆ. ಜನರು ಹೇಳಿದರು: ಇಲ್ಲ, ಇಲ್ಲ; ಹೇ ನಮ್ಮ ಸಹೋದರ, ಅಲ್ಲಾಹನು ನಿಮ್ಮನ್ನು ಕ್ಷಮಿಸಲಿ, ನಮ್ಮ ಕೋಪಕ್ಕೆ ಕಾರಣವಾದ ಯಾವುದೇ ಮಾತನ್ನು ನೀವು ಹೇಳಿಲ್ಲ.
(ಸಹೀಹ್ ಮುಸ್ಲಿಮ್, ಕಿತಾಬ್ ಫಝಾಎಲುಸ್ಸಹಾಬ, ಹದೀಸ್–2504)

ಹಝ್ರತ್ ಅಬೂ ಮೂಸಾ ವರದಿ ಮಾಡುತ್ತಾರೆ: ನಾನು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಮೀಪವಿದ್ದೆನು. ಆ ಸಮಯದಲ್ಲಿ ಅವರು ಮಕ್ಕ ಮತ್ತು ಮದೀನದ ಮಧ್ಯೆಯಿರುವ ಜಾರನಾ ಎಂಬ ಜಾಗದಲ್ಲಿ ಇದ್ದರು. ಹಝ್ರತ್ ಬಿಲಾಲ್ ಸಹ ಅವರೊಂದಿಗೆ ಇದ್ದರು. ಒಬ್ಬ ಮರಳುಗಾಡಿನ ಅರಬನು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸನ್ನಿಧಿಯಲ್ಲಿ ಹಾಜರಾಗಿ ಹೇಳಿದನು: ನೀವು ನನ್ನೊಡನೆ ಮಾಡಿದ ವಾಗ್ದಾನವನ್ನು ಈಡೇರಿಸುವುದಿಲ್ಲವೇ? ನಿನಗೆ ಸುವಾರ್ತೆ ಇದೆ ಎಂದು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು. ಹೀಗೆ ನೀವು ಬಹಳ ಸಲ ಹೇಳಿದ್ದೀರಿ ಎಂದು ಆ ಅರಬನು ಹೇಳಿದನು. ಆಗ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅಸಂತುಷ್ಟಗೊಂಡ ರೀತಿಯಲ್ಲಿ ಆ ಅರಬನ ಕಡೆಗೆ ನೋಡದೆ, ಹಝ್ರತ್ ಅಬೂ ಮೂಸಾ ಮತ್ತು ಹಝ್ರತ್ ಬಿಲಾಲ್‌ರ ಕಡೆಗೆ ನೋಡಿ ಹೀಗೆ ಹೇಳಿದರು: ಇವನು ಸುವಾರ್ತೆಯನ್ನು ರದ್ದುಮಾಡಿರುವನು. ನಾನು ಇವನಿಗೆ ಶುಭವಾರ್ತೆಯನ್ನು ನೀಡುತ್ತಿದ್ದೆನು ಆದರೆ ಇವನು ಅದನ್ನು ನಿಷೇಧಿಸಿದ್ದಾನೆ. ಆದ್ದರಿಂದ ನೀವಿಬ್ಬರು ಈ ಸುವಾರ್ತೆಯನ್ನು ಸ್ವೀಕರಿಸಿರಿ. ಯಾ ರಸೂಲುಲ್ಲಾಹ್, ನಾವು ಸ್ವೀಕರಿಸುತ್ತೇವೆ

ಎಂದು ಅವರಿಬ್ಬರೂ ಹೇಳಿದರು. ಅನಂತರ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನೀರಿರುವ ಒಂದು ಲೋಟವನ್ನು ತರಿಸಿದರು. ಅದರಿಂದ ತನ್ನ ಎರಡು ಕೈಗಳನ್ನು ಮತ್ತು ಮುಖವನ್ನು ತೊಳೆದರು ಹಾಗೂ ಬಾಯಿ ಮುಕ್ಕಳಿಸಿದರು. ಬಾಕಿಯಿರುವ ನೀರನ್ನು ಕುಡಿಯಲು ಮತ್ತು ಮುಖಗಳ ಮತ್ತು ಎದೆಯ ಮೇಲೆ ಹೊಯ್ದು ಸಂತೋಷಗೊಳ್ಳಲು ಅವರಿಬ್ಬರೊಡನೆ ಹೇಳಿದರು. ಹೀಗೆ ಅವರಿಬ್ಬರೂ ಆ ಲೋಟವನ್ನು ಪಡೆದು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಆದೇಶಿಸಿದಂತೆ ಮಾಡಿದರು. ಆಗ ಮರೆಯಾಗಿ ನಿಂತಿದ್ದ ಹಝ್ರತ್ ಉಮ್ಮೇ ಸಲ್ಮಾ ರಝಿಯಲ್ಲಾಹು ಅನ್‌ಹ ಅವರನ್ನು ಕರೆದು ಹೇಳಿದರು: ನಿಮ್ಮಿಬ್ಬರ ಪಾತ್ರೆಯಲ್ಲಿ ಸ್ವಲ್ಪ ನೀರನ್ನು ನಿಮ್ಮ ತಾಯಿಗೂ ಬಾಕಿಯಾಗಿರಿಸಿರಿ. ಎಂದರೆ ಸತ್ಯವಿಶ್ವಾಸಿಗಳ ತಾಯಿಗಾಗಿಯೂ ಅಲ್ಪ ಬಾಕಿಯಿರಿಸಿರಿ. ಹೀಗೆ ಅವರಿಬ್ಬರೂ ಹಝ್ರತ್ ಉಮ್ಮೇ ಸಲ್ಮಾರಿಗಾಗಿ ಸ್ವಲ್ಪ ನೀರನ್ನು ಬಾಕಿಯಿರಿಸಿದರು." (ಸಹೀಹ್ ಮುಸ್ಲಿಮ್ ಕಿತಾಬ್ ಫಝಾಎಲುಸ್ಸಹಾಬ, ಹದೀಸ್–2497)

ಹಝ್ರತ್ ಅಲಿ ರಝಿಯಲ್ಲಾಹು ವರದಿ ಮಾಡುತ್ತಾರೆ: "ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು – ಅಲ್ಲಾಹನು ಪ್ರತಿ ಪ್ರವಾದಿಗೆ ಏಳು ದೂತರನ್ನು ನೀಡಿದ್ದಾನೆ. ನನಗೆ ಅಲ್ಲಾಹನು 14 ದೂತರನ್ನು ನೀಡಿದ್ದಾನೆ. ಅವರು ಯಾರೆಲ್ಲ ಆಗಿರುವರು ಎಂದು ನಾವು ಕೇಳಿದೆವು. ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹು ಹೇಳಿದರು: ನನ್ನ ಎರಡು ಮಕ್ಕಳು, ಜಾಫರ್, ಹಂಝ, ಅಬೂಬಕ್ಕರ್, ಉಮರ್ ಮುಸ್‌ಅಬ್ ಬಿನ್ ಉಮೈರ್, ಬಿಲಾಲ್, ಸಲ್ಮಾನ್, ಮಿಖ್‌ದಾದ್, ಅಬೂಧರ್, ಅಮ್ಮಾರ್ ಮತ್ತು ಅಬ್ದುಲ್ಲಾಹ್ ಬಿನ್ ಮಸ್‌ಊದ್." (ಸನನ್ ಅತ್ತಿರ್‌ಮಿಝಿ, ಅಬ್ವಾಬುಲ್ ಮನಾಖಿಬ್, ಹದೀಸ್–3785)

ಹಝ್ರತ್ ಝೈದ್ ಬಿನ್ ಅರ್‌ಕಮ್ ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: "ಬಿಲಾಲ್ ಎಂತಹ ಉತ್ತಮ ಮನುಷ್ಯನಾಗಿರುವನು. ಅವರು ಎಲ್ಲ ಮುಅಧ್ಧಿನ್‌ರ ಎಂದರೆ ಅಧಾನ್ ನೀಡುವವರ ನೇತಾರರಾಗಿರುವರು. ಅವರನ್ನು ಅಧಾನ್ ನೀಡುವವರೇ ಹಿಂಬಾಲಿಸುವರು ಮತ್ತು ಖಿಯಾಮತ್ ದಿನದಂದು ಅತ್ಯಂತ ಉದ್ದ ಕುತ್ತಿಗೆಯವರು ಮುಅಧ್ಧಿನ್‌ಗಳಾಗಿವರು." (ಅಲ್ ವ್ಉಸ್ತ್ದ್ರಿಖ್ ಅಲಸ್ಸಹೀಹೈನ್ ಲಿಲ್‌ಹಾಕಿಮ್, ಹದೀಸ್–5244, ಸಂಪುಟ–3, ಪುಟ–322, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್ 2002)

ಹಝ್ರತ್ ಝೈದ್ ಬಿನ್ ಅರ್‌ಕಮ್ ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್ ಸಲ್ಲಲ್ಲಾಹ ಅಲೈಹಿ ವಸಲ್ಲಮರು ಹೇಳಿದರು: "ಬಿಲಾಲ್ ಎಂತಹ ಉತ್ತಮ ಮನುಷ್ಯನಾಗಿರುವನು. ಅವರು ಶಹೀದರ ಮತ್ತು ಮುಅಧ್ಧಿನ್‌ರ ಸರದಾರರಾಗಿರುವರು ಮತ್ತು ಖಿಯಾಮತ್ ದಿನದಂದು ಎಲ್ಲರಿಗಿಂತ ಉದ್ದ ಕುತ್ತಿಗೆಯವರು ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹು ಆಗಿರುವರು." ಎಂದರೆ ಬಹಳ ಆದರಣೀಯ ಸ್ಥಾನ ಅವರಿಗೆ ಲಭಿಸುವುದು.
(ಮಜ್‌ಮುಅಝ್ಝವಾಎದ್, ಕಿತಾಬುಲ್‌ಮನಾಖಿಬ್, ಸಂಪುಟ–9, ಪುಟ–363, ಹದೀಸ್–15636, ದಾರುಲ್‌ಕುತುಬ್ ಇಲ್‌ಮಿಯ ಬೈರೂಈತ್ 2001)

ಒಂದು ವರದಿಯಲ್ಲಿ ಹೀಗೆ ಬಂದಿದೆ: ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: "ಹಝ್ರತ್ ಬಿಲಾಲ್‌ರಿಗೆ ಸ್ವರ್ಗದ ಒಂಟೆಗಳಲ್ಲಿ ಒಂದು ಒಂಟೆಯನ್ನು ಕೊಡಲಾಗುವುದು. ಅವರು ಅದರಲ್ಲಿ ಸವಾರರಾಗುವರು." (ಸೈರ್ ಅಲಾಮುಲ್ ನಬ್‌ಲಾ ಲಿಲ್ ಇಮಾಮುಝ್ಝಹಬಿ, ಸಂಪುಟ–1, ಪುಟ–355, ಮೊಸಸುರ್ರಿಸಾಲ 2014)

ಹಝ್ರತ್ ಬಿಲಾಲ್‌ರ ಪತ್ನಿ ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನನ್ನ ಬಳಿಗೆ ಬಂದು ಸಲಾಂ ಹೇಳಿದರು. ಬಿಲಾಲ್ ಇಲ್ಲಿದ್ದಾರೆಯೇ ಎಂದು ಕೇಳಿದರು. ಮನೆಗೆ ತಲುಪಿಲ್ಲ ಎಂದು ನಾನು ಹೇಳಿದೆ. ನೀನು ಬಿಲಾಲ್‌ರೊಂದಿಗೆ ಕೋಪಗೊಂಡಿದ್ದೀಯ ಎಂದು ತೋರುತ್ತದೆ ಎಂದು ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು. ನಾನು ಹೇಳಿದೆ: ಅವರು ನನ್ನನ್ನು ಪ್ರೀತಿಸುತ್ತಾರೆ, ಪ್ರತಿಯೊಂದು ಮಾತನ್ನು ಅವರು ಹೇಳುವಾಗ ಇದು ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದ್ದು ಎಂದು ಹೇಳುತ್ತಾರೆ. ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಬಿಲಾಲ್ ರಝಿಯಲ್ಲಾಹುರ ಪತ್ನಿಯೊಡನೆ ಹೇಳಿದರು: "ನನ್ನಿಂದ ನಮಗೆ ಬಿಲಾಲ್ ತಲುಪಿಸುವ ಪ್ರತಿಯೊಂದು ಮಾತು ಖಂಡಿತವಾಗಿಯೂ ಸತ್ಯವಾಗಿರುವುದು. ಬಿಲಾಲ್ ನಿಮ್ಮೊಡನೆ ತಪ್ಪು ಮಾತನ್ನು ಹೇಳಲಾರರು. ಆದ್ದರಿಂದ ಬಿಲಾಲ್‌ರೊಡನೆ ಎಂದೂ ಅಸಂತುಷ್ಟಗೊಳ್ಳಬಾರದು. ಏಕೆಂದರೆ, ಬಿಲಾಲ್ ನಿಮ್ಮೊಡನೆ ಬೇಸರಗೊಂಡಿರುವ ತನಕ ನಿಮ್ಮ ಯಾವುದೇ ಕರ್ಮಗಳು ಸ್ವೀಕರಿಸಲ್ಪಡದು." (ತಾರೀಖ್ ದಮಿಶ್ಕ್ ಅಲ್‌ಕಬೀರ್ ಲಿಇಬ್ನೆ ಅಸಾಕರ್, ಸಂಪುಟ–10, ಪುಟ–356, ದಾರ್ ಅಹ್ಯಾಉತ್ತುರಾಸುಲ್ ಅರಬಿ ಬೈರೂತ್ 2001)

ಹಝ್ರತ್ ಅಬೂಹುರೈರ ರಝಿಯಲ್ಲಾಹು ಅನ್‌ಹು ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: "ಬಿಲಾಲ್‌ರ ಸ್ಥಿತಿ ಜೇನುನೊಣದ ಹಾಗೆ ಆಗಿದೆ. ಅದು ಸಿಹಿ ಹಣ್ಣುಗಳಿಂದ ಮತ್ತು ಕಹಿಯಾದ ಗಿಡಗಳಿಂದ ರಸವನ್ನು ಹೀರುತ್ತದೆ. ಆದರೆ ಜೇನುತುಪ್ಪ ತಯಾರಾಗುವಾಗ ಸಂಪೂರ್ಣವಾಗಿ ಸಿಹಿಯಾಗಿರುತ್ತದೆ.
(ಮಜ್‌ಮುಅಝ್ಝವಾಎದ್, ಕಿತಾಬುಲ್ ಮನಾಖಿಬ್, ಸಂಪುಟ–9, ಪುಟ–364, ಹದೀಸ್–15639, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2001)

ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹುರ ಪತ್ನಿ ಹೇಳುತ್ತಾರೆ: ಹಝ್ರತ್ ಬಿಲಾಲ್ ಹಾಸಿಗೆಯಲ್ಲಿ ಮಲಗಲು ಹೋಗುವಾಗ ಹೀಗೆ ದುಆ ಮಾಡುತ್ತಿದ್ದರು – **ಅಲ್ಲಾಹುಮ್ಮ ತಜಾವುಝ್ ಅನಿಸ್ಸಯ್ಯಿಆತಿ ವ ಅಹ್‌ಝುರ್‌ನೀ ಬಲ್‌ಲಾತಿ** – "ಹೇ ಅಲ್ಲಾಹ್, ನೀನು ನನ್ನ ತಪ್ಪುಗಳನ್ನು ಕ್ಷಮಿಸು ಮತ್ತು ನನ್ನ ಕೊರತೆಗಳನ್ನು ನಾನೊಬ್ಬ ದುರ್ಬಲನೆಂದು ತಿಳಿದುಕೊಂಡು ಕಡೆಗಣಿಸು. (ಮೊಜಮುಲ್ ಕಬೀರ್ ಲಿಲ್‌ತಿಬ್ರಾನಿ ಬಾಬ್ ಬಿಲಾಲ್ ಬಿನ್ ರಬಾಹ್, ಸಂಪುಟ–01, ಪುಟ–337, ಹದೀಸ್–1009, ದಾರ್ ಅಹ್ಯಾಉತ್ತುರಾಸುಲ್ ಅರಬಿ, 2002)

ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹು ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: "ಹೇ ಬಿಲಾಲ್, ಬಡತನದಲ್ಲಿ ಮರಣಹೊಂದು; ಧನಿಕನಾಗಿ ಮರಣಹೊಂದಬೇಡ. ಇದು ಹೇಗೆ ಸಾಧ್ಯ, ನಾನು ಹೇಗೆ ಬಡತನದಲ್ಲಿ ಸಾಯುವುದು ಮತ್ತು ಶ್ರೀಮಂತಿಕೆಯಲ್ಲಿ ಮರಣಹೊಂದದಿರುವುದು ಎಂದು ತಿಳಿಯುತ್ತಿಲ್ಲ ಎಂದು ನಾನು ಹೇಳಿದೆ. ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ನಿನಗೆ ಸಿಗುವ ಸಂಪತ್ತನ್ನು ಶೇಖರಿಸಿ ಇಡಬೇಡ, ನಿನ್ನೊಡನೆ ಯಾರಾದರೂ ಬೇಡಿದರೆ, ಕೊಡದೇ ಇರಬೇಡ. ಹೀಗೆ ಮಾಡಲು ಸಾಧ್ಯವಾಗದಿದ್ದರೆ ಏನು ಮಾಡಬೇಕೆಂದು ನಾನು ಕೇಳಿದೆ. ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಹೀಗೆಯೇ ಮಾಡಬೇಕು, ಇಲ್ಲದಿದ್ದರೆ ನರಕ ನಿನ್ನ ವಾಸಸ್ಥಳವಾಗುವುದು. (ಮೊಜಮುಲ್ ಕಬೀರ್ ಲಿಲ್‌ತಿಬ್ರಾನಿ ಬಾಬ್ ಬಿಲಾಲ್ ಬಿನ್ ರಬಾಹ್, ಸಂಪುಟ–01, ಪುಟ–337, ಹದೀಸ್–1009, ದಾರ್ ಅಹ್ಯಾಉತ್ತುರಾಸುಲ್ ಅರಬಿ, 2002) ಎಂದರೆ ಬೇಡುವ ಯಾರನ್ನೂ ಹಿಯಾಳಿಸಬಾರದು. ಸಂಪತ್ತನ್ನು ಶೇಖರಿಸುವುದು ಮಾತ್ರವಲ್ಲ, ಅದನ್ನು ದಾನ ಸಹ ಮಾಡಬೇಕು."

ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹುರ ಖಿಲಾಫತ್ ಕಾಲದಲ್ಲಿ, ಹಿಜರಿ ಇಪ್ಪತ್ತರಲ್ಲಿ ಸಿರಿಯಾದ ಡಮಸ್ಕಸ್ ಪಟ್ಟಣದಲ್ಲಿ ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹು ನಿಧನರಾದರು. ಕೆಲವರು ಅವರು ಹಲಬ್ ಪಟ್ಟಣದಲ್ಲಿ ಮರಣಹೊಂದಿದ್ದರು ಎಂದು ಅಭಿಪ್ರಾಯಪಟ್ಟಿದ್ದಾರೆ. ಆ ಸಮಯದಲ್ಲಿ ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹುರ ವಯಸ್ಸು ಅರುವತ್ತಕ್ಕೆ ಮೇಲಾಗಿತ್ತು. ಹಿಜರಿ 18ಕ್ಕೆ ನಿಧನರಾದರು ಎಂದು ಸಹ ಕೆಲವರು ಅಭಿಪ್ರಾಯಪಟ್ಟಿದ್ದಾರೆ. ಅವರನ್ನು ದಮಸ್ಕಸಿನ ಖಬರ್‌ಸ್ತಾನದಲ್ಲಿ ಬಾಬುಸ್ಸಗೀರಿನ ಸಮೀಪ ದಫನ್ ಮಾಡಲಾಯಿತ್ತು. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್ ಭಾಗ–3, ಪುಟ–180, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2017) (ತಾರೀಖ್ ಅದ್ದಮಿಶ್ಕ್ ಲಿಇಬ್ನೆ ಅಸಾಕರ್, ಸಂಪುಟ–10, ಪುಟ–335, ದಾರ್ ಅಹ್ಯಾಉತ್ತುರಾಸುಲ್ ಅರಬಿ ಬೈರೂತ್ 2001)

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳಿದ ಕೆಲವು ಮಾತುಗಳನ್ನು ಹಿಂದೆ ಸಹ ಹೇಳಿದ್ದೆ. ಆದರೆ ವಿಷಯಕ್ಕೆ ಸಂಬಂಧಪಟ್ಟ ಒಂದೆರಡು ಮಾತುಗಳನ್ನು ಪುನಃ ಹೇಳುತ್ತೇನೆ. ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹುರ ಸ್ಥಾನ ಮತ್ತು ಪದವಿಯನ್ನು ವಿವರಿಸುತ್ತಾ ಅವರು ಹೇಳುತ್ತಾರೆ:

"ಹಝ್ರತ್ ಬಿಲಾಲ್ ಇತಿಯೋಪಿಯದವರಾಗಿದ್ದರು. ಅರಬಿ ಭಾಷೆ ಸರಿಯಾಗಿ ತಿಳಿದಿರಲಿಲ್ಲ. ಅರಬಿ ಭಾಷೆಯಲ್ಲಿ ಮಾತನಾಡುವಾಗ ಅನೇಕ ತಪ್ಪುಗಳನ್ನು ಮಾಡುತ್ತಿದ್ದರು. ಉದಾಹರಣೆಗೆ ಹಬ್ಶಿಯ ಜನರು ಶೀನ್ ಎಂಬುದನ್ನು ಸೀನ್ ಎಂದು ಹೇಳುತ್ತಿದ್ದರು. ಹೀಗೆ ಹಝ್ರತ್ ಬಿಲಾಲ್ ಅಧಾನ್ ನೀಡುವಾಗ ಅಶ್‌ಹದು ಎಂಬಲ್ಲಿ ಅಸ್‌ಹದು ಎಂದು ಹೇಳುತ್ತಿದ್ದರು. ಅರೇಬಿಯರು ಇದನ್ನು ಕೇಳಿ ನಗುತ್ತಿದ್ದರು. ಏಕೆಂದರೆ, ಅವರೊಳಗೆ ಸ್ವಂತ ಕೋಮಿನ ಬಗ್ಗೆ ದೊಡ್ಡಸ್ತಿಕೆಯ ಭಾವನೆಯಿತ್ತು. ಸತ್ಯದಲ್ಲಿ ಇತರ ಭಾಷೆಗಳ ಕೆಲವು ಪದಗಳನ್ನು ಅವರಿಗೆ ಸ್ವತಃ ಉಚ್ಚರಿಸಲು ಸಾಧ್ಯವಾಗುತ್ತಿರಲಿಲ್ಲ. ಉದಾಹರಣೆಗೆ ಅರೇಬಿಯರಿಗೆ ರೊಟ್ಟಿಯನ್ನು ರೊಟ್ಟಿಯೆಂದು ಹೇಳಲು ಗೊತ್ತಿಲ್ಲ. ಅದನ್ನು ಅವರು ರೊತ್ತಿ ಎಂದು ಅವರು ಹೇಳುವರು. 'ಟ' ಎಂಬ ಅಕ್ಷರದ ಬದಲಿಗೆ ಅವರು 'ತ' ಎಂದು ಹೇಳುತ್ತಾರೆ. ಅದೇ ರೀತಿಯಲ್ಲಿ 'ಚ' ಎಂಬುವುದಕ್ಕೆ ಬದಲಿಗೆ 'ಜ' ಎಂದು ಹೇಳುತ್ತಾರೆ. ಅವರಿಗೆ 'ಚ' ಎಂಬ ಅಕ್ಷರ ಉಚ್ಚರಿಸಲು ಸಾಧ್ಯವಿಲ್ಲ. ಯಾವ ರೀತಿಯಲ್ಲಿ ಅರೇಬಿಯರಲ್ಲದ ಜನರಿಗೆ ಅರಬಿ ಭಾಷೆಯ

ಕೆಲವು ಪದಗಳು ಉಚ್ಚರಿಸಲು ಸಾಧ್ಯವಿಲ್ಲವೋ ಅದೇ ರೀತಿಯಲ್ಲಿ ಅರೇಬಿಯರಿಗೆ ಇತರ ಭಾಷೆಗಳ ಕೆಲವು ಪದಗಳನ್ನು ಉಚ್ಚರಿಸಲು ಸಾಧ್ಯವಿರಲಿಲ್ಲ. ನಮಗೂ ಇತರ ಭಾಷೆಯ ಕೆಲವು ಪದಗಳನ್ನು ಉಚ್ಚರಿಸಲು ಸಾಧ್ಯವಾಗುತ್ತಿಲ್ಲ ಎಂದು ಕೋಮಿನ ದೊಡ್ಡಸ್ತಿಕೆಯ ಮತ್ತಿನ ಕಾರಣದಿಂದ ಯೋಚಿಸುತ್ತಿರಲಿಲ್ಲ. ಹಝ್ರತ್ ಬಿಲಾಲ್ ರಝಿಯಲ್ಲಾಹು ಅಸ್‌ಹದು ಎಂದು ಹೇಳುವಾಗ ಇತರ ಜನರು ನಗುತ್ತಿರುವುದನ್ನು ಕಂಡಾಗ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ನೀವು ಬಿಲಾಲ್‌ರ ಅಧ಼ಾನ್ ಕೇಳಿ ನಗುತ್ತೀರಿ, ಸತ್ಯದಲ್ಲಿ ಅವರು ಅಧ಼ಾನ್ ಕೊಡುವಾಗ ಅಲ್ಲಾಹನು ಅರ್ಶಿನಲ್ಲಿ ಸಂತೋಷಗೊಳ್ಳುತ್ತಾನೆ. ನಿಮ್ಮ ಅಶ್‌ಹದುಗಿಂತ ಅವರ ಅಸ್‌ಹದು ಅಲ್ಲಾಹನಗೆ ಹೆಚ್ಚು ಇಷ್ಟ. ಬಿಲಾಲ್ ಹಬ್ಶಿ ಆಗಿದ್ದರು. ಆ ಕಾಲದಲ್ಲಿ ಹಬ್ಶಿಯರನ್ನು ಗುಲಾಮರನ್ನಾಗಿ ಮಾಡುಲಾಗುತ್ತಿತ್ತು. ಕಳೆದ ಶತಮಾನಗಳಲ್ಲಿಯೂ ಅವರನ್ನು ಗುಲಾಮರನ್ನಾಗಿ ಮಾಡಲಾಗುತ್ತಿತ್ತು. ಈಗಲೂ ಮಾಡಲಾಗುತ್ತಿದೆ. ಆದರೆ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಇತರ ಸಮುದಾಯದವರನ್ನು ನಿಂದಿತರು ಮತ್ತು ನೀಚರು ಎಂದು ಭಾವಿಸುವ ಜನರ ಹಾಗೆ ಆಗಿರಲಿಲ್ಲ. ಅವರ ಪ್ರಕಾರ ಎಲ್ಲ ಸಮುದಾಯದವರು ಒಂದೇ ರೀತಿಯಲ್ಲಿ ಅಲ್ಲಾಹನ ಸೃಷ್ಟಿಗಳಾಗಿದ್ದಾರೆ. ಅವರಿಗೆ ಅರೇಬಿಯರೊಂದಿಗೆ ಇದ್ದ ಅದೇ ಪ್ರೀತಿ ನೀಗ್ರೋ ಮತ್ತು ಗ್ರೀಕರೊಂದಿಗೆ ಇತ್ತು. ಯಾವುದೇ ವ್ಯತ್ಯಾಸವಿರಲಿಲ್ಲ. ಇದೇ ಪ್ರೀತಿಯ ಕಾರಣದಿಂದ ಇತರ ಸಮುದಾಯದವರ ಹೃದಯದಲ್ಲಿ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮೇಲೆ ಅಪಾರವಾದ ಪ್ರೇಮವಿತ್ತು. ಇದನ್ನು ತೀಕ್ಷ್ಣಗ್ರಹಿಕೆಯಿಲ್ಲದ, ಬುದ್ಧಿವಂತಿಕೆ ಇಲ್ಲದ, ನಿಷ್ಠೆ ಮತ್ತು ಪ್ರೇಮದ ರಹಸ್ಯಗಳನ್ನು ತಿಳಿಯದ ಅರಬಿನ ಹಲವರು ಮನವರಿಕೆ ಮಾಡುತ್ತಿರಲಿಲ್ಲ. ಇದು ಹೇಗೆ ಸಾಧ್ಯವೆಂದು ಅವರಿಗೆ ಗೊತ್ತಾಗುತ್ತಿರಲಿಲ್ಲ.

ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮಕ್ಕದಲ್ಲಿ ಜನಿಸಿದ್ದರು. ಅರಬ್ ಸಮುದಾಯದಲ್ಲಿ ಜನಿಸಿದ್ದರು. ಅರಬರಲ್ಲಿಯೂ ಖುರೈಶ್ ಗೋತ್ರದಲ್ಲಿ ಹುಟ್ಟಿದ್ದರು. ಖುರೈಶಿ ಗೋತ್ರದವರು ಇತರ ಅರಬ್ ಸಮುದಾಯಗಳನ್ನು ನೀಚರೂ ನಿಂದ್ಯರೂ ಎಂದು ಭಾವಿಸುತ್ತಿದ್ದರು. ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಗೋತ್ರ ಅತ್ಯಂತ ಶ್ರೇಷ್ಠ ಗೋತ್ರವಾಗಿತ್ತು. ಅವರಿಗ ನೀಗ್ರೋದವರೊಡನೆ ಏನು ಸಂಬಂಧವೆಂದು ಜನರು ಭಾವಿಸುತ್ತಿದ್ದರು. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಯಾವುದಾದರೂ ಸಮುದಾಯ ಅಥವಾ ಗೋತ್ರದವರಿಗೆ ಪ್ರೀತಿ ಇರಬೇಕಿದ್ದರೆ ಅದು ಖುರೈಶಿಗಳಿಗೆ ಇರಬೇಕಿತ್ತು. ಬನೂ ಹಾಶಿಮ್ ಗೋತ್ರಕ್ಕೆ ಇರಬೇಕಿತ್ತು. ಅವರೊಂದಿಗೆ ಖುರೈಶಿಗಳಿಗೆ ಪ್ರೀತಿ ಇರಬೇಕಿತ್ತು. ಅರೇಬಿಯದ ಜನರಿಗೆ ಇರಬೇಕಿತ್ತು. ಏಕೆಂದರೆ ಅದು ಅವರದ್ದೇ ಸಮುದಾಯವಾಗಿತ್ತು. ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸೈನ್ಯಗಳು ಇತರ ಸಮುದಾಯಗಳ ಆಡಳಿತಗಳನ್ನು ನಾಶಮಾಡಿತ್ತು. ಅವುಗಳ ಸಾಮುದಾಯಿಕ ನಾಯಕತ್ವವನ್ನು ಇಸ್ಲಾಮಿನ ಆಡಳಿತ ನಾಶಮಾಡಿತ್ತು. ಹೀಗಿರುವಾಗ ಇತರ ಸಮುದಾಯಗಳ ಹೃದಯದಲ್ಲಿ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮೇಲೆ ಪ್ರೀತಿ ಉಂಟಾಗಲು ಹೇಗೆ ಸಾಧ್ಯ. ಅವರೊಂದಿಗೆ ಯುದ್ಧಗಳು ನಡೆದಿದ್ದುವು, ಅವರನ್ನು ಸೋಲಿಸಲಾಗಿತ್ತು, ಅವರ ಆಡಳಿತವನ್ನು ಕೊನೆಗೊಳಿಸಲಾಗಿತ್ತು. ಹೀಗಿದ್ದೂ ಅವರ ಹೃದಯದಲ್ಲಿ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗ ಒಂದು ಪ್ರೇಮವಿತ್ತು. ಅದು ಹೇಗೆ ಉಂಟಾಯಿತು. ಅವರಿಗೆ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ವೈರವಿರಬೇಕಿತ್ತು. ಇದಕ್ಕಾಗಿ ನಾವು ಮೊದಲು ಹಝ್ರತ್ ಈಸಾ ಮಸೀಹರೊಂದಿಗೆ ಅವರ ಸಮುದಾಯಕ್ಕೆ ಇದ್ದ ಪ್ರೀತಿಯ ಬಗ್ಗೆ ಅವಲೋಕಿಸೋಣ. ಅವರ ಶಿಷ್ಯರಿಗೆ ಅವರ ಒಡೆಯನೊಂದಿಗೆ ಇದ್ದ ಪ್ರೇಮ ಹೇಗಿತ್ತು ಎಂದು ನೋಡೋಣ. ಹಝ್ರತ್ ಈಸಾ ಮಸೀಹರನ್ನು ಸೆರೆಹಿಡಿಯಲಾದಾಗ, ಅವರ ವಿಶಿಷ್ಟ ಶಿಷ್ಯರಾದ ಪೇತ್ರ ಅವರ ಹಿಂದೆ ಹಿಂದೆ ಹೋಗುತ್ತಿರುವುದನ್ನು ಪೋಲೀಸರು ಕಂಡು ಅವರೊಡನೆ ಸಂಶಯದಿಂದ ಕೇಳಿದರು: ನೀನು ಅವರ ಹಿಂದೆ ಹಿಂದೆ ಏಕೆ ಹೋಗುತ್ತಿರುವಿಯಾ, ನೀನು ಸಹ ಅವರೊಂದಿಗೆ ಸೇರಿದ ವ್ಯಕ್ತಿಯೆಂದು ತೋರುತ್ತದೆ. ಪೇತ್ರ ತಕ್ಷಣವೇ ಭಯದಿಂದ ಹೇಳಿದರು: ನಾನು ಅವರ ಶಿಷ್ಯನಲ್ಲ, ನಾನಂತು ಅವರನ್ನು ಶಪಿಸುತ್ತಿರುವೆನು. ಹೀಗೆ ಪೇತ್ರ ಈಸಾ ಮಸೀಹರನ್ನು ನಿರಾಕರಿಸಿದರಲ್ಲದೆ, ಅವರ ಮೇಲೆ ಶಾಪ ಪ್ರಾರ್ಥನೆ ಸಹ ಮಾಡಿದ್ದರು. ಈಸಾ ಮಸೀಹರ ಹವಾರಿಗಳು ಈಸಾ ಮಸೀಹರನ್ನು ಪ್ರೀತಿಸುತ್ತಿದ್ದರು ಎಂಬುದರಲ್ಲಿ ಸಂಶಯವಿಲ್ಲ. ನಂತರ ಕಾಲದಲ್ಲಿ ಪೇತ್ರನನ್ನು ಸಹ ರೋಮಿನಲ್ಲಿ ಶಿಲುಬೆಯ ಮೇಲೆ ನೇತು ಹಾಕಲಾಗಿತ್ತು. ಅವರು ಬಹಳ ಧೈರ್ಯದಿಂದ ಮರಣವನ್ನು ಸ್ವೀಕರಿಸಿದ್ದರು. ನಂತರ ಕಾಲದಲ್ಲಿ ಹಝ್ರತ್ ಈಸಾ ಮಸೀಹರೊಡನೆ ಇದ್ದ ತನ್ನ ಪ್ರೀತಿ ಮತ್ತು ವಿಧೇಯತ್ವವನ್ನು ನಿರಾಕರಿಸಿರಲಿಲ್ಲ. ಆದರೆ ಹಝ್ರತ್ ಈಸಾ ಮಸೀಹರನ್ನು ಶಿಲುಬೆಗೇರಿಸಲಾದ ಕಾಲದಲ್ಲಿ ಅವರ ವಿಶ್ವಾಸ ಅಷ್ಟು ದೃಢವಾಗಿರಲಿಲ್ಲ. ಆಗ ಅವರು ಮೂರ್ನಾಲ್ಕು ಏಟಿಗೆ ಹೆದರಿದರು. ಆದರೆ ನಂತರ ಕಾಲದಲ್ಲಿ ಶಿಲುಬೆಯ ಮರಣವನ್ನು ಸಹ ಪೇತ್ರ ಸಂತೋಷದಿಂದ ಸ್ವೀಕರಿಸಿದ್ದರು. ಹೇಗಿದ್ದರೂ, ಹಝ್ರತ್ ಈಸಾ ಮಸೀಹರೊಂದಿಗೆ ಅವರ ಸಮುದಾಯಕ್ಕೆ ಇದ್ದ ಪ್ರೇಮದ ಒಂದು ದೃಶ್ಯವಾಗಿತ್ತು ಇದು.

ಈಸಾ ಮಸೀಹರ ಸಮುದಾಯಕ್ಕೆ ಹೋಲಿಸಿ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕಾಲದಲ್ಲಿದ್ದ ಗುಲಾಮರನ್ನು ನೋಡೋಣ. ಅವರು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ನಂಬಿದ ನಂತರ ಅವರದ್ದೇ ಆಗಿ ಬಿಟ್ಟರು. ಎಲ್ಲವೂ ಸಮರ್ಪಿಸಿದ್ದರು. ನೀಗ್ರೋ ಗುಲಾಮರಾದ ಬಿಲಾಲ್‌ರೊಂದಿಗೆ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಇದ್ದ ಪ್ರೀತಿಯ ಪ್ರಭಾವ ಹಝ್ರತ್ ಬಿಲಾಲ್‌ರ ಮೇಲೆ ಏನಾಗಿತ್ತು ಎಂದು ನಾವು ನೋಡಿದ್ದೇವೆ. ಕೆಲವು ಜನರಿಗೆ ಬಾಹ್ಯವಾಗಿ ತಮ್ಮ ಪ್ರೇಮಿಯೊಂದಿಗೆ ಆಳವಾದ ಪ್ರೀತಿಯಿರುತ್ತದೆ. ಆದರೆ ಸತ್ಯದಲ್ಲಿ ಅವರ ಪ್ರೇಮ ಒಂದು ಚಿಕ್ಕ ವಲಯಕ್ಕೆ ಪರಿಮಿತವಾಗಿರುತ್ತದೆ. ಖುರೈಶಿಗಳು ಮಾತ್ರವಲ್ಲ, ಅರೇಬಿಯದ ಎಲ್ಲರೂ ದ್ವೇಷದಿಂದ ಕಾಣುತ್ತಿದ್ದ ಹಝ್ರತ್ ಬಿಲಾಲ್‌ರನ್ನು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸಾಧಾರಣ ರೀತಿಯಲ್ಲಿ ವಿಶಾಲ ಹೃದಯದಿಂದ ವರ್ತಿಸಬೇಕು ಎಂಬ ಕಾರಣದಿಂದ ಪ್ರೀತಿಸಿದ್ದರೆ ಅಥವಾ ನೈಜ ಪ್ರೇಮದ ಪ್ರಕಟನೆಯಾಗಿತ್ತೆ ಎಂದು ನೋಡಬೇಕಾಗಿದೆ. ಅದು ತೋರಿಕೆಯ ಪ್ರೀತಿಯಾಗಿತ್ತೇ ಅಥವಾ ಯಥಾರ್ಥ ಪ್ರೀತಿಯಾಗಿತ್ತೇ ಎಂದು ಹಝ್ರತ್ ಬಿಲಾಲ್‌ರಿಗೆ ಮಾತ್ರ ಅವಲೋಕಿಸಲು ಸಾಧ್ಯ. ನಮಗೆ ಅದನ್ನು ಅವಲೋಕಿಸಲು ಸಾಧ್ಯವಿಲ್ಲ. ಅದನ್ನು ತಿಳಿಯಲು ಹಝ್ರತ್ ಬಿಲಾಲ್‌ರ ಬಳಿಗೆ ಹೋಗಬೇಕಾಗುವುದು. ಏಕೆಂದರೆ ಅವರೇ ಅದನ್ನು ಸರಿಯಾಗಿ ಅವಲೋಕಿಸಬಹುದಾಗಿದೆ. ಈ ಘಟನೆ ನಡೆದು ಹದಿಮೂರು ಶತಮಾನಗಳು ಕಳೆದಿದೆ. ನಾವು ಅದರ ಬಗ್ಗೆ ಹೇಗೆ ಅವಲೋಕಿಸುವುದು? ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸ್ನೇಹವನ್ನು ಹೇಗೆ ಮನವರಿಕೆ ಮಾಡಿದ್ದರು ಎಂದು ನೋಡಬೇಕಾಗಿದೆ. ನಾನು ಇದರಿಂದ ಏನು ಮನವರಿಕೆ ಮಾಡಿದೆ ಅಥವಾ ಹಿಂದಿನ ಶತಮಾನದ ಜನರು ಏನು ಮನವರಿಕೆ ಮಾಡಿದ್ದರು ಎಂಬುದಲ್ಲ ಇಲ್ಲಿರುವ ಸವಾಲು. ಅದಕ್ಕೂ ಮುಂಚಿನ ಶತಮಾನದ ಜನರು ಏನು ಮನವರಿಕೆ ಮಾಡಿದ್ದರು ಅಥವಾ ಸಹಾಬಿಯರು ಏನು ಮನವರಿಕೆ ಮಾಡಿದ್ದರು ಎಂಬುವುದ ಸಹ ಇಲ್ಲಿರುವ ಸವಾಲು ಅಲ್ಲ. ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹು ಆ ಪ್ರೇಮದ ಪ್ರಕಟಣೆಯಿಂದ ಏನು ಮನವರಿಕೆ ಮಾಡಿದ್ದರು ಎಂಬುದು ಮಾತ್ರವಾಗಿದೆ ನೋಡಬೇಕಾದ ಸಂಗತಿ. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಆ ಸಣ್ಣ ವಾಕ್ಯದ ಬಗ್ಗೆ ನೋಡಬೇಕಾಗಿದೆ. ಅವರು ಜನರೊಡನೆ ಹೇಳಿದ್ದರು: ನೀವು ಅಸ್‌ಹದು ಎಂದು ಹಝ್ರತ್ ಬಿಲಾಲ್ ಹೇಳುವಾಗ ನಗುತ್ತೀರಿ. ಆದರೆ ಅವರ ಅಧ಼ಾನ್ ಆಲಿಸಿ ಅಲ್ಲಾಹನು ಅರ್ಶ್‌ನಲ್ಲಿ ಸಂತೋಷಗೊಳ್ಳುತ್ತಾನೆ. ಅವನು ನಿಮ್ಮ ಅಶ್‌ಹದುಗಿಂತ ಹಝ್ರತ್ ಬಿಲಾಲ್‌ರ ಅಸ್‌ಹದಿಗೆ ಹೆಚ್ಚಿನ ಬೆಲೆಯನ್ನು ಕೊಡುತ್ತಾನೆ. ಈ ವಾಕ್ಯಗಳು ಕೇವಲ ಹಝ್ರತ್ ಬಿಲಾಲ್‌ರನ್ನು ತೃಪ್ತಿಪಡಿಸಲು ಕ್ಷಣಿಕವಾಗಿ ಹೇಳಿದ ಮಾತೇ ಅಥವಾ ಗಾಢವಾದ ಪ್ರೀತಿಯ ಕಾರಣದಿಂದ ಆಗಿತ್ತೇ ಎಂದು ನೋಡಬೇಕಾಗಿದೆ. ಈ ವಾಕ್ಯದಿಂದ ಬಿಲಾಲ್ ಏನನ್ನು ಮನವರಿಕೆ ಮಾಡಿದ್ದರು ಎಂದು ನೋಡಬೇಕಾಗಿದೆ. ನಾನು ಅನ್ಯ ಸಮುದಾಯದವನಾಗಿದ್ದರೂ, ಮನುಷ್ಯತ್ವದ ಪರಿಮಿತಿಯಿಂದ ಹೊರಗೆ ಇರುವರೆಂದು ಭಾವಿಸಲ್ಪಡುವ ಸಮುದಾಯದವನಾಗಿದ್ದರೂ ಗುಲಾಮರನ್ನಾಗಿ ಮಾಡಲ್ಪಡುವ ಸಮುದಾಯದವನಾಗಿದ್ದರೂ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ನನ್ನ ಮೇಲೆ ಪ್ರೀತಿ ಮತ್ತು ಪ್ರೇಮವಿತ್ತು ಎಂದು ಹಝ್ರತ್ ಬಿಲಾಲ್ ಮನವರಿಕೆ ಮಾಡಿದ್ದರು. ನಾವು ಈ ಘಟನೆಯ ಸ್ವಲ್ಪ ನಂತರದ ಕಾಲಕ್ಕೆ ಹೋಗೋಣ ನನ್ನ ಮರಣ ಸರ್ವಲೋಕಗಳ ಪ್ರಭುವಾದ ಅಲ್ಲಾಹನಿಗಾಗಿದೆ ಎಂದು ಹೇಳಿದ್ದ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಿಧನರಾಗುತ್ತಾರೆ. ಅದರ ನಂತರ ಹೊಸ ಆಡಳಿತಗಳು ಬರುತ್ತವೆ. ಹೊಸ ವ್ಯಕ್ತಿಗಳು ಬರುತ್ತಾರೆ. ಹೊಸ ಬದಲಾವಣೆಗಳು ಉಂಟಾಗುತ್ತವೆ. ಕಾಲ ಕಳೆದಂತೆ ಹೊಸ ಆಡಳಿತಗಳು ಮತ್ತು ಹೊಸ ಪರಿವರ್ತನೆಗಳು ಉಂಟಾಗುತ್ತವೆ. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮರಣದ ನಂತರ ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹು ಸಿರಿಯಾಗೆ ಹೋಗುತ್ತಾರೆ. ಅಲ್ಲಿ ಡಮಸ್ಕಸ್ ಪಟ್ಟಣದಲ್ಲಿ ನೆಲೆಸುತ್ತಾರೆ. ಡಮಸ್ಕಸಿನಲ್ಲಿ ಒಂದು ದಿನ ಕೆಲವು ಜನರು ಒಟ್ಟುಗೂಡಿದರು. ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕಾಲಘಟ್ಟದಲ್ಲಿ ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹು ಅಧ಼ಾನ್ ನೀಡುತ್ತಿದ್ದರು ಎಂದು ಆ ಜನರು ಹೇಳುತ್ತಾರೆ. ಹಝ್ರತ್ ಬಿಲಾಲ್ ಪುನಃ ಅಧ಼ಾನ್ ನೀಡಬೇಕೆಂದು ನಮಗೆ ಬಯಕೆಯಿದೆ ಎಂದು ಅವರು ಹಝ್ರತ್ ಬಿಲಾಲ್‌ರೊಡನೆ ಹೇಳಿದರು. ನನಗೆ ಈಗ ಅಧ಼ಾನ್ ನೀಡಲು ಸಾಧ್ಯವಿಲ್ಲವೆಂದು ಹೇಳಿ ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹು ನಿರಾಕರಿಸಿದರು. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನಿಧನದ ನಂತರ

ನಾನು ಅಧ಼ಾನ್ ನೀಡುವುದಿಲ್ಲ ಎಂದು ಹಝ್ರತ್ ಬಿಲಾಲ್ ಹೇಳಿದರು. ಏಕೆಂದರೆ, ನಾನು ಅಧ಼ಾನ್ ನೀಡಲು ಬಯಸುವಾಗಲೆಲ್ಲ ನನಗೆ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಅನುಗ್ರಹೀತ ಕಾಲಘಟ್ಟ ನೆನಪಿಗೆ ಬಂದು ನಾನು ವಿಕಾರಭರಿತನಾಗುತ್ತೇನೆ. ಆದ್ದರಿಂದ ಅಧ಼ಾನ್ ನೀಡಲು ನನಗೆ ಸಾಧ್ಯವಲ್ಲ. ಇದು ನನಗೆ ಸಹಿಸಲು ಸಾಧ್ಯವಿಲ್ಲದ ಸಂಗತಿಯಾಗಿದೆ. ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹು ಸಹ ಆ ದಿನಗಳಲ್ಲಿ ಡಮಸ್ಕಸಿಗೆ ಬಂದಿದ್ದರು. ಅಲ್ಲಿ ಅವರ ಪರ್ಯಟನೆಯಿತ್ತು. ಹಝ್ರತ್ ಬಿಲಾಲ್‌ರೊಡನೆ ಅಧ಼ಾನ್ ಕೊಡಲು ಹೇಳುವಂತೆ ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹುರೊಡನೆ ಜನರು ವಿನಂತಿಸಿದರು. ಜನರು ಹೇಳಿದರು: ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ನೋಡಿದವರು ನಮ್ಮಲ್ಲಿ ಇರುವರು. ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹುರ ಅಧ಼ಾನ್ ಕೇಳಲು ನಮ್ಮ ಕಿವಿಗಳು ಹಂಬಲಿಸುತ್ತಿವೆ. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕಾಲಘಟ್ಟ ನಮ್ಮ ಭಾವನೆಯಲ್ಲಿ ಬರುತ್ತದೆ. ನಮ್ಮ ಭಾವನೆಯಲ್ಲಿ ಹಝ್ರತ್ ಬಿಲಾಲ್‌ರ ಅಧ಼ಾನ್ ಸಹ ಬರುತ್ತದೆ. ಸತ್ಯದಲ್ಲಿಯೂ ಒಂದು ಸಲ ಹಝ್ರತ್ ಬಿಲಾಲ್‌ರ ಅಧ಼ಾನನ್ನು ಆಲಿಸಿ ಆ ಕಾಲಘಟ್ಟ ಸ್ವಲ್ಪ ಉತ್ತಮ ರೀತಿಯಲ್ಲಿ ನಮ್ಮ ಮುಂದೆ ಬರಲು ನಾವು ಬಯಸುತ್ತೇವೆ. ನಮ್ಮಲ್ಲಿ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕಾಲಘಟ್ಟವನ್ನು ನೋಡಿರದ ಜನರು ಸಹ ಇದ್ದಾರೆ. ಅವರು ಕೇವಲ ಮಾತುಗಳನ್ನು ಮಾತ್ರ ಕೇಳಿದವರಾಗಿದ್ದಾರೆ. ಯಾರ ಅಧ಼ಾನನ್ನು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಆಲಿಸುತ್ತಿದ್ದರೋ ಮತ್ತು ಇಷ್ಟಪಡುತ್ತಿದ್ದರೋ ಆ ವ್ಯಕ್ತಿಯ ಅಧ಼ಾನನ್ನು ಕೇಳಲು ಅವರು ಸಹ ಬಯಸುತ್ತಿದ್ದಾರೆ. ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹು ಬಿಲಾಲ್ ರಝಿಯಲ್ಲಾಹು ಅನ್‌ಹುರನ್ನು ಕರೆದು ಹೇಳಿದರು: ನೀವು ಅಧ಼ಾನ್ ನೀಡಬೇಕೆಂದು ಜನರು ಬಯಸುತ್ತಿದ್ದಾರೆ. ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹು ಹೇಳಿದರು: ನೀವು ಖ಼ಲೀಫರಾಗಿದ್ದೀರಿ. ನೀವು ಬಯಸುವುದಾದರೆ, ನಾನು ಅಧ಼ಾನ್ ನೀಡುತ್ತೇನೆ. ಆದರೆ ನನಗೆ ಮನಸ್ಸು ಬರುತ್ತಿಲ್ಲ. ಕೊನೆಗೆ ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹು ನಿಂತುಕೊಂಡು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕಾಲದಲ್ಲಿ ಅಧ಼ಾನ್ ನೀಡುತ್ತಿದ್ದ ರೀತಿಯಲ್ಲೇ ಉಚ್ಚಸ್ವರದಲ್ಲಿ ಅಧ಼ಾನ್ ನೀಡಿದರು. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕಾಲಘಟ್ಟವನ್ನು ನೆನಪಿಸಿ ಅರೇಬಿಯಾದ ನಿವಾಸಿಗಳಾಗಿದ್ದ ಅವರ ಸಹಾಬಿವರ್ಯರು ಅಧ಼ಾನನ್ನು ಆಲಿಸಿದಾಗ ಅವರ ಕಣ್ಣುಗಳಿಂದ ಕಣ್ಣೀರು ಜಾರಿಯಾಗುತ್ತದೆ. ಕೆಲವರು ಜೋರಾಗಿ ಅತ್ತುಬಿಟ್ಟರು. ಹಝ್ರತ್ ಬಿಲಾಲ್ ರಝಿಯಲ್ಲಾಹು ಅನ್‌ಹು ಅಧ಼ಾನ್ ನೀಡುತ್ತಾ ಹೋದರು. ಅದನ್ನು ಕೇಳುತ್ತಿದ್ದ ಜನರ ಹೃದಯಗಳು ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕಾಲಘಟ್ಟವನ್ನು ನೆನದು ವಿಕಾರಭರಿತವಾಗುತ್ತಿತ್ತು. ನೀಗ್ರೋ ಆದ ಹಝ್ರತ್ ಬಿಲಾಲ್‌ರಿಂದ ಅರೇಬಿಯದ ಜನರು ಸೇವೆ ಮಾಡಿಸಿದ್ದರು. ಅವರಿಗೆ ಅರೇಬಿಯರೊಂದಿಗೆ ಯಾವುದೇ ರಕ್ತಸಂಬಂಧವಿರಲಿಲ್ಲ. ಯಾವುದೇ ಸಾಹೋದರ್ಯ ಸಂಬಂಧವಿರಲಿಲ್ಲ. ನಾವು ನೋಡಬೇಕಾದುದೇನೆಂದರೆ, ಅವರ ಹೃದಯದಲ್ಲಿ ಇದರ ಪ್ರಭಾವ ಹೇಗಿತ್ತು ಎಂದಾಗಿದೆ. ಅಧ಼ಾನ್ ಆಲಿಸಿದ ಕಾರಣ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕಾಲಘಟ್ಟವನ್ನು ಕಂಡವರಿಗೆ ಆ ಕಾಲಘಟ್ಟ ನೆನಪಿಗೆ ಬಂತು ಮತ್ತು ಆ ಕಾಲಘಟ್ಟವನ್ನು ಕಾಣದವರಿಗೂ ಆ ಸಂಗತಿಗಳೆಲ್ಲ ನೆನಪಿಗೆ ಬಂದಿತ್ತು. ಪರಸ್ಪರ ನೋಡಿ ವಿಕಾರಭರಿತರಾದರು. ಆದರೆ ಅರೇಬಿಯಾದವರಲ್ಲದ, ಗುಲಾಮ ಸಹ ಆಗಿದ್ದ ಹಝ್ರತ್ ಬಿಲಾಲ್‌ರ ಮೇಲೆ ಈ ಅಧ಼ಾನಿನಿಂದ ಉಂಟಾದ ಪ್ರಭಾವವೇನೆಂದು ನೋಡಬೇಕಲ್ಲವೇ. ಅವರು ಅಧ಼ಾನ್ ಕೊಟ್ಟು ಮುಗಿಸಿದ ಕೂಡಲೆ ಮೂರ್ಛೆ ಹೋಗುತ್ತಾರೆ. ಇದಾಗಿದೆ ಅವರ ಮೇಲೆ ಉಂಟಾದ ಪ್ರಭಾವ ಮತ್ತು ಕೆಲವು ನಿಮಿಷಗಳಲ್ಲಿ ಅವರು ನಿಧನರಾದರು. ಇದು ಅರಬ್ ಮತ್ತು ಅರಬಿಯೇತರಲ್ಲಿ ಯಾವುದೇ ವ್ಯತ್ಯಾಸವಿಲ್ಲವೆಂದು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹ ವಸಲ್ಲಮರು ಹೇಳಿದ್ದರ ನಿಜವಾದ ಸಾಕ್ಷಿಯಾಗಿತ್ತು. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸ್ನೇಹಭರಿತ ಸ್ವರವನ್ನು ಕೇಳಿದ ಅರಬ್ ಸಮುದಾಯದವರಲ್ಲದ ಒಬ್ಬ ವ್ಯಕ್ತಿಯ ಕರ್ಮಪರವಾದ ಸಾಕ್ಷಿಯಾಗಿತ್ತು ಇದು. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಪ್ರೀತಿಸಿದ ರೀತಿಯಲ್ಲಿ ತನ್ನ ಸ್ವಂತ ಸಮುದಾಯ ಕೂಡ ಪ್ರೀತಿಸಲಿಕ್ಕಿಲ್ಲ ಎಂದು ಅವರು ದೃಢವಾಗಿ ನಂಬಿದ್ದರು. ಇದಾಗಿತ್ತು ಅದರ ಪ್ರಭಾವ. (ಖುತ್‌ಬಾತೆ ಮಹ್ಮೂದ್, ಸಂಪುಟ–30, ಪುಟ–263–267, ಖುತ್‌ಬ ಜುಮುಅ 26–08–1949)

ಇವರಾಗಿದ್ದಾರೆ ನಮ್ಮ ಸಯ್ಯದುನಾ ಬಿಲಾಲ್ ರಝಿಯಲ್ಲಾಹು ಅನ್‌ಹು. ಅವರು ತಮ್ಮ ನೇತಾರರಾದ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ವಿಧೇಯರಾಗಿದ್ದರು ಮತ್ತು ಅವರನ್ನು ಪ್ರೀತಿಸಿದ್ದರು. ಏಕದೇವ ವಿಶ್ವಾಸವನ್ನು ತಮ್ಮ ಹೃದಯದಲ್ಲಿ ಇರಿಸಿದ್ದರು ಮತ್ತು ನಮಗೆ ಮಾದರಿಯಾಗುವಂತಹ ಪರಿಶುದ್ಧವಾದ ಸತ್ಕರ್ಮಗಳನ್ನು ನೆಲೆನಿಲ್ಲಿಸಿದರು. ಅದೇ ರೀತಿ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತನ್ನ ಗುಲಾಮನೊಂದಿಗೆ ತೋರಿಸಿದ ಪ್ರೀತಿ ಮತ್ತು ಪ್ರೇಮದ ಅತುಲ್ಯವಾದ ವೃತ್ತಾಂತಗಳ ಉದಾಹರಣೆಗಳು ನಮಗೆ ಲೋಕದಲ್ಲಿ ಬೇರೆಲ್ಲೂ ಕಾಣಲು ಸಾಧ್ಯವಿಲ್ಲ. ಇದೇ ಇಂದು ಸಹ ಪ್ರೀತಿ ಮತ್ತು ಪ್ರೇಮದ ವಾತಾವರಣವನ್ನು ಸೃಷ್ಟಿಸುವುದು, ಸಾಹೋದರ್ಯವನ್ನು ಉಂಟುಮಾಡುವುದು ಮತ್ತು ದಾಸ್ಯದ ಸರಪಳಿಗಳನ್ನು ತುಂಡರಿಸುವುದು. ಒಟ್ಟಿನಲ್ಲಿ, ಮೋಕ್ಷ ಸಿಗಬೇಕಾದರೆ ಏಕದೇವ ವಿಶ್ವಾಸ ಮತ್ತು ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಈ ಮಾದರಿಗಳನ್ನು ಇಂದು ಸಹ ನಾವು ಸ್ಥಾಪಿಸಬೇಕಾಗಿದೆ. ಅಲ್ಲಾಹನು ನಮಗೆ ಅದರ ಸೌಭಾಗ್ಯವನ್ನು ನೀಡಲಿ. ಆಮೀನ್.

ಈಗ ನಾನು ಕೆಲವು ದಿವಂಗತರ ಬಗ್ಗೆ ಪ್ರಸ್ತಾಪಿಸುವೆನು. ಅವರ ಜನಾಝ಼ ನಮಾಝ಼್ ಸಹ ನಿರ್ವಹಿಸುವೆನು. ಅವರಲ್ಲಿ ಮೊದಲ ಪ್ರಸ್ತಾಪ ಸನ್ಮಾನ್ಯ ತಯ್ಯಬ್ ಯಾಖೂಬ್ ಸಾಹಿಬರ ಮಗನಾದ ಮೌಲಾನ ತಾಲಿಬ್ ಯಾಖೂಬ್ ಸಾಹಿಬ್ ಮುಬಲ್ಲಿಗ್ ಟ್ರಿನಿಡಾಡ್‌ದಾಗಿದೆ. ಇವರು ಸೆಪ್ಟೆಂಬರ್ 8ರಂದು 63ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಚಿಕ್ಕಂದಿನಿಂದಲೇ ಅವರು ಧರ್ಮದ ಕಡೆಗೆ ಒಲವು ತೋರಿಸುತ್ತಿದ್ದರು. ಇವರು ಟ್ರಿನಿಡಾಡ್ ನಿವಾಸಿಯಾಗಿದ್ದರು. ಸಣ್ಣ ವಯಸ್ಸಿನಿಂದಲೇ ಐದು ಹೊತ್ತಿನ ನಮಾಝ಼್, ಪವಿತ್ರ ಖುರ್‌ಆನಿನ ಪಾರಾಯಣ ಮತ್ತು ಇಸ್ಲಾಮಿಕ ಗ್ರಂಥಗಳನ್ನು ಓದುವುದರಲ್ಲಿ ಅಭಿರುಚಿಯಿತ್ತು. ಆರಂಭಿಕ ಶಿಕ್ಷಣದ ನಂತರ ಅವರಿಗೆ ಬ್ರಿಟಿಷ್ ಇನ್ಶುರೆನ್ಸಿನಲ್ಲಿ ನೌಕರಿ ಸಿಕ್ಕಿತ್ತು. ಆದರೆ ಓ ಲೆವಲ್ ಮಾಡಿದ ನಂತರ 1979ರಲ್ಲಿ ಅವರು ತಮ್ಮ ಜೀವಿತವನ್ನು ವಖ್ಫ಼್ ಮಾಡಿದ್ದರು. ಜಾಮಿಅ ಅಹ್ಮದಿಯಾ ರಬ್ವದಲ್ಲಿ ಪ್ರವೇಶನ ಪಡೆದರು. ಅಲ್ಲಿಂದ 1989ರಲ್ಲಿ ಶಾಹಿದ್ ಡಿಗ್ರಿಯನ್ನು ಪಡೆದರು. 1987ರಲ್ಲಿ ಅವರ ವಿವಾಹ ನಾಇಬ್ ನಾಝಿರ್ ಅಅ್‌ಲಾ ಖಾದಿಯಾನ್ ಆಗಿದ್ದ ಮಿರ್ಝಾ಼ ಮುನವ್ವರ್ ಅಹ್ಮದ್ ಸಾಹಿಬ್ ದರ್ವೇಶ್‌ರ ಮಗಳಾದ ಶಾಹಿದ್ ಸಾಜಿದ ಶಾಹೀನ್ ಸಾಹಿಬರೊಂದಿಗೆ ನಡೆಯಿತು. ಅವರ ಪತ್ನಿ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸಹಾಬಿಯಾದ ಹಝ್ರತ್ ಭಾಯಿ ಮಿರ್ಝಾ಼ ಬರ್ಕತ್ ಅಲಿ ಸಾಹಿಬರ ಮೊಮ್ಮಗಳು ಆಗಿದ್ದಾರೆ. ಜಾಮಿಅದಲ್ಲಿ ತೇರ್ಗಡೆಯಾದ ನಂತರ ಅವರ ಮೊದಲ ಪೋಸ್ಟಿಂಗ್ ಆಫ್ರಿಕಾದಲ್ಲಿಯಾಯಿತು. ಅಲ್ಲಿ ಅವರು 1989ರಿಂದ 1992ರ ವರೆಗೆ ಸುಮಾರು ಮೂರು ವರ್ಷಗಳ ಕಾಲ ಸೇವೆ ಮಾಡುವ ತೌಫೀಕ್ ಪಡೆದರು. ಅನಂತರ ಗಿಯಾನ ಜಮಾಅತಿನಲ್ಲಿ 1993ರಿಂದ 1997ರ ವರೆಗೆ ಮಿಶನರಿಯಾಗಿ ಸೇವೆ ಸಲ್ಲಿಸುವ ಸಂದರ್ಭ ಪಡೆದರು. ಅನಂತರ ಅಲ್ಲಿಂದ ಘಾನದ ರೀಜನ್ ಆದ ಕೊಹೋರೇಡ್‌ವ ಮತ್ತು ಖುಮಾಸಿಯಲ್ಲಿ 1997ರಿಂದ 2004ರ ವರೆಗೆ ಸೇವೆ ಸಲ್ಲಿಸಿದ್ದರು. ಇಲ್ಲಿ ಇವರು ತೀವ್ರ ರೋಗಗ್ರಸ್ತರಾದರು. ರೋಗಮುಕ್ತರಾದ ನಂತರ ಅವರ ನೇಮಕಾತಿ ಟ್ರಿನಿಡಾಡಿನ ಫ್ರೀ ಪೋರ್ಟ್ ಜಮಾಅತಿನಲ್ಲಿ ಆಯಿತು. ಅಲ್ಲಿ ಅವರು ಮರಣದ ವರೆಗೆ ಸೇವೆ ಸಲ್ಲಿಸಿದರು.

ಲೋಕದ ವಿವಿಧ ದೇಶಗಳಲ್ಲಿ ಅತ್ಯಂತ ನಿಷ್ಠೆ ಮತ್ತು ಪ್ರಾಮಾಣಿಕತೆಯಿಂದ ಸೇವೆ ಸಲ್ಲಿಸಿದ್ದರಲ್ಲದೆ, ತಮ್ಮ ಅರಿವು ಮತ್ತು ಅನುಭವದಿಂದ ಇಸ್ಲಾಮಿನ ಪಾಠಗಳನ್ನು ವಿತರಿಸುತ್ತಿದ್ದರು. ಹೋದ ಎಲ್ಲ ಜಾಗದಲ್ಲಿ ಅಲ್ಲಿನ ಜಮಾಅತಿನ ಪ್ರತಿಯೊಬ್ಬ ವ್ಯಕ್ತಿಯೊಂದಿಗೆ ವೈಯಕ್ತಿಕ ಸಂಬಂಧವನ್ನು ಇರಿಸುತ್ತಿದ್ದರು. ಜಮಾಅತಿನ ಸದಸ್ಯರು ಸಹ ಅವರೊಂದಿಗೆ ವಿಶೇಷವಾದ ಪ್ರೀತಿಯ ಸಂಬಂಧವನ್ನು ಇರಿಸಿದ್ದರು. ಕಳೆದ ಹಲವು ವರ್ಷಗಳಿಂದ ಅವರಿಗೆ ಕಿಡ್ನಿ ಸಂಬಂಧ ರೋಗವಿತ್ತು. ಡೈಯಲಿಸಿಸ್ ಕಾರಣ ವಾರದಲ್ಲಿ ಮೂರು ಬಾರಿ ಚಿಕಿತ್ಸೆಗಾಗಿ ಆಸ್ಪತ್ರೆಗೆ ಹೋಗುತ್ತಿದ್ದರು. ಹೀಗಿದ್ದರೂ ಜಮಾಅತಿನ ಕಾರ್ಯಕ್ರಮಗಳಲ್ಲಿ ಯಾವುದೇ ತಡೆಯುಂಟಾಗುವಂತೆ ಮಾಡಲಿಲ್ಲ. ಅತ್ಯಂತ ದೇವಭಕ್ತರೂ ವಿನಯಾನ್ವಿತರೂ ಸೌಮ್ಯ ಸ್ವಭಾವದವರೂ ಸಹನೆಯುಳ್ಳವರೂ ವಿಧೇಯರೂ ಆಗಿದ್ದರು. ಎಲ್ಲರೊಡನೆ ಮುಗುಳ್ನಗೆಯೊಂದಿಗೆ ಭೇಟಿಯಾಗುತ್ತಿದ್ದರು. ಐದು ಹೊತ್ತಿನ ನಮಾಝ಼್ ಅಲ್ಲದೆ, ತಹಜ್ಜುದ್ ನಮಾಝ಼್ ಮತ್ತು ಪವಿತ್ರ ಖುರ್‌ಆನಿನ ಪಾರಾಯಣ ಸದಾ ಮಾಡುತ್ತಿದ್ದರು. ರಾತ್ರಿ ಮಲಗುವುದಕ್ಕೆ ಮುಂಚಿತವಾಗಿ 8 ರಕಅತ್ ನಫ್ಲ್ ನಮಾಝ಼್ ಅನುಷ್ಠಿಸುವುದು ಅವರ ರೀತಿಯಾಗಿತ್ತು. ಜಮಾಅತಿನ ರೀತಿರಿವಾಜುಗಳನ್ನು ಕರಾರುವಕ್ಕಾಗಿ ಪಾಲಿಸುತ್ತಿದ್ದರು. ತಮ್ಮ ಕುಟುಂಬಕ್ಕೂ ಈ ಎಲ್ಲ ಒಳಿತುಗಳನ್ನು ಮಾಡಲು ಉಪದೇಶಿಸುತ್ತಿದ್ದರು. ತಮ್ಮ ಕುಟುಂಬದಲ್ಲೇ ಬಹಳ ಜನಪ್ರಿಯರಾಗಿದ್ದರು. ದಿವಂಗತರು ತನ್ನ ಪತ್ನಿಯನ್ನಲ್ಲದೆ, ಒಬ್ಬ ಮಗನಾದ ನಾಸಿರ್ ಯಾಖೂಬ್ ಸಾಹಿಬ್ ಮತ್ತು ಎರಡು ಹೆಣ್ಮಕ್ಕಳಾದ ಅಮೀನ ಯಾಖೂಬ್ ಹಾಗು ಅದೀಲ ಯಾಖೂಬ್‌ರನ್ನು ಅಗಲಿರುವರು. ಇವರಿಗೆ ಎರಡು ಸಹೋದರರು ಮತ್ತು ಮೂರು ಸಹೋದರಿಯರು ಇದ್ದಾರೆ. ಇವರಲ್ಲಿ ಕೆಲವರು ಟ್ರಿನಿಡಾಡ್ ಮತ್ತ ಕೆಲವರು ಆಸ್ಟ್ರೇಲಿಯಾದಲ್ಲಿ ಇರುವರು. ಇವರ ಒಬ್ಬ ಅತ್ತಿಗೆಯಾದ ಹೆಲೆನ್ ಯಾಖೂಬ್ ಹೇಳುತ್ತಾರೆ: ನಾನು ಮೂವತ್ತು ವರ್ಷಗಳ ಹಿಂದೆ ಬೈಅತ್

ಮಾಡಿದ್ದೆ. ಮೌಲಾನಾ ಸಾಹಿಬರು ಟ್ರಿನಿಡಾಡಿಗೆ ಬಂದಾಗ, ಯಾವಾಗಲೂ ಬಹಳ ಪ್ರೀತಿಯಿಂದ ಧರ್ಮದ ಹೊಸ ಹೊಸ ಸಂಗತಿಗಳನ್ನು ಕಲಿಸುತ್ತಿದ್ದರ. ಇದರಿಂದ ನನಗೆ ದೀನನ್ನು ಕಲಿಯುವ ಇಚ್ಛೆ ಹೆಚ್ಚಾಯಿತು. ಇದರಿಂದ ಅವರ ಬಹಳ ಸಂತೋಷಗೊಂಡಿದ್ದರು. ಇವರ ಈ ನಡೆವಳಿಕೆಯ ಕಾರಣ ನನ್ನ ಮಗನಾದ ತಯ್ಯಬ್ ಯಾಖೂಬ್ ಅಲ್ಲಾಹನ ಅನುಗ್ರಹದಿಂದ ಮುಬಲ್ಲಿಗ್ ಆಗಲು ಉದ್ದೇಶಿಸಿದ್ದಾನೆ. ಈಗ ಜಾಮಿಅ ಅಹ್ಮದಿಯಾ ಕೆನಡದಲ್ಲಿ ಎರಡನೇ ವರ್ಷದಲ್ಲಿ ಇದ್ದಾನೆ.

ಮೌಲಾನ ಸಾಹಿಬ್ ರೋಗಿಯಾಗಿದ್ದಾಗ ನೋಡುತ್ತಿದ್ದ ಒಬ್ಬಳು ಅಹ್ಮದಿ ಡಾಕ್ಟರ್ ಹೇಳುತ್ತಾಳೆ: ಬಹಳ ಉತ್ತಮ ಸ್ವಭಾವಗುಣಗಳನ್ನು ಹೊಂದಿದ್ದರು, ಇವರನ್ನು ಚಿಕಿತ್ಸೆ ಮಾಡುತ್ತಿದ್ದ ಪ್ರತಿಯೊಬ್ಬ ಡಾಕ್ಟರ್ ಮತ್ತು ನರ್ಸ್ ಇವರ ನೈತಿಕ ಗುಣಗಳಿಂದ ಬಹಳ ಪ್ರಭಾವಿತಗೊಂಡಿದ್ದರು. ರೋಗಿಯಾದ ಕಾಲದಲ್ಲೂ ಎಲ್ಲಾದರೂ ಕುಳಿತುಕೊಂಡಿದ್ದರೆ, ಆಸ್ಪತ್ರೆಯಲ್ಲಿ ಕುಳಿತುಕೊಳ್ಳಲು ಜಾಗ ಕಡಿಮೆ ಇರುವಾಗ ಯಾರಾದರೂ ಬಂದರೆ, ಸ್ವತಃ ಎದ್ದುಕೊಂಡು ಇತರರಿಗೆ ಕುಳಿತುಕೊಳ್ಳಲು ಜಾಗಮಾಡಿಕೊಡುತ್ತಿದ್ದರು. ರೋಗಿಗಳಿಗೂ ಡಾಕ್ಟರರಿಗೂ ಮಾದರಿಯಾಗಿದ್ದರು. ಇತರ ಜನರಿಗೂ ಮಾದರಿಯಾಗಿದ್ದರು.

ಟ್ರಿನಡಾಡ್ ಮತ್ತು ಟವೇಗೋದ ಮಿಶನರಿ ಇಂಚಾರ್ಜ್ ಸಾಹಿಬರು ಬರೆಯುತ್ತಾರೆ: ಯಥಾರ್ಥ ರೀತಿಯಲ್ಲಿ ಒಬ್ಬ ಮುಬಲ್ಲಿಗ್ ಮತ್ತು ಮುರಬ್ಬಿಯ ವಿಶೇಷತೆಗಳನ್ನು ಮತ್ತು ಸ್ವಭಾವಗುಣಗಳನ್ನು ಹೊಂದಿದ್ದರು. ಖಿಲಾಫತಿನ ಅನುಸರಣೆಯಲ್ಲಿ ಸದಾ ಮುಂದೆ ಇದ್ದರು. ತನ್ನ ಮೇಲು ಉದ್ಯೋಗಸ್ಥರ ಎಲ್ಲ ಮಾತುಗಳನ್ನು ಅನುಸರಿಸುತ್ತಿದ್ದರು. ಅವರಿಗೆ ಒಪ್ಪಿಸಲಾದ ಕೆಲಸಗಳನ್ನು ಉತ್ತಮ ರೀತಿಯಲ್ಲಿ ಪೂರ್ತಿಮಾಡಲು ಶತಪ್ರಯತ್ನ ಮಾಡುತ್ತಿದ್ದರು.ಅವರಿಗೆ ಅಲ್ಲಾಹನ ಮೇಲೆ ಅವನ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮೇಲೆ ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಮೇಲೆ ಅಪರಿಮಿತವಾದ ಪ್ರೀತಿಯಿತ್ತು. ನಿಯತವಾಗಿ ಪವಿತ್ರ ಖುರ್‌ಆನ್ ಪಾರಾಯಣ ಮಾಡುತ್ತಿದ್ದರು ಮತ್ತು ತಹಜ್ಜುದ್ ನಮಾಝ್ ಅನುಷ್ಠಿಸುತ್ತಿದ್ದರು.

ಜಾಮಿಅ ಅಹ್ಮದಿಯಾ ಕೆನಡಾದಿಂದ ಮೂರು ವರ್ಷಗಳ ಹಿಂದೆ ತೇರ್ಗಡೆಯಾಗಿ ಹೋದ ಯುವ ಮುಬಲ್ಲಿಗ್ ಆದ ಖಾಸಿದ್ ವಡಾಇಚ್ ಹೇಳುತ್ತಾರೆ: ನನ್ನ ಪೋಸ್ಟಿಂಗ್ ಟ್ರಿನಿಡಾಡ್‌ನಲ್ಲಿ ಆದಾಗ ಮೌಲಾನ ಸಾಹಿಬರ ಆರೋಗ್ಯ ಕೆಟ್ಟುಹೋಗಿತ್ತು. ವಯಸ್ಸು ಸಹ ಜಾಸ್ತಿಯಾಗಿತ್ತು. ಕೆಲವು ದಿನಗಳಿಗೆ ಮುಂಚೆ ಮೌಲಾನಾ ಸಾಹಿಬರು ತನ್ನ ಪತ್ನಿ ಮತ್ತು ಮಗನೊಂದಿಗೆ ಐವತ್ತು ನಿಮಿಷದ ಯಾತ್ರೆಯನ್ನು ನನ್ನನ್ನು ಭೇಟಿಯಾಗಲು ಬಂದಿದ್ದರು. ಬಹಳ ಪ್ರೀತಿಯಿಂದ ವರ್ತಿಸಿದ್ದರು. ಅದರ ನಂತರ ಪ್ರತಿ ಮೂರ್‍ನಾಲ್ಕು ದಿನಗಳಲ್ಲಿ ನನಗೆ ಮೆಸೆಜ್ ಅಥವಾ ಕಾಲ್ ಮಾಡುತ್ತಿದ್ದರು. ಹೊಸದಾಗಿ ಬಂದ ಕಾರಣದಿಂದ ನನ್ನ ಆವಶ್ಯಕತೆಗಳ ಬಗ್ಗೆ ವಿಚಾರಿಸುತ್ತಿದ್ದರು. ಉಪದೇಶಗಳನ್ನು ಮತ್ತು ತಿಳಿಮಾತುಗಳನ್ನು ಸಹ ಹೇಳುತ್ತಿದ್ದರು. ಚಿಕ್ಕವರು ಮತ್ತು ದೊಡ್ಡವರೊಂದಿಗೆ ಪ್ರೀತಿಯಿಂದ ವರ್ತಿಸುತ್ತಿದ್ದರು. ಯಾವಾಗಲೂ ಖಿಲಾಫತಿನೊಂದಿಗೆ ಹೊಂದಿಕೊಂಡಿರಲು ಉಪದೇಶಿಸುತ್ತಿದ್ದರು. ಖಲೀಫತುಲ್ ಮಸೀಹರಿಗಾಗಿ ದುಆ ಮಾಡುತ್ತಿರಲು ಹೇಳುತ್ತಿದ್ದರು. ಪರೀಕ್ಷೆಗಳಿಗೆ ಮುಂಚಿತವಾಗಿಯೂ ಮತ್ತು ಪ್ರತಿಯೊಂದು ಕೆಲಸಕ್ಕಾಗಿಯೂ ಖಲೀಫತುಲ್ ಮಸೀಹರಿಗೆ ದುಆದ ಪತ್ರ ಬರೆಯಬೇಕೆಂದು ಹೇಳುತ್ತಿದ್ದರು ಎಂದು ಮೌಲಾನ ಸಾಹಿಬರ ಮಗಳು ಸಹ ಬರೆದಿರುವಳು. ಅಲ್ಲಿ ಇರುವ ಒಬ್ಬ ಅಹ್ಮದಿಯಾದ ಮುನೀರ್ ಇಬ್ರಾಹೀಂ ಹೇಳುತ್ತಾರೆ: ನಾವು ತಬ್ಲೀಗಿಗಾಗಿ ಎಲ್ಲಾದರೂ ಹೋಗುವಾಗ ಮೌಲಾನ ಸಾಹಿಬರು ಯಾವಾಗಲೂ ಹಾಜರಾಗುತ್ತಿದ್ದರು. ಅನಂತರ ಹೆಚ್ಚು ಹೆಚ್ಚು ಜನರಿಗೆ ಅಹ್ಮದಿಯ್ಯತಿನ ಸಂದೇಶ ತಲುಪುವಂತಾಗಲು ಎಲ್ಲರನ್ನು ಒಂದೊಂದು ದಿಕ್ಕಿಗೆ ತಬ್ಲೀಗ್ ಮಾಡಲು ಕಳಿಸಿ, ಸ್ವತಃ ಒಂದು ಕಡೆಗೆ ತಬ್ಲೀಗ್ ಮಾಡಲು ಹೋಗುತ್ತಿದ್ದರು. ಯಾವಾಗಲೂ ಮುಗುಳ್ನಗುತ್ತಿದ್ದರು. ಜಮಾಅತಿನ ಪ್ರಗತಿ ಮತ್ತು ತಬ್ಲೀಗಿಗಾಗಿ ಯಾರಾದರೂ ಸಣ್ಣ ಕೆಲಸವನ್ನು ಮಾಡಿದ್ದರೆ ಬಹಳ ಸಂತೋಷಪಡುತ್ತಿದ್ದರು ಎಂದು ಅವರೊಂದಿಗೆ ಕೆಲಸಮಾಡುತ್ತಿದ್ದ ಮುರಬ್ಬಿಯರು, ಯುವಕರು ಮತ್ತು ಇತರ ಜನರು ಹೇಳಿದ್ದಾರೆ. ಬಹಳವಾಗಿ ಪ್ರೋತ್ಸಾಹಿಸುತ್ತಿದ್ದರು. ಯಾವಾಗಲೂ ಮುಗುಳ್ನಗುತ್ತಿದ್ದರು ಎಂದು ಎಲ್ಲರೂ ಇವರ ಬಗ್ಗೆ ಬರೆದಿರುವರು. ಮೈತ್ರಿ ಸಂಧಾನ ಮಾಡುವವರಾಗಿದ್ದರು. ವಿದ್ಯಾರ್ಥಿಯಾಗಿದ್ದಾಗಲೂ ಸ್ನೇಹಿತರು ಪರಸ್ಪರ ಜಗಳವಾಡಿದ್ದರೆ, ಯಾವಾಗಲೂ ಅವರನ್ನು ಒಂದಾಗಿಸುತ್ತಿದ್ದರು. ಅದೇ ರೀತಿಯಲ್ಲಿ ನಾವು ಅಹ್ಮದಿಯರು ಯಾರ ಬಗ್ಗೆಯೂ ನಮ್ಮ ಹೃದಯದಲ್ಲಿ ವೈರ ಇರಬಾರದು ಎಂದು ಉಪದೇಶಿಸುತ್ತಿದ್ದರು. ನಾನು ಸಹ ಅವರನ್ನು ಮುಗುಳ್ನಗುತ್ತಾ ನೋಡಿದ್ದೇನೆ. ಖಿಲಾಫತಿನೊಂದಿಗೆ ಅಪರಿಮಿತವಾದ ವಿಧೇಯತ್ವದ ಸಂಬಂಧವಿತ್ತು. ಖಿಲಾಫತಿನೊಂದಿಗೆ ನಿಷ್ಠೆಯ ಸಂಬಂಧವನ್ನು ಇರಿಸಲು ಮತ್ತು ಪತ್ರ ಬರೆಯಲು ಹೇಳುತ್ತಿದ್ದರು ಎಂದು ಮಕ್ಕಳು ಸಹ ಬರೆದಿರುವರು.

ಒಬ್ಬ ಹೊಸ ಅಹ್ಮದಿಯಾದ ನೋರಿಶ್ ಸಾಹಿಬ್ ಹೇಳುತ್ತಾರೆ: ನಾನು ಹಲವು ಅಹ್ಮದಿಯೇತರ ಮಸೀದಿಗಳಿಗೆ ಹೋಗಿ ಯಥಾರ್ಥ ಇಸ್ಲಾಂ ಬಗ್ಗೆ ಅರಿಯಲು ಪ್ರಯತ್ನಿಸುತ್ತಿದ್ದೆ. ಹೀಗೆ ನಾನು ಮೌಲಾನ ತಾಲಿಬ್ ಸಾಹಿಬರನ್ನು ಕಂಡಾಗ ಪುರಾವೆಗಳನ್ನು ಆಲಿಸುವ ಮುಂಚೆಯೇ ನನ್ನ ಮನಸ್ಸಿನಲ್ಲಿ ಒಂದು ಉತ್ತಮ ಪ್ರಭಾವ ಉಂಟಾಗಲು ಶುರುವಾಗಿತ್ತು. ಇದೇ ಕಾರಣದಿಂದ ಅವರು ಬೈಅತ್ ಸಹ ಮಾಡಿದರು. ಹೇಗಿದ್ದರೂ ತಾಲಿಬ್ ಯಾಖೂಬ್ ಸಾಹಿಬರು ವಖ್ಫಿನ ಕರ್ತವ್ಯಗಳನ್ನು ವಿಶಾಲ ಮನಸ್ಸಿನೊಂದಿಗೆ ನಿರ್ವಹಿಸಿದ್ದರು. ಯಾವುದೇ ನೆಪಗಳನ್ನು ಅವರು ಎಂದೂ ಮಾಡಿರಲಿಲ್ಲ. ಖಲೀಫತುಲ್ ಮಸೀಹ್ ಎಲ್ಲಿ ನೇಮಕಾತಿ ಮಾಡಿದ್ದರೂ ಕೆಲಸಮಾಡಬೇಕು ಎಂದು ಹೇಳುತ್ತಿದ್ದರು. ಸ್ವಂತ ದೇಶಕ್ಕೆ ಹೋಗದೆ, ಪಾಕಿಸ್ತಾನದಲ್ಲಿ ಡ್ಯೂಟಿ ಮಾಡಲು ಹೇಳಿದ್ದರೂ ತಯಾರಿದ್ದೇನೆ ಎಂದು ಹೇಳುತ್ತಿದ್ದರು. ಇದಕ್ಕಾಗಿ ಅವರು ಪಾಕಿಸ್ತಾನದಲ್ಲಿ ಇದ್ದಾಗ ಪಂಜಾಬಿ ಕಲಿಯಲು ಸಹ ಪ್ರಯತ್ನ ಮಾಡುತ್ತಿದ್ದರು. ಪಾಕಿಸ್ತಾನದಲ್ಲಿ ಪೋಸ್ಟಿಂಗ್ ಆದರೆ ಪಂಜಾಬಿ ಮಾತನಾಡುವವರನ್ನು ಭೇಟಿಯಾಗಬೇಕಾಗಿ ಬರಬಹುದು ಎಂದು ಹೇಳಿ ಪಂಜಾಬಿ ಕಲಿಯುತ್ತಿದ್ದರು. ಅಲ್ಲಾಹನು ಅವರೊಡನೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ. ಅವರ ಪದವಿಗಳನ್ನು ಉನ್ನತಗೊಳಿಸಲಿ. ಅವರ ಪತ್ನಿ ಮಕ್ಕಳನ್ನು ಸಂರಕ್ಷಿಸಲಿ, ಅವರ ಒಳಿತುಗಳನ್ನು ಜಾರಿಯಾಗಿರಿಸಲು ಸೌಭಾಗ್ಯ ನೀಡಲಿ.

ಎರಡನೇ ಜನಾಝಾ ಮಾಜಿ ತೃತೀಯ ವಕೀಲುಲ್ ಮಾಲ್ ಮತ್ತು ರಬ್ವದ ನಾಇಬ್ ಸದರ್ ಮಜ್‌ಲಿಸ್ ತಹ್‌ರೀಕ್ ಜದೀದ್ ಆಗಿದ್ದ ಸನ್ಮಾನ್ಯ ಇಫ್ತಿಖಾರ್ ಅಲಿ ಖುರೈಶಿ ಸಾಹಿಬ್‌ರದ್ದಾಗಿದೆ. ಅಲ್ಲಾಹನು ಇವರಿಗೆ ದೀರ್ಘಾಯಸ್ಸನ್ನು ನೀಡಿದ್ದನು. ಜೂನ್ 3ರಂದು 99ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಇಫ್ತಿಖಾರ್ ಸಾಹಿಬರ ತಂದೆಯ ಹೆಸರು ಮುಮ್ತಾಝ್ ಅಲಿ ಸಾಹಿಬ್ ಎಂದಾಗಿದೆ. ಇವರು ಒಬ್ಬ ವೆಟನರಿ ಡಾಕ್ಟರ್ ಆಗಿದ್ದರು. ಇಫ್ತಿಖಾರ್ ಅಲಿ ಸಾಹಿಬರು ಮೀರಟ್ ಇಂಡಿಯಾದಲ್ಲಿ ಜನಿಸಿದ್ದರು. ತನ್ನ ಸೆಕೆಂಡರಿ ಮತ್ತು ಹೈಯರ್ ಎಜುಕೇಶನ್ ಮೀರಟ್‌ನಲ್ಲೇ ಪಡೆದಿದ್ದರು. ಈಗ ಯೂನಿವರ್ಸಿಟಿಯಾಗಿರುವ ಥಾಮ್‌ಸನ್ ಇಂಜಿನಿಯರಿಂಗ್ ಕಾಲೇಜಿನಲ್ಲಿ ಪ್ರವೇಶನ ಪಡೆದರು. ಅಲ್ಲಿ ಅವರು 1944ರಲ್ಲಿ ಸಿವಿಲ್ ಇಂಜಿನಿಯರಿಂಗ್‌ನಲ್ಲಿ ಗ್ರಾಜುವೇಶನ್ ಪೂರ್ತಿಮಾಡಿದ್ದರು. ವಿದ್ಯಾರ್ಥಿಯಾಗಿದ್ದಾಗಲೇ ಅಹ್ಮದಿಯಾ ಜಮಾಅತಿನಲ್ಲಿ ಪ್ರವೇಶಿಸಲು ಸೌಭಾಗ್ಯ ಪಡೆದಿದ್ದರು. ಅವರ ತಂದೆ ಆ ಸಮಯದಲ್ಲಿ ಅಹ್ಮದಿಯಾಗಿರಲಿಲ್ಲ. ಇಫ್ತಿಖಾರ್ ಖುರೈಶಿ ಸಾಹಿಬರು ಸ್ವತಃ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಗ್ರಂಥಗಳನ್ನು ಓದಿ, ಅನ್ವೇಷಣೆ ನಡೆಸಿದ ನಂತರ ಅಹ್ಮದಿಯ್ಯತ್ ಸ್ವೀಕರಿಸಲು ಸೌಭಾಗ್ಯ ಪಡೆದಿದ್ದರು. ಅವರಿಗೆ ಅಹ್ಮದಿಯ್ಯತಿನ ಸಂದೇಶ ಅವರ ತಂದೆಯ ಅಳಿಯರ ಮೂಲಕ ಲಭಿಸಿತ್ತು. ಇಫ್ತಿಖಾರ್ ಅಲಿ ಸಾಹಿಬ್ ಶಿಕ್ಷಣದ ಕಾಲದಲ್ಲಿ ತನ್ನ ದೊಡ್ಡಪ್ಪರಾದ ತುರಾಬ್ ಅಲಿ ಸಾಹಿಬರ ಬಳಿ ಇರುತ್ತಿದ್ದರು. ತುರಾಬ್ ಅಲಿ ಸಾಹಿಬ್ ಆಗ ಅಹ್ಮದಿಯಾಗಿರಲಿಲ್ಲ. ಮುಖ್ತಾರ್ ಖುರೈಶಿ ಸಾಹಿಬರು ತನ್ನ ತಂದೆಯರೊಡನೆ ಹೆಚ್ಚಾಗಿ ಮೀರಟಿನ ಹಳ್ಳಿಯಾದ ಸರಾಬದಲ್ಲಿರುವ ಇಫ್ತಿಖಾರ್ ಅಲಿ ಸಾಹಿಬರ ದೊಡ್ಡಪ್ಪರ ಬಳಿಗೆ ಬರುತ್ತಿದ್ದರು. ಖುರೈಶಿ ಇಫ್ತಿಖಾರ್ ಸಾಹಿಬರಿಗೆ ಈ ಹಿರಿಯರ ಮುಖಾಂತರ ಅಹ್ಮದಿಯ್ಯತಿನ ಸಾಹಿತ್ಯಗಳು ಲಭಿಸುತ್ತಿತ್ತು. ದೆಹಲಿಯ ಜಮಾಅತ್ ಸಹ ಚಿಕ್ಕ ಚಿಕ್ಕ ಲೀಫ್‌ಲೆಟ್‌ಗಳನ್ನು ಪ್ರಕಟಿಸುತ್ತಿತ್ತು. ಈ ಲೀಫ್‌ಲೆಟ್‌ಗಳು ಸಹ ಇಫ್ತಿಖಾರ್ ಸಾಹಿಬರಿಗೆ ಓದಲು ಲಭಿಸುತ್ತಿತ್ತು. ಇಫ್ತಿಖಾರ್ ಸಾಹಿಬರು ಈ ಎಲ್ಲ ಸಾಹಿತ್ಯಗಳನ್ನು ಯಾತ್ರೆ ಮಾಡುವಾಗ ಓದುತ್ತಿದ್ದರು. ಅನಂತರ ಅದನ್ನು ತನ್ನ ತಂದೆಗೆ ನೀಡುತ್ತಿದ್ದರು. ಇಫ್ತಿಖಾರ್ ಸಾಹಿಬರು ತಾಮ್ಸನ್ ಕಾಲೇಜಿನಲ್ಲಿ ಪ್ರವೇಶ ಪಡೆದಾಗ ಅವರ ತಂದೆಯ ಅಳಿಯ ಮುಖ್ತಾರ್ ಖುರೈಶಿ ಸಾಹಿಬರು ಇಫ್ತಿಖಾರ್ ಸಾಹಿಬರಿಗೆ ವಿಶದವಾಗ ಪತ್ರಗಳನ್ನು ನಿಯುತವಾಗಿ ಬರೆದುಕೊಂಡು ಅಹ್ಮದಿಯ್ಯತಿನ ಸಂದೇಶ ನೀಡಲು ಶುರುಮಾಡಿದರು. ಹೀಗೆ ಪರಸ್ಪರ ದೀರ್ಘವಾದ ಪತ್ರ ವ್ಯವಹಾರ ನಡೆಯುತ್ತಿತ್ತು. ಆ ಕಾಲದಲ್ಲೂ ಅವರು ತಹಜ್ಜುದ್ ನಮಾಝ್ ನಿರ್ವಹಿಸುತ್ತಿದ್ದರು. ಅವರಿಗೆ ಬಹಳವಾಗಿ ದುಆ ಮಾಡಲು ಸಂದರ್ಭ ಸಿಕ್ಕಿತ್ತು. ಆದರೆ ಹೃದಯದಲ್ಲಿ ಒಂದು ಭಯ ಮತ್ತು ಅಸ್ವಸ್ಥತೆಯಿತ್ತು. ಈ ಒಂದು ಅವಸ್ಥೆಯ ಬಗ್ಗೆ ಅವರು ಹಝ್ರತ್ ಖಲೀಫತುಲ್ ಮಸೀಹ್ ಸಾನಿಗೆ ಪತ್ರ ಮೂಲಕ ತಿಳಿಸಿದ್ದರು. ಒಂದು ಸಲ ಅವರೊಡನೆ ಕೆಲವು ಸವಾಲುಗಳನ್ನು ಕೇಳಿದರು. ಇದಕ್ಕೆ ಉತ್ತರವಾಗಿ 'ನಿಮ್ಮ ಸವಾಲು ಸಂಕ್ಷಿಪ್ತವಾದರೂ ಸಮಗ್ರವಾದುದಾಗಿದೆ. ಇದರ ಉತ್ತರವನ್ನು ಪತ್ರದಲ್ಲಿ ಬರೆಯುವುದು ಕಷ್ಟ. ಆದ್ದರಿಂದ ನೀವು ನನ್ನ ಇಂತಿಂತಹ ಪುಸ್ತಕವನ್ನು ಓದಿರಿ' ಎಂದು ಹುಝೂರ್ ಹೇಳಿದರು. ಇಫ್ತಿಖಾರ್ ಸಾಹಿಬರು ಈ ಪುಸ್ತಕವನ್ನು ತನ್ನ ತಂದೆಯ ಅಳಿಯರಾದ ಮುಖ್ತಾರ್ ಸಾಹಿಬರಿಂದ ಪಡೆದರು. ಅದನ್ನು ಓದಲು ಶುರುಮಾಡಿದಾಗ ಅವರ ಪ್ರಶ್ನೆಗಳಿಗೆ ಉತ್ತರಗಳು ಲಭಿಸುತ್ತಾ ಹೋಯಿತು. ಹೀಗೆ 1941 ನವೆಂಬರ್ ತಿಂಗಳಲ್ಲಿ ಪತ್ರ ಮೂಲಕ ಬೈಅತ್

ಮಾಡಿದರು. 1942ರಲ್ಲಿ ಖಾದಿಯಾನ್ ಜಲಸಾದಲ್ಲಿ ಭಾಗವಹಿಸಿದ್ದರು. ಖಾದಿಯಾನಿನ ವಾತಾವರಣದಿಂದ ತುಂಬ ಪ್ರಭಾವಿತರಾದರು. ಹಝ್ರತ್ ಖಲೀಫತುಲ್ ಮಸೀಹರ ಭಾಷಣಗಳನ್ನು ಶ್ರದ್ಧೆಯಿಂದ ಕೇಳಿದರು. ಹೀಗೆ ಅವರು ಹಝ್ರತ್ ಖಲೀಫತುಲ್ ಮಸೀಹ್ ಸಾನಿಯರ ಕೈಯಲ್ಲಿ ಪುನಃ ಬೈಅತ್ ಮಾಡಲು ಸೌಭಾಗ್ಯ ಪಡೆದರು. ಪ್ರತಿ ವರ್ಷ ಜಲಸಾ ಸಾಲಾನ ಖಾದಿಯಾನಿನಲ್ಲಿ ಭಾಗವಹಿಸುತ್ತಿದ್ದರು. ಹಝ್ರತ್ ಖಲೀಫತುಲ್ ಮಸೀಹ್ ಸಾನಿಯರನ್ನು ಭೇಟಿಯಾಗಲು ಸೌಭಾಗ್ಯ ಪಡೆಯುತ್ತಿದ್ದರು. ಅವರ ಮನಸ್ಸಿನಲ್ಲಿರುವ ಸವಾಲುಗಳನ್ನು ಖಲೀಫತುಲ್ ಮಸೀಹ್ ಸಾನಿಯರೊಡನೆ ಕೇಳಿ ಅವುಗಳ ಉತ್ತರಗಳನ್ನು ಪಡೆಯುತ್ತಿದ್ದರು. ಹೀಗೆ ಈಮಾನ್ ಮತ್ತು ದೃಢವಿಶ್ವಾಸದಿಂದ ತನ್ನ ಜೋಳಿಗೆಯನ್ನು ತುಂಬಿಸಿ ಮರಳಿಹೋಗುತ್ತಿದ್ದರು.

ಅವರು ಭಾರತದಲ್ಲೇ ಸರ್ಕಾರಿ ಸರ್ವಿಸ್ ಶುರುಮಾಡಿದ್ದರು. ಪಾಕಿಸ್ತಾನದ ಸ್ಥಾಪನೆಯ ವರೆಗೆ ಅಲ್ಲೇ ಕೆಲಸಮಾಡುತ್ತಿದ್ದರು. 1951ರಲ್ಲಿ ಹಿಜ್ರತ್ ಮಾಡಿದರು. ಅನಂತರ ಪಾಕಿಸ್ತಾನದ ನೀರು ಮತ್ತು ವಿದ್ಯುಚ್ಛಕ್ತಿ ವಿಭಾಗದಲ್ಲಿ ಉದ್ಯೋಗ ಮಾಡಿದರು. ಸರ್ಕಾರಿ ಸರ್ವಿಸ್‌ನಲ್ಲಿದ್ದಾಗ ಹಲವು ಪಟ್ಟಣಗಳಿಗೆ ಟ್ರಾನ್ಸ್‌ಫರ್ ಆಗಿದ್ದರು. ಬಹಳ ಪ್ರಾಮಾಣಿಕವಾಗಿ ಕೆಲಸಮಾಡಿದ್ದರು. ಜೂನಿಯರ್ ಇಂಜಿನಿಯರ್‌ನಿಂದ ಬಡ್ತಿ ಪಡೆದು ಚೀಫ್ ಇಂಜಿನಿಯರ್ ತನಕ ಆದರು. ಒಂದು ಸಂದರ್ಭದಲ್ಲಿ ಕೆಲವು ಕಾಲಗಳಿಗೆ ಪಾಕಿಸ್ತಾನದ ಪಂಜಾಬ್ ಸರ್ಕಾರದ ನೀರು ಮತ್ತು ವಿದ್ಯುಚ್ಛಕ್ತಿ ವಿಭಾಗದ ಸೆಕ್ರೆಟರಿ ಸಹ ಆಗಿದ್ದರು. ಬಹಳ ಆದರಣೀಯ ಮತ್ತು ಗೌರವಾನ್ವಿತ ಹುದ್ದೆಯಲ್ಲಿ ಇದ್ದುಕೊಂಡು ತನ್ನ ದೇಶವಾದ ಪಾಕಿಸ್ತಾನಕ್ಕೆ ಸೇವೆ ಮಾಡಲು ಸೌಭಾಗ್ಯ ಪಡೆದರು. 1980ರಲ್ಲಿ ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್ ರಹ್ಮಹುಲ್ಲಾಹ್ ಸ್ಪೇನಿನ ಪರ್ಯಟನೆ ಮುಗಿಸಿ ಮರಳಿಬಂದ ನಂತರ ಇಂಟರ್‌ನೇಶನಲ್ ಎಸೋಸಿಯಶನ್ ಆಫ್ ಅಹ್ಮದಿಯಾ ಆರ್ಕಿಟೆಕ್ಟ್ಸ್ ಎಂಡ್ ಇಂಜಿನಿಯರ್ಸ್‌ನ್ನು ಸ್ಥಾಪಿಸಿದ್ದರು. ಆಗ ಇಫ್ತಿಖಾರ್ ಅಲಿ ಖುರೈಶಿ ಸಾಹಿಬರನ್ನು ಅದರ ಮೊದಲ ಚೇರ್‌ಮ್ಯಾನ್ ಆಗಿ ನೇಮಕಮಾಡಲಾಯಿತು. ಆಗ ಅವರು ಚೀಫ್ ಇಂಜಿನಿಯರ್ ಹುದ್ದೆಯಲ್ಲಿ ಇದ್ದರು. ಅವರು 1983ರಲ್ಲಿ ನಿವೃತರಾದರು. ನಿವೃತ್ತರಾದ ನಂತರ ಅವರು ತಮ್ಮ ಜೀವಿತವನ್ನು ವಖ್ಫ್ ಮಾಡಲಿಕ್ಕಾಗಿ ಅರ್ಜಿ ಸಲ್ಲಿಸಿದರು. ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್ ರಹ್ಮಹುಲ್ಲಾಹ್ ಅವರ ವಖ್ಫನ್ನು ಸ್ವೀಕರಿಸಿದ್ದರು. ಹೀಗೆ ಅವರು ವಖ್ಫ್ ಸಹ ಆದರು. 1983ರಲ್ಲಿ ವಕೀಲುಲ್ ಮಾಲ್ ತಹ್‌ರೀಕ್ ಜದೀದ್ ಸಾಲಿಸ್ ಆಗಿ ಸೇವೆ ಮಾಡುವ ಸೌಭಾಗ್ಯ ಲಭಿಸಿತ್ತು. 1980ರಲ್ಲಿ ಇಂಟರ್‌ನೇಶನಲ್ ಎಸೋಸಿಯಶನ್ ಆಫ್ ಅಹ್ಮದಿಯಾ ಆರ್ಕಿಟೆಕ್ಟ್ಸ್ ಎಂಡ್ ಇಂಜಿನಿಯರ್ಸ್‌ನ ಚೇರ್‌ಮ್ಯಾನ್ ಆಗಿ ನೇಮಕಗೊಂಡ ನಂತರ 25 ವರ್ಷಗಳ ಕಾಲ ಅದರ ಕೇಂದ್ರೀಯ ಹೆಡ್ ಚೇರ್‌ಮ್ಯಾನ್ ಆಗಿ ಚುನಾಯಿತಗೊಳ್ಳುತ್ತಿದ್ದರು. ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್ ರಹ್ಮಹುಲ್ಲಾಹ್‌ರ ಕಾಲದಲ್ಲೂ ಇವರಿಗೆ ತುಂಬ ಕೆಲಸಮಾಡಲು ಸೌಭಾಗ್ಯ ಲಭಿಸಿತ್ತು. ಬುಯೂತುಲ್ ಹಮ್ದ್ ಕ್ವಾರ್ಟರಿನ ನಿರ್ಮಾಣ ಮಾಡಲು ಮತ್ತು ರಬ್ವದಲ್ಲಿ ಜಮಾಅತಿನ ಕಟ್ಟಡಗಳನ್ನು ನಿರ್ಮಾಣ ಮಾಡಲು ಸಂದರ್ಭ ಸಿಕ್ಕಿತ್ತು. ನಿರ್ಮಾಣ ವಿಭಾಗದ ಮೇಲ್ವಿಚಾರಕರೂ ಆಗಿದ್ದರು. ವಿವಿಧ ಪ್ರೋಜೆಕ್ಟ್‌ಗಳ ಚೇರ್‌ಮ್ಯಾನ್ ಆಗಿ ನೇಮಕಗೊಂಡಿದ್ದರು. ಫಝ್ಲೆ ಉಮರ್ ಹಾಸ್ಪಿಟಲ್, ಜಾಮಿಅ ಅಹ್ಮದಿಯಾ ಖಿಲಾಫತ್ ಲೈಬ್ರರಿಯಲ್ಲಿ ಸೇವ ಮಾಡಲು ಸೌಭಾಗ್ಯ ಪಡೆದರು. ಅದೇ ರೀತಿಯಲ್ಲಿ ಫಝ್ಲೇ ಉಮರ್ ಫೌಂಡೇಶನನ ಚೇರ್‌ಮ್ಯಾನ್ ಆಗಿ ಸೇವೆ ಮಾಡಲು ಸೌಭಾಗ್ಯ ಪಡೆದರು. 2007ರಲ್ಲಿ ಅವರನ್ನು ತಹ್ರೀಕ್ ಜದೀದಿನ ನಾಇಬ್ ಸದರ್ ಆಗಿ ನೇಮಿಸಲಾಯಿತು. ಬಹಳ ಪ್ರಾಮಾಣಿಕವಾಗಿ, ಮಗ್ನತೆ ಮತ್ತು ಪರಿಶ್ರಮದಿಂದ ಸೇವೆ ಮಾಡುವವರಾಗಿದ್ದರು. ನಾಲ್ಕು ಖಲೀಫರ ಕಾಲಘಟ್ಟವನ್ನು ಅವರು ಕಂಡರು. ಎಲ್ಲ ಸ್ಥಳದಲ್ಲೂ ಯಾವಾಗಲೂ ವಿಧೇಯತೆಯಿಂದ ಮತ್ತು ಪ್ರೀತಿಯಿಂದ ಕೆಲಸ ಮಾಡುತ್ತಿದ್ದರು. ಅಲ್ಪಭಾಷಿಯಾಗಿದ್ದರು.ತಮ್ಮ ಕೆಲಸದಲ್ಲಿ ಮಗ್ನರಾಗಿದ್ದರು. ವಖ್ಫೆ ಝಿಂದಗಿಯಾಗಿ 37ವರ್ಷಗಳ ಕಾಲ ಸೇವೆ ಮಾಡಲು ಸೌಭಾಗ್ಯ ಪಡೆದರು. ನಿಸ್ವಾರ್ಥರಾಗಿ ಕೆಲಸಮಾಡುತ್ತಿದ್ದರು. ನಾನು ಸಹ ಅವರೊಡನೆ ಕೆಲಸ ಮಾಡಿದ್ದೇನೆ. ಅಲ್ಲಾಹನು ಅವರಿಗೆ ಎರಡು ಗಂಡು ಮಕ್ಕಳನ್ನು ಮತ್ತು ಮೂರು ಹೆಣ್ಮಕ್ಕಳನ್ನು ದಯಪಾಲಿಸಿದ್ದನು. ಒಬ್ಬ ಮಗನು ಆರ್ಕಿಟೆಕ್ಟ್ ಆಗಿರುವನು. ಒಬ್ಬಳು ಮಗಳು ಲೇಡಿ ಡಾಕ್ಟರ್ ಆಗಿರುವಳು. ಅಲ್ಲಾಹನು ಅವರೊಡನೆ ಸಹ ಕಾರುಣ್ಯ ಮತ್ತು ಮಗ್‌ಫಿರತಿನಿಂದ ವರ್ತಿಸಲಿ. ಅವರ ಮಕ್ಕಳಿಗೂ ಅವರ ಒಳಿತುಗಳನ್ನು ಜಾರಿಯಲ್ಲಿರಿಸಲು ಸೌಭಾಗ್ಯ ನೀಡಲಿ. ಆಮೀನ್.

ಮೂರನೇ ಜನಾಝುಪಾಕಿಸ್ತಾನದ ಮೌಲವಿ ಹಕೀಂ ಖುರ್ಶಿದ್ ಸಾಹಿಬ್‌ರ ಪತ್ನಿಯಾದ ರಝಿಯಾ ಸುಲ್ತಾನ ಸಾಹಿಬರದ್ದಾಗಿದೆ. 81ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಇವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸಹಾಬಿಯಾದ ಶೇಖ್ ಅಲ್ಲಾಹ್‌ಬಕ್ಷ್ ಸಾಹಿಬರ ಮಗಳಾಗಿದ್ದಳು. ಯೌವ್ವನದಿಂದಲೇ ನಮಾಝ್ ಮತ್ತು ಉಪವಾಸವನ್ನು ನಿಯತವಾಗಿ ಪಾಲಿಸುತ್ತಿದ್ದರು. ತಮ್ಮ ಜೀವಿತವನ್ನು ಸರಳವಾಗಿ ಮತ್ತು ವಿನಯದಿಂದ ಕಳೆದರು. ಬಹಳವಾಗಿ ಅತಿಥಿ ಸತ್ಕಾರ ಮಾಡುತ್ತಿದ್ದರು. ಇವರ ಗಂಡ ಸನ್ಮಾನ್ಯ ಹಕೀಂ ಮೌಲವಿ ಖುರ್‌ಶಿದ್ ಅಹ್ಮದ್ ಸಾಹಿಬರು ಸದರ್ ಉಮೂಮಿ ಎಂಬ ನೆಲೆಯಲ್ಲಿ ಸೇವೆ ಮಾಡುತ್ತಿದ್ದರು. ಈ ಕಾಲಗಳಲ್ಲಿ ಇವರ ಮನೆಯಲ್ಲಿ ಮೀಟಿಂಗ್‌ಗಳು ಮತ್ತು ಜಮಾಅತಿನ ಕಾರ್ಯಕ್ರಮಗಳು ನಡೆಯುತ್ತಿದ್ದುವು. ಬಂದವರ ಅತಿಥಿ ಸತ್ಕಾರ ಸಹ ಮಾಡುತ್ತಿದ್ದರು. ಸನ್ಮಾನು ಮೌಲವಿ ಸಾಹಿಬರಿಗೆ 1984ರಲ್ಲಿ ಎರಡುವರೆ ವರ್ಷಗಳ ಕಾಲ ಅಲ್ಲಾಹನ ಮಾರ್ಗದಲ್ಲಿ ಸೆರೆಯಾಳು ಆಗುವ ಸೌಭಾಗ್ಯ ಲಭಿಸಿತ್ತು. ಈ ಸಮಯದಲ್ಲೂ ಇವರ ಪತ್ನಿಯಾದ ರಝಿಯ ಸುಲ್ತಾನ ಸಾಹಿಬ ಬಹಳ ಸಹನೆ ಮತ್ತು ಧೈರ್ಯದಿಂದ ಈ ಕಾಲವನ್ನು ಕಳೆದರು. ಮಾತ್ರವಲ್ಲ, ದಿನಾಲೂ ಹಲವು ಜನರಿಗಾಗಿ ಊಟ ತಯಾರಿಸಿ ಜೈಲಿಗೆ ಕಳುಹಿಸುತ್ತಿದ್ದರು. ಬಹಳ ಮೌನವಾಗಿ ಸತ್ಕರ್ಮಗಳನ್ನು ಮಾಡುತ್ತಿದ್ದರು. ಹಲವು ಬಡ ಹೆಣ್ಮಕ್ಕಳ ವಿವಾಹಗಳನ್ನು ಮಾಡಿಸಿಕೊಟ್ಟರು. ಹಲವು ಬಡ ಮಕ್ಕಳನ್ನು ಸಾಕಿ ಸಲಹಿದ್ದರು. ಇವರು ಬಹಳ ಸ್ನೇಹಮಯಿ ವ್ಯಕ್ತಿತ್ವ ಹೊಂದಿದ್ದರು ಎಂದು ಅವರ ಸಂಬಂಧಿಕರೂ ಅನ್ಯರೂ ಹೇಳುತ್ತಾರೆ. ಇವರು ಮೂಸಿ ಆಗಿದ್ದರು. ಇವರು ಒಬ್ಬಳು ಮಗಳನ್ನು ಅಗಲಿರುವರು. ಅಲ್ಲಾಹನು ಅವರೊಡನೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ.

ಮುಂದಿನ ಜನಾಝು ಮುಹಮ್ಮದ್ ಮನ್ಸೂರ್ ಅಹ್ಮದ್ ಸಾಹಿಬರ ಮಗನಾದ ಖಾದಿಯಾನಿನ ನಾಇಬ್ ನಾಝಿರ್ ಬೈತುಲ್ ಮಾಲ್ ಮುಹಮ್ಮದ್ ತಾಹಿರ್ ಸಾಹಿಬ್‌ರದ್ದಾಗಿದೆ. ಮೇ 28ರಂದು ಕರುಳಿನ ಕ್ಯಾನ್ಸರ್ ಕಾರಣದಿಂದ 71ನೇ ವಯಸ್ಸಿನಲ್ಲಿ ವಫಾತ್ ಆದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ದಿವಂಗತರು ಹೈದರಾಬಾದ್ ನಿವಾಸಿಯಾಗಿದ್ದರು. 1989ರಲ್ಲಿ ಖಾದಿಯಾನಿನ ಜಾಮಿಅ ಅಹ್ಮದಿಯಾದಿಂದ ತೇರ್ಗಡೆಯಾದ ನಂತರ ಕೊನೆಯುಸಿರಿನ ವರೆಗೆ, ಎಂದರೆ 31 ವರ್ಷಗಳ ಕಾಲ ವಿವಿಧ ವಿಭಾಗಗಳಲ್ಲಿ ಸೇವೆ ಮಾಡುವ ಸೌಭಾಗ್ಯ ಪಡೆದರು. ಸೇವೆಯ ಕಾಲಾವಧಿಯಲ್ಲಿ ಸಾಂಪತ್ತಿಕ ವಿಭಾಗದಲ್ಲಿ ಕೆಲಸಮಾಡಲು ಸೌಭಾಗ್ಯ ಪಡೆದರು. ಬೈತುಲ್ ಮಾಲ್ ಆಮದಿನಲ್ಲಿ ಏಳು ವರ್ಷಗಳು, ನಝಾಮತ್ ಮಾಲ್ ವಖ್ಫ್ ಜದೀದಿನಲ್ಲಿ 9 ವರ್ಷಗಳು, ಅನಂತರ ನಾಇಬ್ ನಾಝಿರ್ ವಖ್ಫ್ ಜದೀದಿನಲ್ಲಿ 3 ವರ್ಷಗಳು, ನಾಝಿಮ್ ಮಾಲ್ ವಖ್ಫ್ ಜದೀದ್ ಆಗಿ 8 ವರ್ಷಗಳು ಮತ್ತು ನಾಇಬ್ ನಾಝಿರ್ ಬೈತುಲ್ ಮಾಲ್ ಆಗಿ 2 ವರ್ಷಗಳು ಸೇವೆ ಸಲ್ಲಿಸಲು ಸೌಭಾಗ್ಯ ಪಡೆದರು. ಅತ್ಯಂತ ನಿಷ್ಠಾವಂತ, ಸರಳ ಸ್ವಭಾವದ, ಸ್ನೇಹಮಯಿ, ಸಹಾನುಭೂತಿಯಿರುವ ಜಮಾಅತಿನ ಸೇವಕರಾಗಿದ್ದರು. ಭಾರತದ ಎಲ್ಲ ಕಡೆ ಪರ್ಯಟನೆ ನಡೆಸಿದ್ದರು. ಸಾಂಪತ್ತಿಕ ವ್ಯವಸ್ಥೆಯ ಬಗ್ಗೆ ಜನರಿಗೆ ತಿಳಿಸಿಕೊಡುತ್ತಿದ್ದರು. ಅವರನ್ನು ಸಾಂಪತ್ತಿಕ ತ್ಯಾಗಗಳಲ್ಲಿ ಸೇರಿಸಿದ್ದರು. ಅಲ್ಲಾಹನ ಅನುಗ್ರಹದಿಂದ ಈ ಪರ್ಯಟನೆಗಳ ಮತ್ತು ಪ್ರಯತ್ನಗಳ ಕಾರಣದಿಂದ ವಖ್ಫೇ ಜದೀದಿನ ಸಾಂಪತ್ತಿಕ ಬಜೆಟಿನಲ್ಲಿ ತುಂಬ ವರ್ಧನೆಯುಂಟಾಯಿತು. ಇವರು ಮೂಸಿಯಾಗಿದ್ದರು. ಇವರು ವೃದ್ಧ ತಂದೆ ತಾಯಂದಿರನ್ನು, ಪತ್ನಿಯನ್ನು ಮತ್ತು ಎರಡು ಗಂಡು ಮಕ್ಕಳನ್ನು ಅಗಲಿರುವರು. ದಿವಂಗತರು ಖುದ್ದಾ ಬೋರ್ಡಿನ ಸದರ್ ಆದ ಮೌಲಾನ ಮುಹಮ್ಮದ್ ಕರೀಮುದ್ದೀನ್ ಶಾಹಿದ್ ಸಾಹಿಬ್‌ರ ಹಿರಿಯ ಅಳಿಯರಾಗಿದ್ದರು. ಖಾದಿಯಾನಿನ ನಾಝಿರ್ ಅಅ್‌ಲಾ ಸಾಹಿಬರಾಧ ಸನ್ಮಾನ್ಯ ಇನಾಂ ಗೋರಿ ಸಾಹಿಬ್‌ರ ಮಾವರ ಮಗನಾಗಿದ್ದರು. ಇವರ ಒಬ್ಬ ಸಹೋದರ ಜಮಾಅತಿನ ಮುಬಲ್ಲಿಗ್ ಆಗಿರುವರು. ಅಲ್ಲಾಹನು ಅವರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ, ಅವರ ಮಕ್ಕಳನ್ನು ಸಂರಕ್ಷಿಸಲಿ.

ಮುಂದಿನ ಜನಾಝು ಜಾಮಿಅ ಘಾನದ ಅಧ್ಯಾಪಕರಾದ ಮಿರ್ಝಾ ಖಲೀಲ್ ಅಹ್ಮದ್ ಬೇಗ್ ಸಾಹಿಬರ ಮಗನಾದ ಅಖೀಲ್ ಅಹ್ಮದ್‌ರದ್ದಾಗಿದೆ. ಅಕೀಲ್ ಅಹ್ಮದ್ ಪಾಕಿಸ್ತಾನಕ್ಕೆ ಹೋಗಿದ್ದನು. ಅವನಿಗೆ yolk sac tumor ಇದೆಯೆಂದು ತಿಳಿದುಬಂದಿತ್ತು. ಸ್ವಲ್ಪ ಕಾಲ ರೋಗಗ್ರಸ್ತರಾಗಿ ಹದಿಮೂರನೇ ವಯಸ್ಸಿನಲ್ಲಿ ಅಲ್ಲಾಹನ ವಿಧಿ ಪ್ರಕಾರ ವಫಾತ್ ಆದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಚಿಕ್ಕಂದಿನಂದಲೇ ನಿಯತವಾಗಿ ಜಮಾಅತ್ ಆಗಿ ನಮಾಝ್ ನಿರ್ವಹಿಸುತ್ತಿದ್ದರು. ತನಗಿಂತ ಚಿಕ್ಕವರ ಬಗ್ಗೆ ಗಮನಹರಿಸುತ್ತಿದ್ದರು. ಬಹಳ ಪುಣ್ಯವಂತ ಮತ್ತು ವಿಧೇಯನಾದ ಮಗುವಾಗಿದ್ದನು. ಘಾನದ ಮದ್ರಸತುಲ್ ಹಿಫ್‌ಝ್‌ನಲ್ಲಿ ಪವಿತ್ರ ಖುರ್‌ಆನಿನ 6 ಭಾಗಗಳನ್ನು ಕಂಠಪಾಠ ಮಾಡುವ ಸೌಭಾಗ್ಯ ಪಡೆದರು. ಇವನು ತನ್ನ ತಂದೆತಾಯಂದಿರನ್ನು, ಎರಡು ಸಹೋದರಿಯರಾದ ಅದೀಲ ಮತ್ತು ಶಕೀಲರನ್ನು ಅಗಲಿರುವನು. ಇವರಿಬ್ಬರೂ ವಖ್ಫೆ ನೌ ಮಕ್ಕಳಾಗಿರುವರು. ಇವರ ತಂದೆಯವರಾದ ಮಿರ್ಝಾ ಖಲೀಲ್ ಬೇಗ್ ಸಾಹಿಬರು ಇಂಟರ್‌ನ್ಯಾಶನಲ್ ಜಾಮಿಅ ಘಾನದಲ್ಲಿ ಸೇವೆ ಸಲ್ಲಿಸುವ ಸೌಭಾಗ್ಯವನ್ನು

ಪಡೆಯುತ್ತಿದ್ದಾರೆ. ಜಾಮಿಯದ ಉಸ್ತಾದ್ ಆದ ನಸೀರ್ ಅಹ್ಮದ್ ಸಾಹಿಬರು ಘಾನದಿಂದ ಬರೆಯುತ್ತಾರೆ: ಅಖೀಲ್ ಅಹ್ಮದ್ ಸಾಹಿಬರು ಬಹಳ ಪ್ರೀತಿಯ, ಸ್ನೇಹಮಯಿ ವ್ಯಕ್ತಿತ್ವದ ವ್ಯಕ್ತಿಯಾಗಿದ್ದರು. ಅವನ ಹಸನ್ಮುಖ ಮತ್ತು ಮುಗುಳ್ನಗೆಯ ಚಹರೆ ಯಾವಾಗಲೂ ನಮ್ಮ ನೆನಪಲ್ಲಿ ಇರುವುದು. ಬಹಳ ನಿಷ್ಕಳಂಕ ಮತ್ತು ಅನುಸರಣೆಯುಳ್ಳ ಹುಡುಗನಾಗಿದ್ದನು. ಜಮಾಅತಾಗಿ ನಮಾಝ್ ಮಾಡುವ ಅಭ್ಯಾಸವನ್ನು ಹೊಂದಿದ್ದರು. ಪವಿತ್ರ ಖುರ್‌ಆನಿನೊಂದಿಗೆ ಅಪರಿಮಿತವಾದ ಪ್ರೇಮವಿತ್ತು. ತಮ್ಮ ರೂಟಿನಿನ ಕಲಿಕೆಯೊಂದಿಗೆ ಕಳೆದ ವರ್ಷದ ಪವಿತ್ರ ಖುರ್‌ಆನ್ ಭಾಗಗಳನ್ನು ಸಹ ಪುನರಾವರ್ತನೆ ಮಾಡುತ್ತಿದ್ದನು. ದಿನಾಲೂ ಮಗ್‌ರಿಬ್ ನಮಾಝ್ ನಂತರ ಊಟಮಾಡಿ ಮಸೀದಿಗೆ ಹೋಗಿ ತನ್ನ ಪಾಠಗಳನ್ನು ಓದುತ್ತಿದ್ದನು. ಸ್ಕೂಲಿನ ಹೋಂವರ್ಕ್ ನಂತರ ಪವಿತ್ರ ಖುರ್‌ಆನಿನ ಕೆಲವು ಭಾಗವನ್ನು ಯಾವಾಗಲೂ ಕಂಠಪಾಠ ಮಾಡಿ ಮಲಗುತ್ತಿದ್ದನು. ನಾನು ದೊಡ್ಡವನಾದ ಮೇಲೆ ಮುಬಲ್ಲಿಗ್ ಆಗಿ ಜಮಾಅತಿನ ಸೇವೆ ಮಾಡುವೆನು ಎಂದು ಹೇಳುತ್ತಿದ್ದನು. ಅಲ್ಲಾಹನ ಇವರ ಪದವಿಗಳನ್ನು ಉನ್ನತಗೊಳಿಸಲಿ. ತಂದೆತಾಯಂದಿರಿಗೆ ಮತ್ತು ಸಹೋದರಿಯರಿಗೆ ದುಃಖವನ್ನು ಸಹಿಸಲು ಶಕ್ತಿ ನೀಡಲಿ.

ಇಂದಿನ ಸ್ಥಿತಿಯಲ್ಲಿ ಜನಾಝಾ ಹಾಝಿರ್ ಅಂತು ಇಲ್ಲಿ ಬರುತ್ತಿಲ್ಲ. ಜನಾಝಾ ನಮಾಝ್ ನಿರ್ವಹಿಸಬೇಕೆಂದು ಹೇಳಿ ಹಲವರ ಪತ್ರಗಳು ನನಗೆ ಬರುತ್ತದೆ. ಎಲ್ಲರ ಜನಾಝಾದ ಬಗ್ಗೆ ಹೇಳಲು ತುಂಬ ಸಮಯ ಬೇಕಾಗುವುದು. ಕೇವಲ ಹೆಸರುಗಳನ್ನು ಮಾತ್ರ ಹೇಳುವುದಾದರೂ ತುಂಬ ಸಮಯ ಬೇಕಾಗುವುದು. ಆದ್ದರಿಂದ ಕೆಲವು ಜನರ ಬಗ್ಗೆ ನಾನು ಪ್ರಸ್ತಾಪಿಸುತ್ತೇನೆ. ಸಾಮಾನ್ಯವಾಗಿ ಹಲವರ ಅರ್ಜಿಗಳು ಬರುತ್ತವೆ. ನಾನು ಅವರ ಹೆಸರು ಹೇಳದಿದ್ದರೂ ಇಲ್ಲಿ ನಾನು ನಿರ್ವಹಿಸುವ ಜನಾಝಾಗಳಲ್ಲಿ ಅವರು ಸಹ ಒಳಪಡುತ್ತಾರೆ. ಅಲ್ಲಾಹನು ಅವರೆಲ್ಲರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ. ಜನಾಝಾ ನಿರ್ವಹಿಸಲು ವಿನಂತಿಸಿದ ಅಗಲಿದವರ ಸಂಬಂಧಿಕರೆಲ್ಲರಿಗೂ ಸಹನೆ ಮತ್ತು ಧೈರ್ಯ ನೀಡಲಿ. ಅವರಿಗೆ ಅವರ ಒಳಿತುಗಳನ್ನು ಜಾರಿಯಲ್ಲಿರಿಸಲು ಸೌಭಾಗ್ಯ ನೀಡಲಿ. ಹೇಗಿದ್ದರೂ ನಾನು ಈ ಎಲ್ಲ ಜನಾಝಾ ಗ಼ಾಇಬ್‌ಗಳನ್ನು ಜುಮಾ ನಂತರ ನಿರ್ವಹಿಸುವೆನು. ಇನ್‌ಶಾ ಅಲ್ಲಾಹ್.

*************

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಮತದತ್ತ ತಮ್ಮ ಒಲವು ವ್ಯಕ್ತಪಡಿಸಿದಾಗ ಅವರು ಕ್ರೈಸ್ತರಾಗಿರಲು ಒಂದು ಶರತ್ತನ್ನು ಮುಂದಿಟ್ಟಿದ್ದರು ಅದೇನೆಂದರೆ ಭಾನುವಾರದ ದಿನ ಸಬ್ತ್ ಎಂದು ನಿಗದಿಪಡಿಸಬೇಕು. ಆ ಜನರನ್ನು ಕ್ರೈಸ್ತ ಮತಕ್ಕೆ ಸೆಳೆಯುವ ಲಾಲಾಸೆಯಲ್ಲಿ ಪಾದರಿಗಲು ಅವರ ಈ ಬೇಡಿಕೆ ಮನ್ನಿಸಿದರು, ಈ ರೀತಿ ಸಬ್ತನ್ನು ಅವಹೇಳನಗೊಳಿಸುವ ವಿಷಯದಲ್ಲಿ ಕ್ರೈಸ್ತರು ಯಹೂದಿಯರಿಗಿಂತಲೂ ಒಂದು ಹೆಜ್ಜೆ ಮುಂದಾದರು. ಏಕೆಂದರೆ ಯಹೂದಿಯರು ಸಮಯ ಸಿಕ್ಕಾಗಲೆಲ್ಲ ಸಬ್ತ್ ದಿವಸ ತಮ್ಮ ಲಾಭದ ಕೆಲಸಗಳನ್ನು ಮಾಡಿಕೊಳ್ಳುತ್ತಿದ್ದರು, ಆದರೆ ಕ್ರೈಸ್ತರು ಶನಿವಾರ ದಿನವನ್ನು ಶಾಶ್ವತವಾಗಿ ಕೆಲಸದ ದಿನ ಎಂದು ಘೋಷಿಸಿ ತಮ್ಮ ಸುಖಕ್ಕಾಗಿ ಭಾನುವಾರದ ದಿನವನ್ನು ಆರಿಸಿಕೊಂಡರು. ಅಲ್ಲಾಹನ ಆಜ್ಞೆಯ ಮೂಲಕ ಆದರೂ ಹೀಗೆ ಮಾಡಿದ್ದರೆ ಆಕ್ಷೇಪವೇನಿರಲಿಲ್ಲ. ಆದರೆ ಇವರು ತಮ್ಮ ಸ್ಪರ್ಧೆಯಿಂದಾಗಿ ಹೀಗೆ ಮಾಡಿಕೊಂಡರು. ಹಝ್ರತ್ ಈಸ ಮಸೀಹ್‌ರವರ ನೂರಾರು ವರ್ಷಗಳ ನಂತರ ಮಾರ್ಪಡಿಸಿಕೊಂಡರು. ಹಝ್ರತ್ ಈಸ ಮಸೀಹರು ಸ್ವಯಂ ಸಬ್ತ್ ಅನ್ನು (ಅಂದರೆ ಶನಿವಾರದ ದಿವಸ) ಗೌರವಿಸುತ್ತಿದ್ದರು. ಅದಾಗ್ಯೂ ಅವರು ಯಹೂದಿಯರ ಅತೀರೇಕಕ್ಕೆ ಇಷ್ಟಪಡುತ್ತಿರಲಿಲ್ಲ. ಅಂದ ಹಾಗೆ ಅವರು ಹೇಳುತ್ತಿದ್ದರು– ಸಬ್ತ್ ದಿನವು ಮನುಷ್ಯರಿಗಾಗಿದೆ ಹೊರತು ಮನುಷ್ಯನು ಸಬ್ತ್ ಗೋಸ್ಕರವಲ್ಲ. (ಮರ್‌ಖಸ್, ಭಾಗ–2, ವಚನ–27)

ಅಂದರೆ ಅದರ ಅರ್ಥವು ನೈಜ ಅಗತ್ಯಗಳು ಮುಂದಾದರೆ ಸಬ್ತಿನ ಎಲ್ಲ ಆಜ್ಞೆಗಳನ್ನು ಪಾಲಿಸಲು ಆಗುವುದಿಲ್ಲ ಮತ್ತು ಸಬ್ತ್ ದಿನವು ಧರ್ಮ ಕಾರ್ಯಗಳನ್ನು ತಡೆಯುವುದಿಲ್ಲ. ಯಹೂದಿಯರಲ್ಲಿ ಇಂತಹದೊಂದು ನಿಷ್ಪ್ರಯೋಜಕ ಭಾವನೆ ಬಂದು ಬಿಟ್ಟಿತು ಸಬ್ತ್ ದಿನ ತಬ್ಲೀಗ್ (ಪ್ರಚಾರಕರ್ಯ) ಉಪದೇಶ ಮಾಡುವುದು ಮತ್ತು ಇನ್ನಿತರ ಪುಣ್ಯ ಕೆಲಸ ಮಾಡುವುದು ಸಹ ಅಧರ್ಮ ಎನ್ನುತ್ತಿದ್ದರು. ಅದಾಗ್ಯೂ ಸಬ್ತ್ ದಿನ ಕೇವಲ ಲೌಕಿಕ ಕಾರ್ಯಗಳಿಂದ ತಡೆಯಲಾಗಿತ್ತು. ಕೆಲವು ಲೇಖಕರು ಬರೆಯುತ್ತರೆ– ಕ್ರೈಸ್ತರು ಭಾನುವಾರದ ದಿವಸ ಸಬ್ತ್ ಎಂದು ಆಚರಿಸಲು ಪ್ರಾರಂಭಿಸಿದ್ದೇಕೆಂದರೆ ಯಹೂದಿಯರೇತರ ದೇಶಗಳಲ್ಲಿ ಅವರನ್ನು ವಿರೋಧಿಸಬಾರದು. ಬರ್‌ನಬಾಸ್ ಪತ್ರದಲ್ಲಿ ಬರೆಯುತ್ತಾನೆ– ಅದಕ್ಕೆ ಕಾರಣ ಏನೆಂದರೆ ಆ ದಿನ ಮಸೀಹ್ ಮೃತರಿಂದ ಬದುಕಿ ಮೇಳಕೆತ್ತಲ್ಪಟ್ಟಿದ್ದರು. (ಜಿವಿಶ್ ಇನ್‌ಸೈಕ್ಲೋ ಪೀಡಿಯ: 10) ಒಟ್ಟಿನಲ್ಲಿ ಕಾರಣವೇನೆ ಇರಲಿ ಅದು ಹಝ್ರತ್ ಮೂಸಾ(ಅ) ರವರ ಶಿಕ್ಷಣಕ್ಕೆ ವಿರುದ್ಧವಾಗಿತ್ತು. ಇಸ್ಲಾಮ್ ಧರ್ಮವು ಸಬ್ತ್‌ಗೋಸ್ಕರ ಒಂದು ದಿವಸ ನಿಗದಿಪಡಿಸಿದೆ ಅದು ಶುಕ್ರವಾರದ ದಿನವಾಗಿದೆ. ಜುಮುಅ ದಿನವನ್ನು ಯಾರು ಮುಸ್ಲಿಮರಾಗಲಿ ಯೋಚಿಸಿ ನಿಗದಿ ಮಾಡಿಲ್ಲ ಬದಲು ಅಲ್ಲಾಹನ ಆಜ್ಞೆಯ ಪ್ರಕಾರ ನಿಗದಿಗೊಂಡಿದೆ. ಆದುದರಿಂದ ಇದರ ಮೇಲೆ ಕ್ರೈಸ್ತ ಮೇಲೆ ಆಕ್ಷೇಪ ಮಾಡಿದಂತೆ ಮಾಡಲಾಗುವುದಿಲ್ಲ.

ಇಸ್ಲಾಮ್ ಧರ್ಮವು ಜುಮುಅ ದಿನಕ್ಕಾಗಿ ಈ ವಿಶೇಷತೆಗಳನ್ನು ನಿಗದಿಪಡಿಸಿದೆ– ಆ ದಿನ ರಜೆ ಇರಬೇಕು, ಹೆಚ್ಚೆಚ್ಚು ಆರಾಧನೆ ಮಾಡಬೇಕು, ಅದನ್ನು ರಾಷ್ಟ್ರೀಯ ದಿನವನ್ನಾಗಿ ಮಾಡಬೇಕು, ಸ್ನಾನ ಮಾಡಬೇಕು, ಸ್ವಚ್ಛತೆ ಇರಬೇಕು, ರೋಗಿಗಳನ್ನು ಕಾಣಬೇಕು ಅದೇ ರೀತಿ ಸಾಮುದಾಯಿಕ ಹಾಗೂ ಸಾಂಸ್ಕೃತಿಕ ಕಾರ್ಯಗಳನ್ನು ಮಾಡಬೇಕು. ಹೌದು ಜುಮುಅ ನಮಾಝ್ ನಂತರ ಜನರಿಗೆ ತಮ್ಮ ಕೆಲಸ ಕಾರ್ಯಗಳಿಗಾಗಿ ಹೊರಡಲು ಅನುಮತಿ ನೀಡಲಾಗಿದೆ ಆದರೂ ಸಹ ಹೆಚ್ಚು ಸಮಯ ದೇವಸ್ಮರಣೆಯಲ್ಲಿ ಕಳೆಯುವುದು ಉತ್ತಮ.

ವಿಷಾದದ ಸಂಗತಿ ಎಂದರೆ ಮುಸ್ಲಿಮರು ಸಹ ಸಬ್ತ್ ದಿನವನ್ನು ಗೌರವಿಸಲಿಲ್ಲ ಒಂದು ದೀರ್ಘ ಅವಧಿಯವರೆಗೆ ದೊಡ್ಡ ನಗರಗಳಲ್ಲಿ ಹೊರತುಪಡಿಸಿದರೆ ಭಾರತದಲ್ಲಿ ಜುಮುಅ ನಮಾಝ್ ನಿರ್ವಹಿಸಲಾಗುತ್ತಿರಲಿಲ್ಲ ಈಗೀಗ ಸ್ವಲ್ಪ ಅರಿವು ಬರತೊಡಗಿದೆ ಆದರೂ ಸಹ ನೂರರಲ್ಲಿ ಒಬ್ಬನು ಜುಮುಅ ನಮಾಝ್ ನಿರ್ವಹಿಸಲು ಸಿದ್ಧನಿಲ್ಲ. ಇನ್ನಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್. ಸರಕಾರವು ಬಹಳ ಕಷ್ಟಪಟ್ಟು ಅಹ್ಮದಿಯಾ ಸಂಘಟನೆಯ ಸ್ಥಾಪಕರ ಕೇಳಿಕೆಯ ಮೆರೆಗೆ ಮತ್ತು ಅಹ್ಮದಿಯಾ ಜಮಾಅತ್ತಿನ ಸತತ ಪ್ರಯತ್ನಗಳ ಫಲವಾಗಿ ಒಂದೆ ಗಂಟೆಯ ರಜೆ ಮಂಜೂರು ಮಾಡಿದೆ. ಹೇಳಲು ವಿಷಾದ ಅನಿಸುತ್ತಿದೆ ಈಗ ಸಹ ಮುಸ್ಲಿಮರು ಅದರಿಂದ ಸರಕಾರಿ ಅಧಿಕಾರಿಗಳಿಗೆ ಹೇಳುತ್ತಾರೆ– ಜುಮುಅ ನಮಾಝಿಗೋಸ್ಕರ ರಜೆ ಕೇಳಿದ್ದ ಅಹ್ಮದೀಯರ ಉಪದ್ರವ ಆಗಿದೆ ನಿಮಗೆ ಬೇಕಾಗಿಲ್ಲ. **(ತ಼ಫ್‌ಸೀರೆ ಕಬೀರ್, ಸಂಪುಟ–1, ಪುಟ–497–498)**

*(ಪುಟ ಸಂಖ್ಯೆ 12ರ ಉಳಿದ ಭಾಗ)*

ಒಂದು ಸ್ಥಳ ತೋರಿಸ ಬಯಸುತ್ತೇನೆ. ನಾನು ನೋಡಿದೆ. ಅಲ್ಲಿ ಒಂದು ಹನಿಹನಿ ನೀರು ಬೀಳುತ್ತಿತ್ತು. ಅದು ಸಮೀಪದ ಪರ್ವತದಿಂದ ಬರುತಿತ್ತು. ಅವಳು ಹೇಳುತ್ತಿದ್ದಳು. ಊರೆಲ್ಲ ಒಂದು ದೀರ್ಘ ಕಾಲದಿಂದ ಇಲ್ಲಿಂದಲೇ ನೀರಿನ ಅಗತ್ಯ ಪೂರೈಸಿಕೊಳ್ಳುತ್ತಿದೆ. ಸರಕಾರ ಸಹ ಇಲ್ಲಿ ಎಷ್ಟೋ ಸಮಯ ಪ್ರಯತ್ನ ಮಾಡಿ ನೋಡಿದೆ. ಆದರೆ ನೀರು ದೊರೆಯಲಿಲ್ಲ. ನಾನು ಅವರಿಗೆ ಹೇಳಿದೆ. ನಾವೂ ಪ್ರಯತ್ನ ಮಾಡುತ್ತೇನೆ. ಅಲ್ಲಾಹನು ಅನುಗ್ರಹಿಸುವನು. ಒಂದು ಭಾವಿ ತೋಡುವ ಕಂಪನಿಯೊಂದಿಗೆ ಮಾತುಕತೆಯಾಯಿತು. ಅವರನ್ನು ಅಲ್ಲಿ ಕಳುಹಿಸಲಾಯಿತು. ಅಲ್ಲಾಹನ ಅನುಗ್ರಹದಿಂದ ಎರಡು ವಾರಗಳ ನಂತರ ಅಲ್ಲಿ ನೀರು ದೊರೆಯತೊಡಗಿತು. ಮತ್ತು Labotrary Test ಮಾಡಿಸಲಾಯಿತು. ಅಲ್ಲಿ ಇದ್ದ ಭಾವಿಗಳಲ್ಲಿ ಇದು ಅತ್ಯುತ್ತಮವಾಗಿತ್ತು. ಈಗ ಜನರು ಅಲ್ಲಾಹನ ಅನುಗ್ರಹದಿಂದ ಮನವರಿಕೆ ಮಾಡಿಕೊಂಡರು. ಅಹ್ಮದಿಯಾ ಜಮಾಅತ್ ನಿಜವಾಗಿಯೂ ಈ ಭೂಮಿಯ ಮೇಲೆ ಅಲ್ಲಾಹನು ಸ್ಥಾಪಿಸಿದ ಜಮಾಅತ್ ಆಗಿದೆ. ದುಆ ಮತ್ತು ಸದಖಾಗಳ ಮೂಲಕ ಅವರ ಮೇಲೆ ಅನುಗ್ರಹವಾಗುತ್ತದೆ.

Humanity First:

ಹಿಂದಿನ 26 ವರ್ಷಗಳಿಂದ ಮಾನವೀಯತೆಯ ಸೇವೆಯಲ್ಲಿ ತೊಡಗಿಕೊಂಡಿದೆ. ಅಲ್ಲಾಹನ ಅನುಗ್ರಹದಿಂದ 54 ದೇಶಗಳಲ್ಲಿ ರಿಜಿಸ್ಟ್ರರ್ ಮಾಡಿಕೊಂಡಿದೆ. ಪ್ರಸಕ್ತ ವರ್ಷ ಕೊಂಗೋದಲ್ಲಿ ಮೆಡಿಕಲ್ ಸೆಂಟರ್ ಹಾಕಲಾಗಿತ್ತು. ಬಾಂಗ್ಲಾದೇಶ, ಗೋಯಟೆಮಾಲ, ಇಂಡೋನೆಷಿಯಾ, ಮಾಲಿ, ಬೆನಿಯನ್ ನಾಯೆಚೇರಿಯಾ, ಸೆನೆಗಾಲ್ ಮತ್ತು ಹಲವು ದೇಶಗಳಲ್ಲಿ ಮೆಡಿಕಲ್ ಸೆಂಟರ್ ಸ್ಥಾಪಿಸಲಾಗಿದೆ. ಕ್ಯಾಂಪ್ ಮಾಡಲಾಗಿದೆ ಮತ್ತು ಆಸ್ಪತ್ರೆ ಕ್ಲಿನಿಕ್ ಸಹ ಕೆಲವು ಸ್ಥಳಗಳಲ್ಲಿ ಪ್ರಾರಂಭಿಸಲಾಗಿದೆ. ಅದಲ್ಲದೇ ನೀರಿನ ನಲ್ಲಿ ಹಾಕುವ ಕೆಲಸ ಮತ್ತು ಇತರ ತುರ್ತು ಕಾರ್ಯಗಳನ್ನು ಸಹ ಮಾಡುತ್ತಿದ್ದಾರೆ. ಮತ್ತು ಉತ್ತಮ ರೀತಿಯಲ್ಲಿ ಮಾಡುತ್ತಿದ್ದಾರೆ. ಪ್ರಸಕ್ತ ವರ್ಷ ಉಚಿತ ಮೆಡಿಕಲ್ ಕ್ಯಾಂಪ್ ಹಾಕಲಾಗಿದ್ದು, ಅದರ ಸಂಖ್ಯೆ 345 ಆಗಿರುತ್ತದೆ. ಲೋಕದ ವಿವಿಧ ದೇಶಗಳಲ್ಲಿ ಅವುಗಳಲ್ಲಿ ಆಫ್ರಿಕಾ ದೇಶಗಳೂ ಇವೆ. ಏಷ್ಯಾ ದೇಶಗಳು, ಯೂರೋಪ್, ದಕ್ಷಿಣ ಅಮೇರಿಕ ಸಹ ಸೇರಿವೆ. ಈ ಮೆಡಿಕಲ್ ಕ್ಯಾಂಪ್‌ಗಳ ಮೂಲಕ 2 ಲಕ್ಷ 30 ಸಾವಿರಕ್ಕಿಂತ ಹೆಚ್ಚು ರೋಗಿಗಳ ಚಿಕಿತ್ಸೆ ಮಾಡಲಾಗಿದೆ. ಉಚಿತವಾಗಿ ಔಷಧಿ ಪೂರೈಸಲಾಗಿದೆ. ಚಿಕಿತ್ಸಾ ವ್ಯವಸ್ಥೆ ಇಲ್ಲದಂತ ಸ್ಥಳಗಳಿಗೂ ತಲುಪಿಸಿದ್ದಾರೆ.

ಉಚಿತ ಕಣ್ಣಿನ ಆಪರೇಷನ್: Humanity First ಸಂಸ್ಥೆಗೆ ವಿವಿಧ ರಾಷ್ಟ್ರಗಳಲ್ಲಿ ಬಡ ನಿರ್ಗತಿಕ ಜನರಿಗೆ ಉಚಿತವಾಗಿ ಕಣ್ಣಿನ ಆಪರೇಷನ್ ಮಾಡಿಸುವ ಭಾಗ್ಯ ದೊರೆತಿದೆ. ಪ್ರಸಕ್ತ ವರ್ಷ ಈ ಕಾರ್ಯಕ್ರಮಗಳನ್ವಯ ಬೋರ್‌ಕೆನೋ ಫಾಸು, ಇಂಡೋನೇಷಿಯಾ ಮತ್ತು ನಾಯ್‌ಚೇರಿಯಾದಲ್ಲಿ (592) ಐದುನೂರ ತೊಂಬತ್ತೆರಡು ಆಪರೇಷನ್ ಮಾಡಿಸಲಾಯಿತು. ಬೋರ್‌ಕೇನೊ ಫಾಸೊದಲ್ಲಿ ಇಲ್ಲಿಯವರೆಗೆ 8,595 ಕಣ್ಣಿನ ಆಪರೇಷನ್ ಉಚಿತವಾಗಿ ಮಾಡಿಸಲಾಯಿತು.

ಅದೇ ರೀತಿ ರಕ್ತದಾನ ಮಾಡಲಾಯಿತು. ಹಲವು ಸಾವಿರ ರಕ್ತದ Bottle ಗಳು ವಿವಿಧ ದೇಶಗಳಲ್ಲಿ ಹಂಚಲಾಯಿತು. ಅದೇ ರೀತಿ ಹಲವು ಜನಹಿತ ಕಾರ್ಯಗಳಿವೆ. ಸೇವಾ ಸಂಸ್ಥೆಗಳಿಗೆ ನೆರವು ನೀಡಲಾಯಿತು. ಇತರ ಅವಶ್ಯಕ ಜೀವನ ಸಾಮಾಗ್ರಿಗಳನ್ನು ಒದಗಿಸಲಾಯಿತು. ಇಂದಿನ ಮಹಾಮಾರಿ ರೋಗದ ಸಮಯದಲ್ಲೂ ಸೇವೆ ನಿರತವಾಗಿದೆ. ಅದು ತುಂಬ ಪ್ರಶಂಸೆಗೆ ಪಾತ್ರವಾಗಿದೆ.

MTA Inernational: ಈ ಸಮಯ ಸುಮಾರು 16 ವಿಭಾಗಗಳಿವೆ. 496 ಕಾರ್ಯಕರ್ತರು ಹಗಲಿರುಳು ಸೇವನಿರತರಾಗಿದ್ದಾರೆ. 275 ಪುರುಷ ಮತ್ತು 142 ಮಹಿಳಾ ಸ್ವಯಂಸೇವಕರಿದ್ದಾರೆ. ಅದಲ್ಲದೆ 79 ಕಾಯಂ ಪಾವತಿ ಕಾರ್ಯಕರ್ತರಿದ್ದಾರೆ. 27 ಮೇ 2020 ರಂದು ಅದನ್ನು ಇನ್ನಷ್ಟು ವಿಸ್ತಾರ ಗೊಳಿಸಲಾಯಿತು. ಹೀಗೆ MTA ಒಂದು ಹೊಸ ಯುಗವನ್ನು ಪ್ರವೇಶಿಸಿದೆ. ಅದರ ಹಿಂದಿನ 5 ಚಾನಲ್‌ಗಳ ಬದಲು ಈಗ ಲೋಕದ ವಿವಿಧ ವಲಯಗಳಲ್ಲಿ 8 ಚಾನಲ್‌ಗಳನ್ನು ಪ್ರಾರಂಭಿಸಲಾಗಿದೆ. ಅದರಲ್ಲಿಯೂ ಈಗ 24 ಗಂಟೆ ಸತತವಾಗಿ ಪ್ರಸಾರ ಕಾರ್ಯ ನಡೆಯುವುದು.

MTA 2014 ರಿಂದ ಕಾರ್ಯಕ್ರಮಗಳ Subtitlings ಮೂಲಕ ಅನುವಾದಗಳು ಬಿತ್ತರಗೊಳ್ಳುತ್ತಿವೆ. ಪ್ರಸಕ್ತ ವರ್ಷ ಅನುವಾದದ ಈ ಸಂಖ್ಯೆ ಹೆಚ್ಚಿಸಿ 10 ಮಾಡಲಾಗಿದೆ. ಅದರಲ್ಲಿ ಇಂಗ್ಲೀಷ್, ಉರ್ದು, ಅರೆಬಿ, ಫ್ರಾಂಚೆಸಿ, ಜರ್ಮನ್, ಹಸ್ಪಾನಿ, ಫಾರ್ಸಿ, ಇಂಡೋನೇಷಿಯನ್, ಜಪಾನಿ ಮತ್ತು ಫೋಲಿಷ್ ಭಾಷೆಗಳು ಸೇರಿವೆ.

ಒಖಿಂ ಸೋಶಿಯಲ್ ಮೀಡಿಯಾ ಆನ್‌ಲೈನ್ ಸೇವೆಗಳನ್ನು ಸಹ ವಿಸ್ತಾರ ಗೊಳಿಸಲಾಗಿದೆ. MTA online ಸೇವೆಗಳು ಮೇ 2020 ರಿಂದ MTA ಯ 6 ಚಾನಲ್‌ಗಳನ್ನು Streaming ಮಾಡಲಾಗುತ್ತದೆ. ಹಿಂದಿನ ವರ್ಷ ಇದರ ಸಂಖ್ಯೆ 5 ಆಗಿತ್ತು. ಇದೀಗ ಇನ್ನು ಎರಡು ಚಾನಲ್‌ಗಳನ್ನು Stream ಮಾಡುವ ಕಾರ್ಯ ನಡೆದಿದೆ. ಅತಿ ಶೀಘ್ರದಲ್ಲಿ ಎಲ್ಲ 8 ಚಾನಲ್‌ಗಳ ಮೂಲಕ Stream web site ಮತ್ತು ಇತರ ಸಾಮಾಜಿಕ ಮಾಧ್ಯಮಗಳಿಗೆ ವೇದಿಕೆ ಒದಗಿಸಲಾಗುವುದು.

Central ಆಫ್ರಿಕಾದ ಸಂಘಟನಾ ಮುಬಲ್ಲಿಗರು ಬರೆಯುತ್ತಾರೆ. ಒಬ್ಬ ವ್ಯಕ್ತಿ ದೀರ್ಘ ಸಮಯದಿಂದ ಒಖಿಂ ಮೇಲೆ ನನ್ನ ಖುತುಬ ಆಲಿಸುತ್ತಿದ್ದ. ಅದು ಇಲ್ಲಿಂದಲೇ ಪ್ರಸಾರಗೊಳ್ಳುತಿತ್ತು. ಇತರ ಅರೆಬಿ, ಫ್ರೆಂಚ್ ಕಾರ್ಯಕ್ರಮಗಳನ್ನು ಸಹ ಆಲಿಸುತ್ತಿದ್ದರು, ಹೇಳುತ್ತಾರೆ. ನಾವು ನಮ್ಮ ಮುಅಲ್ಲಿಮ್ ಮಹ್ಮೂದ್ ಅಹ್ಮದ್ ಸಾಹಿಬರಿಗೆ ತಬ್ಲೀಗ್ ಕಾರ್ಯಕ್ಕಾಗಿ ಕಳುಹಿಸಿದೆವು. ಅವರು ಅಲ್ಲಿ ಸಂದೇಶ ತಲುಪಿಸಿದರು ಮತ್ತು ಜಮಾಅತಿನ ಪರಿಚಯ ಮಾಡಿಕೊಟ್ಟರು. ಆಗ ಆ ವ್ಯಕ್ತಿ ಎದ್ದು ನಿಂತು ಹೇಳಿದ. ನಾನು ನಿಮ್ಮ ಖಿ.ಗಿ. ಚಾನಲ್ ನೋಡುತ್ತಿದ್ದೇನೆ. ನಿಮ್ಮ ಖಲೀಫರ ಖುತುಬ ಸಹ ಕೇಳುತ್ತಿದ್ದೇನೆ. ನಾನು ದೀರ್ಘ ಸಮಯದಿಂದ ಜಮಾಅತ್‌ನ್ನು ಅರಿತುಕೊಂಡಿದ್ದೇನೆ. ಇಂದು ನೀವು ಸವಿಸ್ತಾರವಾಗಿ ಹೇಳಿದ್ದೀರಿ. ನಾವು ತೃಪ್ತರಾಗಿದ್ದೇವೆ. ನೀವು ನಮ್ಮ ಬೈಅತ್ ಪಡೆದುಕೊಳ್ಳಿ. ನಾವು ಜಮಾಅತಿನೊಂದಿಗೆ ಇದ್ದೇವೆ.

ಫ್ರಾನ್ಸ್‌ನ ಅಮೀರ್ ಸಾಹಿಬ್ ಬರೆಯುತ್ತಾರೆ. ಮಹಿಳೆಯೊಬ್ಬಳು Frahati ಸಾಹಿಬಾ ತಮ್ಮ ಬೈಅತಿನ ಘಟನೆ ಹೀಗೆ ವಿವರಿಸುತ್ತಾರೆ. ನನ್ನ ಸಂಬಂಧ compmos Island ಯಿಂದಿದೆ. ನಾನು ಪ್ಯಾರಿಸ್‌ನಲ್ಲಿ ವಾಸಿಸುತ್ತಿದ್ದೇನೆ. ಜನ್ಮತಃ ಮುಸ್ಲಿಮನಾಗಿದ್ದೇನೆ. ನಾನು ಬಾಲ್ಯದಿಂದಲೇ ಇಸ್ಲಾಮಿ ಶಿಕ್ಷಣ ಪಡೆದಿರುತ್ತೇನೆ. ನಾನು ವಿಭಿನ್ನ ಮತ ಪಂಡಿತರೊಡನೆ ಹಝ್ರತ್ ರಸೂಲುಲ್ಲಾಹ್(ಸ) ರವರ ಜೀವನ ಚರಿತ್ರೆ ಕುರಿತು ಪ್ರಶ್ನೆಗಳನ್ನು ಕೇಳಿದ್ದೇನೆ. ಆದರೆ ತೃಪ್ತಕರ ಉತ್ತರ ದೊರೆಯಲಿಲ್ಲ. ಒಂದು ದಿನ ನನ್ನ ಭೇಟಿ ಅಹ್ಮದಿ ಮಿತ್ರರೊಡನೆ ಆಯಿತು. ಅವರು ನನಗೆ ಅಹ್ಮದಿಯತ್ ಅಂದರೆ ನಿಜವಾದ ಇಸ್ಲಾಮಿನ ಪರಿಚಯ ಮಾಡಿಕೊಟ್ಟರು. MTA ಫ್ರಾನ್ಸ್‌ನ ಚಾಲನ್ ಮೂಲಕವೂ ಪರಿಚಯವಾಯಿತು. ಮತ್ತು ವಿಭಿನ್ನ ಗ್ರಂಥಗಳನ್ನು ಅಧ್ಯಯನ ಮಾಡಲು ಹೇಳಿದರು. ಅದರಲ್ಲಿ ಒಂದು "ದಸ್ ಶರಾಯತ್ ಬೈಅತ್" (ಬೈಅತ್‌ನ ಹತ್ತು ನಿಬಂಧನೆಗಳು) ಸಹನೆಯಾಗಿತ್ತು. ಆಗ ನಾನು ಅಹ್ಮದಿಯರಲ್ಲಿ ಮತ್ತು ಅಹ್ಮದಿಯೇತರರಲ್ಲಿ ಏನು ವ್ಯತ್ಯಾಸಗಳಿವೆ. ಎಂದು ಸಂಶೋಧಿಸಲು ಪ್ರಾರಂಭಿಸಿದೆ. ಯೂಟ್ಯೂಬ್ ಮತ್ತು MTA ಚಾನಲ್‌ಗಳ ಮೇಲೆ ಕಾರ್ಯಕ್ರಮಗಳನ್ನು ನೋಡಲು ಪ್ರಾರಂಭಿಸಿದೆ. ಮತ್ತು ಹಲವು ತಿಂಗಳವರೆಗೆ ಆ ಕಾರ್ಯಕ್ರಮಗಳನ್ನು ನೋಡಿದೆ. ಈ ಕಾರ್ಯಕ್ರಮಗಳನ್ನು ಮತ್ತು ಗ್ರಂಥಗಳನ್ನು ಅಧ್ಯಯನ ಮಾಡಿದುದರಿಂದ ನನ್ನ ಜ್ಞಾನದಲ್ಲಿ ಬಹಳಷ್ಟು ವೃದ್ಧಿಯಾಯಿತು. ನಾನು ಭಾವಿಸತೊಡಗಿದೆ. ಅಹ್ಮದಿಯಾ ಜಮಾಅತಿನ ಶಿಕ್ಷಣಗಳು ಬಹಳ ಸರಳ ಮತ್ತು ಜಾಣ್ಮೆಯುಕ್ತವಾಗಿವೆ. ಅಂತೆಯೇ ಆಧ್ಯಾತ್ಮಿಕವಾಗಿಯೂ ಪ್ರಭಾವಪೂರ್ಣವಾಗಿದೆ ಎಂದು ಭಾವಿಸಿದೆ. ಹೀಗೆ ನನ್ನ ಪ್ರಶ್ನೆಗಳಿಗೆ ಉತ್ತರಗಳು ದೊರೆಯತೊಡಗಿತು ಮತ್ತು ಅಲ್ಲಾಹನ ಅನುಗ್ರಹದಿಂದ ನಾನು ಬೈಅತ್ ಮಾಡಿ, ಜಮಾಅತಿನಲ್ಲಿ ಸೇರಲು ಇಚ್ಛಿಸಿದೆ.

ನೌಮುಬಾಯೀನ್‌ರೊಂದಿಗೆ ಸಂಪರ್ಕ ಮತ್ತು ಇತರ ವರದಿ ಈ ಕೆಳಗಿನಂತಿದೆ. ನೈಜಿರಿಯಾ ಈ ವರ್ಷ 52 ಸಾವಿರಕ್ಕಿಂತ ಹೆಚ್ಚಿನ ನೌಮಬಾಯಿನರೊಂದಿಗೆ ಸಂಪರ್ಕ ಸಾಧಿಸಿದರು. ಕೆಲ ಅವಧಿಯಿಂದ ಯಾವ ಸಂಪರ್ಕವು ಇರಲಿಲ್ಲ. ಬೆನಿಯನ್ ಎರಡನೇ ಸ್ಥಾನದಲ್ಲಿದೆ. 11 ಸಾವಿರಕ್ಕಿಂತ ಹೆಚ್ಚಾಗಿವೆ. ಐವರಿಕೋಸ್ಟ್ ಮೂರನೇ ಸ್ಥಾನದಲ್ಲಿದೆ. 9 ಸಾವಿರಕ್ಕಿಂತ ಹೆಚ್ಚು, ಕೆಮರೂನ್ 7 ಸಾವಿರಕ್ಕಿಂತ ಹೆಚ್ಚು, ಸೆನೆಗಾಲ್ 5 ಸಾವಿರಕ್ಕಿಂತ ಹೆಚ್ಚು, ಬೋರ್‌ಕೀನ ಫಾಸು 4 ಸಾವಿರಕ್ಕಿಂತ ಹೆಚ್ಚು, ಕೊಂಗೋಕನ್‌ಹಾಸಾ ಮತ್ತು ಅದೇ ರೀತಿ ಭಾರತ, ಇಂಡೋನೇಷಿಯಾ, ಬಾಂಗ್ಲಾದೇಶ, ಅಮೇರಿಕ, ಗೋಯಟೆಮೂಲ, ಫಿಜಿ, ಮುಂತಾದ ವಿವಿಧ ದೇಶಗಳನ್ನು ಸಂಪರ್ಕಿಸಲಾಯಿತು.

ಪ್ರಸಕ್ತ ವರ್ಷ 80 ದೇಶಗಳಲ್ಲಿ ಒಟ್ಟು ಒಂದು ಲಕ್ಷ 8,018 ನೌಮುಬಾಯೀನ್‌ರೊಂದಿಗೆ ಸಂಪರ್ಕ ಸಾಧಿಸಲಾಯಿತು. ನೌಮುಬಾಯೀನ್‌ರಿಗಾಗಿ ತರಬೇತಿ ಛಿಟಚಿ ಗಳನ್ನು ನಡೆಸಲಾಯಿತು. 80 ದೇಶಗಳಿಂದ ದೊರೆತ ವರದಿ ಅನ್ವಯ ಪ್ರಸಕ್ತ ವರ್ಷ ನೌಮುಬಾಯಿನ್‌ಗಳಿಗೋಸ್ಕರ 3,891 ಜಮಾಅತುಗಳಲ್ಲಿ 16,823 ತರಬೇತಿ class ಗಳನ್ನು ಆಯೋಜಿಸಲಾಯಿತು. ಅದರಲ್ಲಿ ನೌಮುಬಾಯಿನರ ಸಂಖ್ಯೆ 1,02,169 ಆಗಿತ್ತು. ಈ ಅಟಚಿ ಗಳಲ್ಲಿ 1,124 ಇಮಾಮರಿಗೆ ಸಹ ತರಬೇತಿ ನೀಡಲಾಯಿತು.

ಪ್ರಸಕ್ತ ವರ್ಷ ಆಗಿರುವ ಬೈಅತ್‌ಗಳು, ಪರಿಸ್ಥಿತಿಗಳು ಸರಿಯಿಲ್ಲದ ಕಾರಣ ಸಂಪರ್ಕ ಸಾಧಿಸುವ ಕಾರ್ಯ ಸುಲಭವಾಗಿರಲಿಲ್ಲ. ದಾಯಿಯೀನ್ ಇಲಲ್ಲಾಹ್ ಆಗಲಿ, ಮುಬಲ್ಲಿಗೀನ್ ಆಗಲಿ, ಹೊರಗೆ ಹೊರಡಲು ಸಾಧ್ಯವಿರಲಿಲ್ಲ. ಆದರೂ ನನ್ನ ಅಭಿಪ್ರಾಯ ಪ್ರಕಾರ ಕೆಲ ಸಾವಿರ ಬೈಅತ್‌ಗಳಾಗಬಹುದೆಂದು ಅಂದಾಗಿಸಿದ್ದೆ. ಆದರೆ ಅಲ್ಲಾಹನ ಅನುಗ್ರಹದಿಂದ 1,12,179 ಬೈಅತ್‌ಗಳಾದವು. ಮತ್ತು 98 ದೇಶಗಳಿಂದ ಸುಮಾರು 220 ಸಮುದಾಯಗಳು ಅಹ್ಮದಿಯತ್‌ಗೆ ಪ್ರವೇಶ ಮಾಡಿವೆ. ಪ್ರಸಕ್ತ ವರ್ಷ ನೈಜಿರಿಯಾದ ಬೈಅತ್ತುಗಳ ಒಟ್ಟು ಸಂಖ್ಯೆ 25,176, ಕೆಮರೂನ್‌ನಲ್ಲಿ ಈ ವರ್ಷ 13,191 ಬೈಅತ್‌ಗಳಾದವು. ಸಿರಾಲಿಯೂನ್ 13,723, ಐವರಿಕೋಸ್ಟ್ 10,538, ಮಾಲಿ 10,027, ಸೆನೆಗಾಲ್ 5,790, ಕೊಂಗೋಕನ್‌ಶಾಸಾ 4,042, ತಂರಝಾನಿಯಾ 3,875 ಗವಿಉಸಾನ್ 3 ಸಾವಿರಕ್ಕಿಂತ ಅಧಿಕ, ಕೊಂಗೋಬ್ರಾಝ್‌ವೇನ್‌ನಲ್ಲೂ 4 ಸಾವಿರಕ್ಕಿಂತ ಅಧಿಕ, ಲಾಯಬೇರಿಯಾ, ಸುಮಾರು 2 ಸಾವಿರ, ಗವಿಕನಾಕರಿ 1500, ನಾಯ್‌ಜರ್ ನಲ್ಲೂ 1,500 ಸಮೀಪ, ಬೆನಿಯನ್ ಒಂದು ಸಾವಿರಕ್ಕಿಂತ ಅಧಿಕ, ಘಾನಾ ಒಂದು ಸಾವಿರಕ್ಕಿಂತ ಅಧಿಕ, ಮಲಾನಿ ಒಂದು ಸಾವಿರಕ್ಕಿಂತ ಅಧಿಕ, ಚೌಡ್‌ನಲ್ಲಿ 936, ಟೋಗೋ, ಯುಗಂಡಾ, ಸೆಂಟ್ರಲ್ ಆಫ್ರಿಕನ್ ರಿಪಬ್ಲಿಕ್‌ನಲಿ ಆದ ಬೈಅತ್‌ಗಳ ಸಂಖ್ಯೆ 8 ನೂರುಗಳಿಂದ ಸಾವಿರ ತನಕ. ಮಡ್‌ಗಾಸ್ಕರ್‌ನಲ್ಲೂ ಒಳ್ಳೆಯ ಸಂಖ್ಯೆ ದೊರೆತಿದೆ. ಅದು ಈ ಹಿಂದಿನ ಬೈಅತ್ ಸಂಖ್ಯೆಗಿಂತ ಉತ್ತಮವಾಗಿದೆ. ಕೀನ್ಯಾ ಸಾತೋಮೆ, ಬರೊಂಡಿ, ಮೊರೆತಾನಿಯಾ, ಝಿಂಬಿಯಾ, ಸೋವಮಾಲಿಯಾ, ರವಾಂಡಾ, ಇಥಿಯೋಪಿಯಾದಲ್ಲೂ ಬೈಅತ್‌ಗಳಾಗಿವೆ.

ಅದೇ ರೀತಿ ಭಾರತದಲ್ಲಿ ಪ್ರಸಕ್ತ ವರ್ಷ ಬೈಅತ್‌ಗಳ ಸಂಖ್ಯೆ 1,724 ಆಗಿವೆ. ಇಂಡೋನೇಷಿಯಾದಲ್ಲೂ ಒಂದು ಸಾವಿರಕ್ಕಿಂತ ಅಧಿಕವಾಗಿದೆ. ಬಾಂಗ್ಲಾದೇಶ, ಮಲೇಶಿಯಾ, ಜರ್ಮನಿಯಲ್ಲಿ ಪ್ರಸಕ್ತ ವರ್ಷ 104 ಬೈಅತ್‌ಗಳಾಗಿವೆ. ಯು.ಕೆಯಲ್ಲಿ 100 ಬೈಅತ್‌ಗಳಾಗಿವೆ. ಅಮೇರಿಕಾದಲ್ಲೂ ಯು.ಕೆಗಿಂತ ಹೆಚ್ಚು 101 ಬೈಅತ್‌ಗಳಾಗಿವೆ. ಕೆನಡಾದಲ್ಲಿ ಆದ ಬೈಅತ್‌ಗಳು ಅವರ ಮಟ್ಟದಿಂದ ಕಡಿಮೆಯಾದರೂ 68 ಆಗಿವೆ. ಆದರೂ ಅವರು ಇತರ ಕಾರ್ಯಗಳನ್ನು ಮಾಡಿದ್ದಾರೆ. ಅವರು ಬೈಅತ್ ಕಡೆ ಲಕ್ಷ್ಯವಹಿಸಬೇಕಾಗಿದೆ. ಪ್ರಸಕ್ತ ವರ್ಷ ಹಂಡೋರಸಿಯಲ್ಲಿ ಅಲ್ಲಾಹನ ಅನುಗ್ರಹದಿಂದ 36, ಬೇಟೆಯಲ್ಲಿ 32 ಮತ್ತು ಮೆಕ್ಸಿಕೋದಲ್ಲಿ 23 ಬೈಅತ್‌ಗಳಾಗಿವೆ. ಟ್ರೇನಿಡಾಡಿನಲ್ಲಿ ಈ ವರ್ಷ 20 ಸಮೀಪ ಬೈಅತ್‌ಗಳಾಗಿವೆ. ಫಿಜಿಯಲ್ಲಿ, ಮೈಕ್ರೋನೀಶಿಯಾ, ಮಾರ್ಷಲ್ Island, ಪೆರಾಗೋಯೆ, ಅರ್ಜಂಟಾಯನ್‌ನ, ಫ್ರೆಂಚ್‌ಗಯಾನಾದಲ್ಲಿ 10, 15, 20 ಬೈಅತ್‌ಗಳಾದವು. ಹೀಗೆ ಅಲ್ಲಾಹನ ಅನುಗ್ರಹದಿಂದ ಹಲವು ಸ್ಥಳಗಳಲ್ಲಿ ಬೈಅತ್‌ನ ಕೆಲಸಗಳಾಗಿವೆ. ಎಲ್ಲೆಲ್ಲಿ ಸಂದರ್ಭ ಒದಗಿ ಬಂದಾಗ ದಾಯಿಯೀನ್, ಮುಬಲ್ಲೀಗೀನ್ ಸಂಪರ್ಕ ಸಾಧಿಸಿದರು.

ಜನರೊಂದಿಗೆ ಸಂಪರ್ಕ ಮಾಡಿದ್ದರಿಂದ ತಿಳಿದು ಬಂದಂದೇನೆಂದರೆ ಜನರು MTA ಮೂಲಕ ಅಥವಾ ಇನ್ನಿತರ ಮಾಧ್ಯಮದಿಂದ ಜಮಾಅತಿನ ಪರಿಚಯ ಪಡೆದುಕೊಂಡರು. ಆದರೆ ನಮ್ಮ ಜನರ ಸಂಪರ್ಕ ಅಲ್ಲಿ ಇಲ್ಲ. ಆದುದರಿಂದ ಬೈಅತ್‌ಗಳು ಆಗಲಿಲ್ಲ. ಆದರೆ ಒಟ್ಟಿನಲ್ಲಿ ಅಲ್ಲಾಹನ ಅನುಗ್ರಹದಿಂದ ಯಾರಿಗೆಲ್ಲ ಜಮಾಅತಿಗೆ ಸೇರುವ ಭಾಗ್ಯ ದೊರೆತಿದೆಯೋ ಅವರಿಗೆ ಅಲ್ಲಾಹನು ಸ್ಥಿರತೆಯನ್ನು ದಯಪಾಲಿಸಲಿ. ವಿಶ್ವಾಸ ಮತ್ತು ದೃಢತೆಯೇ ನಿಜವಾದ ವಸ್ತುವಾಗಿದೆ.

ಅಮೀರ್ ಸಹಿಬ್ ಘಾನಾ ಬರೆಯುತ್ತಾರೆ. ಅಲ್ಲಿಯ ಅಲ್‌ಹಸನ್ ಸಾಹಿಬರೊಬ್ಬರು ಬೈಅತ್ ಮಾಡಿದರು ಅವರು ತಮ್ಮ ಗೋತ್ರದ ಸರದಾರರಾಗಿರುವರು. ಅವರು ಕುಟುಂಬ ಸಮೇತ ಬೈಅತ್ ಮಾಡಿದ್ದರು. ಆದರೆ ಕೆಲ ಸಮಯದ ನಂತರ ಅವರ ಹಿರಿಯ ಪುತ್ರ ಇಸ್ಲಾಮಿನ ಬಗ್ಗೆ ದ್ವೇಷದಿಂದ ಕ್ರೈಸ್ತನಾದ. ಅವರು ತಾಯಿ ನಮ್ಮ ಬಳಿ ಬಂದರು ಮತ್ತು ಹೇಳಿದರು. ನೀವು ಕ್ರೈಸ್ತರೊಂದಿಗೆ ಚರ್ಚಿಸಬಹುದೇ. ನಿಮ್ಮ ಬಳಿ ಸಾಕ್ಷ್ಯಧಾರಗಳಿವೆಯೆ. ನನ್ನ ಮಗನೊಂದಿಗೆ ಮಾತನಾಡಿರಿ ಮತ್ತು ಇಸ್ಲಾಮಿನೆಡೆ ಮರಳುವಂತೆ ಮಾಡಿರಿ. ಹಾಗೆ ನಾವು ಅವರ ಮಗನನ್ನು ಭೇಟಿಯಾದೆವು. ಅವರು ಕೆಲವು ಪ್ರಶ್ನೆಗಳನ್ನು ಕೇಳಿದರು. ಅದಕ್ಕೆ ತೃಪ್ತಿಕರ ಉತ್ತರ ನೀಡಲಾಯಿತು. ಅಲ್ಲಾಹನ ಅನುಗ್ರಹದಿಂದ

ಅವರು ಮರಳಿ ಅಹ್ಮದಿಯತ್ ಸೇರಿದರು. ಹೀಗೆ ಅದು 8 ಜನರ ಒಳಗೊಂಡ ಹಿಂದೆ ಸರಿದಿದ್ದ ಕುಟುಂಬ ಮರಳಿ ಅಹ್ಮದಿಯತ್ ಸೇರಿದರು.

ಗನಿಬಸಾವಿನ ಮುಬಲ್ಲಿಗ್ ಇನ್‌ಚಾರ್ಜ್ ಬರೆಯುತ್ತಾರೆ. ಪ್ರಚಾರ ಕಾರ್ಯದ ನಡುವೆ, ಇವೆಲ್ಲ ಕಾರ್ಯಕ್ರಮಗಳು ಫೆಬ್ರವರಿ ಮಾರ್ಚ್‌ನ ಮೊದಲಿನದ್ದಾಗಿವೆ. ದೂರದ ಕ್ಷೇತ್ರದಲ್ಲಿರುವ ಒಂದು ಊರು Sincha Mawadu ನಲ್ಲಿ ಅಲ್ಲಾಹನು ನಾಲ್ಕು ಬೈಅತ್ ಪಡೆಯುವ ಅನುಗ್ರಹ ನೀಡಿದನು. ಅಲ್ಲಿಯ ಮುಖಂಡರಾದ ಅಬ್ದುಲ್ಲಾ ಸಾಹಿಬ್ ನಾಲ್ಕು ಜನರು ಅಹ್ಮದಿಯತ್ತಿಗೆ ಸೇರಿದನ್ನು ನೋಡಿ ಹೇಳಿದರು. ನಾನು ಈ ವರ್ಷ ಹಜ್‌ಗೆ ಹೋಗುತ್ತಿದ್ದೇನೆ. ಹಜ್‌ನಿಂದ ಮರಳಿ ಬಂದು ನಿರ್ಣಯ ಮಾಡುವೆನು. ಅಹ್ಮದಿಯತ್ ಸೇರಬೇಕೋ ಬೇಡ ಎಂದು. ಅದಾದ ನಂತರ ಹಜ್‌ಗೆ ಹೋದರು. ಹಜ್‌ನಿಂದ ಮರಳಿ ಬಂದು ತಾವಾಗಿ ಜಮಾಅತನ್ನು ಸಂಪರ್ಕಿಸಿದರು ಮತ್ತು ಹೇಳಿದರು. ಹಜ್ ನಡುವೆಯೇ ಅಲ್ಲಾಹನು ನನ್ನನಲ್ಲಿ ಈ ಮಾತು ದೃಢಪಡಿಸಿದನು. ಅಹ್ಮದಿಯತ್ ಸತ್ಯ ಜಮಾಅತ್ ಆಗಿದೆ. ಮತ್ತು ಇಡೀ ಹಜ್‌ನ ನಡುವೆ ಅಲ್ಲಾಹನು ನನ್ನ ಮನಸ್ಸಿಗೆ ತೃಪ್ತಿ ನೀಡಿದನು.

ಅಹ್ಮದಿಯತ್ತಿನೊಂದಿಗೆ ಸಂಬಂಧ ಸಾಧಿಸುವುದೇ ಮುಕ್ತಿಯ ಮಾರ್ಗವಾಗಿದೆ. ಮತ್ತು ನಾನು ಹಜ್‌ನ ನಡುವೆಯೇ ಅಹ್ಮದಿಯತ್ತಿನ ಯಶಸ್ವಿಗಾಗಿ ಪ್ರಾರ್ಥನೆ ಮಾಡತೊಡಗಿದ್ದೆ. ಅಂದ ಹಾಗೆ ಹಜ್‌ನಿಂದ ಮರಳಿ ಬಂದ ಅವರು ಬೈಅತ್ ಮಾಡಿ ಅಹ್ಮದಿಅತ್ ಸ್ವೀಕರಿಸಿದರು. ಈಗ ಅಲ್ಲಾಹನ ಅನುಗ್ರಹದಿಂದ ಅವರು ಓರ್ವ ಉತ್ತಮ ದಾಯಿ ಇಲ್ಲಲ್ಲಾಹ್ ಆಗಿದ್ದಾರೆ ಮತ್ತು ತಮ್ಮ ಚಂದಾ ನೀಡುವುದರಲ್ಲಿಯೂ ಪ್ರಮಾಣೀಕರಾಗಿದ್ದಾರೆ.

ಫ್ರಾನ್ಸ್‌ನ ಅಮೀರ್ ಸಾಹಿಬ್ ಬರೆಯುತ್ತಾರೆ. ಫ್ರೆಂಚ್ ಮಿತ್ರರೊಬ್ಬರಾದ Serge stehle ಅವರ ಸಂಬಂಧ ಕ್ರೈಸ್ತ ಮತದೊಂದಿಗಿತ್ತು. ಪ್ರತಿ ವಾರ ಚರ್ಚ್‌ಗೆ ಹೋಗುತ್ತಿದ್ದರು. ಮತ್ತು ಪಾದರಿಯಿಂದ ತಮ್ಮ ಧರ್ಮ ಕುರಿತು ಮತ್ತು ವಿಶೇಷವಾಗಿ ಈಸಾ(ಅ) ರವರ ಬಗ್ಗೆ ಹಲವು ಪ್ರಶ್ನೆಗಳನ್ನು ಕೇಳುತ್ತಿದ್ದರು. ಪಾದರಿ ಉತ್ತರ ನೀಡುವ ಬದಲಿಗೆ, ನಿಮಗೆ ಈ ರೀತಿಯ ಪ್ರಶ್ನೆಗಳನ್ನು ಕೇಳಬಾರದಾಗಿದೆ. ಆಗ ಅವರು ತನ್ನ ಪತ್ನಿ (ಅವರು ಮುಸ್ಲಮಾನರಾಗಿದ್ದರು) ಅವರ ಸಹಾಯದಿಂದ ಇಸ್ಲಾಮಿನ ಕುರಿತು ಆಸಕ್ತಿ ವಹಿಸಲು ಪ್ರಾರಂಭಿಸಿದರು. ಹಝ್ರತ್ ಈಸಾ(ಅ) ಕುರಿತು ಅವರಿಗಿದ್ದ ಮಾಹಿತಿ ಎಂದರೆ ಹಝುರತ್ ಈಸಾ(ಅ) ಆಕಾಶದ ಮೇಲೆ ಎತ್ತಲ್ಪಟ್ಟರು. ಇಸ್ಲಾಮಿನ ಸಾಹಿತ್ಯದಲ್ಲೂ ಇದನ್ನೇ ಕಂಡಿದ್ದೆ. ಆದರೆ ನಾನು ಅದನ್ನು ಒಪ್ಪಲು ಸಿದ್ಧನಿರಲಿಲ್ಲ. ಇದು ಅಸಾಧ್ಯ. ಯಾವುದೇ ಮನಷ್ಯ ಹೇಗೆ ತಾನೇ ಆಕಾಶಕ್ಕೇರಲು ಸಾಧ್ಯ. ಆದುದರಿಂದ ಈ ಬಗ್ಗೆ ಪುನಃ ಅಧ್ಯಯನ ಮಾಡಲು ಪ್ರಾರಂಭಿಸಿದೆ. ಎಲ್ಲಿಂದಲೂ ಅವರಿಗೆ "ಮಸೀಹ್ ಹಿಂದೂಸ್ತಾನ್ ಮೇ" (ಎಜಛಿ ೨ಟ ಖಟಜಿಟಚಿ) ಗ್ರಂಥ ದೊರೆಯಿತು. ಅದರ ಜೊತೆಯಲ್ಲಿಯೇ ಜಮಾಅತಿನ ವೆಬ್‌ಸೈಟ್ ಸಹ ದೊರೆಯಿತು. ಮತ್ತೆ ಅವರು ಹೀಗೆ ಅಧ್ಯಯನ ಮುಂದುವರೆಸಿದರು. ಅವರು ಹೇಳುತ್ತಾರೆ. ನನಗೆ ನನ್ನ ಎಲ್ಲ ಪ್ರಶ್ನೆಗಳ ಉತ್ತರ ದೊರೆಯಿತು. ಲಾಕ್‌ಡೌನ್ ನಡುವೆ ಜಮಾಅತಿನ ಕಾರ್ಯಕ್ರಮಗಳನ್ನು ನೋಡುತ್ತಿದ್ದೆ. ಅಂತಿಮವಾಗಿ ಅಹ್ಮದಿಯತ್ತಿಗೆ ಸೇರುವ ನಿರ್ಣಯ ಕೈಗೊಂಡೆ ಹಾಗೂ ಬೈಅತ್ ಮಾಡಿದೆ.

ಮರ್‌ವಾನ್ ಸರೂರ್ ಗಿಲ್ ಮುರಬ್ಬಿ ಅರ್ಜಂಟೈನ್ ಬರೆಯುತ್ತಾರೆ ಓರ್ವ ಸ್ಥಳೀಯ ಮಹಿಳೆ Gabriela Bmavo ಸಾಹಿಬಾ ನಮ್ಮ ಮಿಷನ್ ಹೌಸ್ ಮುಂದೆಯಿಂದ ಹೋಗುತ್ತಿದ್ದರು. ಅವರು ಹೇಳುತ್ತಾರೆ. ನಾನು ಹೊರಗಿನಿಂದ ಮಿಷನ್ ಹೌಸಿನ ಕಿಟಕಿಯಿಂದ ಹಝ್ರತ್ ಮಸೀಹ್ ಮೌಊದ್(ಅ) ರವರ ಚಿತ್ರ ಗೋಡೆಯಲ್ಲಿ ಹಾಕಿದ್ದು ಕಂಡೆ. ಅದರಲ್ಲಿ ಈ ವಾಕ್ಯವು ಬರೆಯಲಾಗಿತ್ತು. ಮಸೀಹರ ಪುನರಾಗಮನ ಆಗಿರುತ್ತದೆ. ಈ ಮಾತು ನನ್ನ ಮನಸ್ಸಿನ ಮೇಲೆ ಗಾಢವಾದ ಪರಿಣಾಮ ಬೀರಿತು. ಏಕೆಂದರೆ ಆಕೆ Practicing catholic ಆಗಿದ್ದರು. ಇದಕ್ಕಿಂತ ಮೊದಲು ಆಕೆಗೆ ಇಸ್ಲಾಮಿನಲ್ಲಿ ಯಾವ ಆಸಕ್ತಿಯೂ ಇರಲಿಲ್ಲ. ಯಾವ ಮುಸ್ಲಿಮನಿಗೂ ತಿಳಿದಿರಲಿಲ್ಲ. ಅದರೂ ಇಸ್ಲಾಮಿನ ಕುರಿತು ಅಧ್ಯಯನ ಮಾಡಲು ಪ್ರಾರಂಭಿಸಿದಳು. ಮತ್ತೆ ಅಲ್ಲಿಯ ಜಮಾಅತಿನ ಮುರಬ್ಬಿಯರನ್ನು ಸಂಪರ್ಕಿಸಿ ಇಸ್ಲಾಮಿನ ಬಗ್ಗೆ ಛಿಟಛಿಫ ನಡೆಯುತ್ತಿತ್ತು. ಅದರಲ್ಲಿ ಭಾಗವಹಿಸಲು ಪ್ರಾರಂಭಿಸಿದಳು. ಅವರ ಕುಟುಂಬದವರಿಗೆ ಇದು ಹಿಡಿಸಲಿಲ್ಲ. ಆದರೆ ಅವಳು ತನ್ನ ಪತಿಯೊಂದಿಗೆ ಗುಪ್ತವಾಗಿಯೇ ಸಂಪರ್ಕದಲ್ಲಿದ್ದಳು. ಮತ್ತು ಅಧ್ಯಯನವು ಮಾಡುತ್ತಿದ್ದಳು. ಒಂದು ವರ್ಷ ನಂತರ ಅವರು 28 ಡಿಸೆಂಬರ್ 2019 ರಂದು ಅಹ್ಮದಿಯತ್ ಸ್ವೀಕರಿಸುವ ನಿರ್ಣಯಕ್ಕೆ ಬಂದರು. ಈ ನಡುವೆ ಯಾವುದೋ ಕಾರಣದಿಂದಾಗಿ ದಂಪತಿಗಳು ಪ್ರತ್ಯೇಕವಾದರು. ಇತರ ಕಾರಣಗಳಿದ್ದರೂ ಸಹ ಅದಕ್ಕೆ ಒಂದು ಕಾರಣ ಜಮಾಅತಿನ ಸಂಪರ್ಕ ಆಗಿತ್ತು. ಆದರೂ ಸಹ ಅಲ್ಲಾಹನ ಅನುಗ್ರಹದಿಂದ ಇಂದಿಗೆ 6 ತಿಂಗಳಿಗಿಂತ ಹೆಚ್ಚಾಯಿತು. ತಮ್ಮ ಕುಟುಂಬದ ವಿರೋಧವಿದ್ದರೂ ಸ್ಥಿರವಾಗಿ ಮತ್ತು ಮನೋಸ್ಥೈರ್ಯದಿಂದ ಅಹ್ಮದಿಯತ್‌ನಲ್ಲಿ ಖಾಯಂ ಆಗಿ ನೆಲೆ ನಿಂತಿದ್ದಾರೆ.

**ಸ್ವಪ್ನಗಳ ಮೂಲಕ ಅಹ್ಮದಿಅತ್ ಸೇರ್ಪಡೆ:**

ಅಲ್ಲಾಹನು ಹೀಗೂ ಜನರಿಗೆ ಮಾರ್ಗದರ್ಶನ ನೀಡುತ್ತಾನೆ.

ಖಿರ್‌ಗಿಸ್ಥಿನಿನ ಓರ್ವ ಸ್ಥಳೀಯ ನೌಮುಬಾಯೆ Kadirov shokat ಸಾಹಿಬ್ ಹೇಳುತ್ತಾರೆ. ಓರ್ವ ಸ್ಥಳಿಯ ಅಹ್ಮದಿ ಆಶಿರ್ ಅಲಿಯಿಂದ ನನಗೆ ಜಮಾಅತಿನ ಪರಿಚಯವಾಯಿತು. ಅವರು ನನಗೆ ದುಆ ಮಾಡುತ್ತಿದ್ದರು. ಉಪದೇಶ ಮಾಡಿದರು. ನಾನು ಅದೇ ದಿನ ರಾತ್ರಿ ಮನೆಗೆ ಬಂದು ಎರಡು ರಕತ್ ನಮಾಝ್ ನಿರ್ವಹಿಸಿ ಅಲ್ಲಾಹನೊಂದಿಗೆ ಸತ್ಯವನ್ನು ತಿಳಿಯುವ ಭಾಗ್ಯ ದಯಪಾಲಿಸಲು ಬೇಡಿಕೊಂಡೆ. ಸಜ್ಜನರಾಗಿದ್ದರು, ಒಳ್ಳೆಯ ಸ್ವಭಾವ ಹೊಂದಿದ್ದರು. ವ್ಯಾಕುಲಗೊಂಡು ದುಆ ಮಾಡಿದರು. ಅವರು ಹೇಳುತ್ತಾರೆ. ಅದೆ ರಾತ್ರಿ ನಾನು ಹಝ್ರತ್ ಮುಹಮ್ಮದ್(ಸ) ರನ್ನು ಸ್ವಪ್ನದಲ್ಲಿ ಕಂಡೆ. ಅವರು ಸಮುದ್ರದ ಅಲೆಗಳ ಮೇಲೆ ಆರಾಧನೆ ಮಾಡುತ್ತಿದ್ದಾರೆ. ಆ ಸ್ವಪ್ನವು ನನ್ನ ಹೃದಯದಲ್ಲಿ ಒಂದು ವಿಚಿತ್ರವಾದ ಪ್ರಕಾಶ ಉಂಟು ಮಾಡಿತು. ಅದರ ಪರಿಣಾಮವಾಗಿ ನನಗೆ ದೃಢವಾಯಿತು. ನನಗೆ ಈಗ ಸನ್ಮಾರ್ಗ ದೊರೆತಿದೆ. ಆಗ ನಾನು ಬೈಅತ್ ಮಾಡಿದೆನು.

ಕೆಮರೂನಿನ ಮುಅಲ್ಲಿಮ್ ಸಾಹಿಬ್ ಬರೆಯುತ್ತಾರೆ. ಉತ್ತರ ವಲಯದ ಪ್ರವಾಸದ ನಡುವೆ ಇಲ್ಲಿಂಯ ಕುಣಕುಟಿ ಎಂಬ ಊರಿನ ಮತ ಪಂಡಿತರೊಬ್ಬರೊಂದಿಗೆ ಭೇಟಿಯಾಯಿತು. ಅವರಿಗೆ ಜಮಾಅತಿನ ಪರಿಚಯ ಮಾಡಿಸಲಾಯಿತು. ಅವರ ಪ್ರಶ್ನೆಗಳಿಗೆ ಉತ್ತರಗಳನ್ನು ನೀಡಲಾಯಿತು. ಜಮಾಅತಿನ ಸಾಹಿತ್ಯ ನೀಡಲಾಯಿತು. ಇಮಾಮ್ ಮಹದಿ ಬರುವವರಿದ್ದಾರೆ ಎಂಬುದನ್ನು ನಾನು ತಿಳಿದಿದ್ದೇನೆ ಎಂದು ಆ ಮತಪಂಡಿತರು ಹೇಳಿದರು. ನಾನು ದುಆ ಮಾಡುವೆನು. ಅಲ್ಲಾಹನು ನನಗೆ ಸರಿಯಾದ ಮಾರ್ಗದರ್ಶನ ನೀಡಲಿ. ಅನಂತರ ಮುಅಲ್ಲಿಮ್ ಸಾಹಿಬ್ ತನ್ನ ಸೆಂಟರ್‌ಗೆ ಮರಳಿ ಬಂದರು. ಒಂದು ವಾರದ ನಂತರ ಜಮಾಅತಿನ ಅಧ್ಯಕ್ಷರು ಫೋನ್ ಮಾಡಿ ತಿಳಿಸಿದರು. ನೀವು ಊರಿಗೆ ಬನ್ನಿ ಒಂದು ಶುಭ ಸಂದೇಶವಿದೆ. ಹೇಳುತ್ತಾರೆ. ನಾನು ಊರಿಗೆ ತಲುಪಿ ನೋಡುತ್ತೇನೆ. ಆ ಮತಪಂಡಿತರೇ ಬಂದಿದ್ದರು. ನನ್ನನ್ನು ಆಲಂಗಿಸಿಕೊಂಡು ಅಳತೊಡಗಿದರು. ಅವರು ಹೇಳಿದರು. ನಾನು ಅಹ್ಮದಿಯಾ ಜಮಾಅತಿನ ಬಿತ್ತಿಪತ್ರಗಳನ್ನು ಅಧ್ಯಯನ ಮಾಡಿದ್ದೇನೆ. ಹಝ್ರತ್ ಮಸೀಹ್ ಮೌಊದ್(ಅ) ರವರ ಚಿತ್ರವನ್ನು ನೋಡಿದ್ದೇನೆ. ದಿನಾಲೂ ದುಆ ಮಾಡುತ್ತಿದ್ದ ಈ ವ್ಯಕ್ತಿ ನಿನ್ನ ಕಡೆಯಿಂದ ಬಂದವರಾಗಿದ್ದರೆ ನನಗೆ ಮಾರ್ಗದರ್ಶನ ನೀಡು. ನಾನಂತೂ ಎಂದಿನಂತೆ ಇಮಾಮ್ ಮಹದಿಯನ್ನು ಪ್ರತೀಕ್ಷೆ ಮಾಡುತ್ತಿದ್ದೇನೆ. ಕೆಲ ದಿನಗಳ ನಂತರ ಇಮಾಮ್ ಮಹದಿ(ಅ) ನನ್ನ ಸ್ವಪ್ನದಲ್ಲಿ ಬಂದರು ಮತ್ತು ನನಗೆ ಹೇಳಿದರು. ಎದ್ದೇಳಿರಿ. ನಮಾಝ್ ನಿರ್ವಹಿಸಿ. ಆಗ ನಾನು ಸ್ವಪ್ನದಲ್ಲಿಯೇ ಯೋಚಿಸುತ್ತೇನೆ. ಈ ವ್ಯಕ್ತಿ ಸತ್ಯವಂತನಾಗಿದ್ದಾನೆ. ಅಂದ ಹಾಗೆ ಈ ಸ್ವಪ್ನದ ನಂತರ ನನಗೆ ತೃಪ್ತಿಯಾಯಿತು. ಈಗ ನಾನು ಕುಟುಂಬ ಸಮೇತ ಹದಿನೈದು ಜನರು ಬೈಅತ್ ಮಾಡಿ ಜಮಾಅತಿಗೆ ಸೇರಿದೆವು.

ನಸೀರ್ ಶಾಹಿದ್ ಸಾಹಿಬ್ ಫ್ರಾನ್ಸ್ ಬರೆಯುತ್ತಾರೆ. ಸುತೀಮಾ ತೋಬಾಲ್ದೆ ಸಾಹಿಬಾ ಹೆಸರಿನ ಮಹಿಳೆಯೊಬ್ಬಳು ಹೇಳುತ್ತಾರೆ. ಈ ವರ್ಷ ರಂಝಾನಿಗಿಂತ ಮೊದಲು ಒಂದು ಸ್ವಪ್ನವನ್ನು ಕಂಡಿದ್ದೆ. ನಾನು ಒಂದು ದೊಡ್ಡ ಮಸೀದಿ ಒಂದರಲ್ಲಿದ್ದೀನಿ. ಅಲ್ಲಿ ಬಹಳಷ್ಟು ಗುಂಪುಗಳಿವೆ. ಅವರು ಖುರ್‌ಆನ್ ತೆಗೆದುಕೊಂಡು ಕುಳಿತಿರುವರು ಮತ್ತು ವಿಭಿನ್ನ ಗುಂಪುಗಳಲ್ಲಿ ಹಂಚಿ ಹೋಗಿರುವರು. ನಾನು ಅವರನ್ನು ತಿಳಿದಿರುವುದಿಲ್ಲ. ಅದರ ಬದಲು ಒಂದು ಸಣ್ಣದಾದ ಗುಂಪು ಅದರಲ್ಲಿ ಒಬ್ಬ ಮಹಿಳೆ "ಕಾರಾ" ಅವಳನ್ನು ನಾನು ಗುರುತಿಸುತ್ತೇನೆ. ಅಂದ ಹಾಗೆ ಆ ಎಲ್ಲ ಗುಂಪುಗಳನ್ನು ಬಿಟ್ಟು ನಾನು ಆ ಸಣ್ಣದಾದ ಗುಂಪಿನೆಡೆ ಹೋಗುತ್ತೇನೆ. ಅಲ್ಲಿ "ಕಾರಾ' ಕುಳಿತುಕೊಂಡಿದ್ದಳು. ಆ ಮಸೀದಿಯಲ್ಲಿದ್ದ ಒಬ್ಬನು ನನಗೆ ಹೇಳಿದ. ನೀನು ಕಾಫಿರ್‌ಗಳ ಗುಂಪಿನತ್ತ ಏಕೆ ಹೋಗುತ್ತೀಯೇ? ಆಗ ನಾನು ಅವನಿಗೆ ಹೇಳಿದೆ. ನೀವು ನನಗೆ ಆ ಗುಂಪಿನತ್ತ ಹೋಗಲು ಏಕೆ ತಡೆಯುತ್ತಿದ್ದೀರಿ, ಆ ಗುಂಪಿನಲಿ ಮಹಿಳೆಯೊಬ್ಬಳು ಇರುವಳು. ನಾನು ಅವಳಿಗೆ ಪರಿಚಿತಳು. ನಾನು ಅದೇ ಗುಂಪಿಗೆ ಹೋಗಬಯಸುತ್ತೇನೆ. ಹೇಳುತ್ತಾಳೆ. ಆ ಸಮಯ ನಾನು ಒಂದು ಬಲವಾದ ಪ್ರಕಾಶ ಕಂಡೆ. ಅದರಿಂದ ನನ್ನ ಕಣ್ಣುಗಳು ಮಂಜು ಮಂಜಾದವು. ನನಗೆ ಕಣ್ಣು ತೆರೆಯಲು ಆಗಲಿಲ್ಲ. ಮತ್ತೆ ನಾನು ತನ್ನನ್ನು "ಕಾರಾ" ಗುಂಪಿನಲ್ಲಿ ಕಂಡೆನು. ಅವಳು ನನಗೆ ತನ್ನ ಬಳಿ ಜಾಗ ನೀಡಿದಳು. ಅನಂತರ ನನ್ನ ಕಣ್ಣು ತೆರೆಯಿತು. ಹೇಳುತ್ತಾರೆ. ನಾನು 'ಕಾರ" ಳನ್ನು (ಅವಳು ಆಕೆಯ ಗೆಳತಿಯಾಗಿದ್ದಳು ಅಥವಾ ಪರಿಚಯವಿತ್ತು) ಕೆಲಸದ ನಿಮಿತ್ತ ಅವಳೊಂದಿಗೆ ಎರಡು ಮೂರು ಸಲ ಭೇಟಿಯಾಗಿದ್ದೆ. ಆದರೆ ಅಹ್ಮದಿಅತ್ತಿನ ಬಗ್ಗೆ ಎಂದೂ ಯಾವುದೆ ವಿಶೇಷ ರೀತಿಯ ಮಾತುಕತೆ ಆಗಿರಲಿಲ್ಲ. ಸ್ವಪ್ನದ ನಂತರ "ಕುಫ್ಫಾರ್" ಪದ ಅದನ್ನು ನಾನು ಸ್ವಪ್ನದಲ್ಲಿ ಕೇಳಿದ್ದೆ. ಅದರ ಬಗ್ಗೆ ತಿಳಿಯಲು ಪ್ರಾರಂಭಿಸಿದೆ. ಆದರೆ ವ್ಯಾಖ್ಯಾನ ದೊರೆಯಲಿಲ್ಲ. ಮತ್ತೆ ನಾನು ಕಾರಳಿಗೆ ಕೇಳಿದೆ. ಸಂಪರ್ಕಿಸಿದೆ. ತನ್ನ ಸ್ವಪ್ನದ ಬಗ್ಗೆ ಹೇಳಿದೆ. ಆಗ ಕಾರ ನನಗೆ ತಿಳಿಸಿದಳು. ಕುಫಾರ್ ಪದ ಕಾಫಿರ್‌ನಿಂದ ಬಂದಿದೆ, ಇತರ ಮುಸ್ಲಿಮರು ಅಹ್ಮದಿಯರಿಗೆ ಕಾಫಿರ್ ಎನ್ನುತ್ತಾರೆ. ಆಗ ನನಗೆ ಆಶ್ಚರ್ಯವಾಯಿತು. ಆಘಾತವಾಯಿತು. ಅಹ್ಮದಿಯರಿಗೆ ಏಕೆ ಕಾಫಿರ್ ಎನ್ನುತ್ತಾರೆ. ಆದುದರಿಂದ ನಾನು ತಡಮಾಡದೆ ಅಹ್ಮದಿಅತ್ ಸ್ವೀಕರಿಸಲು ನಿರ್ಣಯಿಸಿಕೊಂಡೆ. ಏಕೆಂದರೆ ಸ್ವಪ್ನದಲ್ಲಿಯೇ ಅಲ್ಲಾಹನು ನನಗೆ ಮಾರ್ಗದರ್ಶನ ನೀಡಿದ್ದನು. ಹೀಗೆ ಅಲ್ಲಾಹನ ಅನುಗ್ರಹದಿಂದ ತನ್ನ ಐದು ಮಕ್ಕಳ ಸಮೇತ ಜಮಾಅತಿನಲ್ಲಿ ಸೇರಿದೆ.

ಅಮೀರ್ ಸಾಹಿಬ್ ನಾಯ್‌ಜೇರಿಯಾ ಹೇಳುತ್ತಾರೆ. ಅಹ್ಮದಿ ಊರು

**(ಮುಂದುವರಿಯುವುದು)**

EDITOR
TARIQ AHMED IDRIS.
Mobile : +91 8050330779
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2020-22 Vol No.1, Thursday, 29 October 2020, Issue No. 42

MANAGER
NAWAB AHMAD.
Mobile : +91 94170-20616
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.500/- (Per Issue: 10/- ) (WEIGHT: 20-50, grms / issue)

***ಜಲ್ಸ ಸಾಲಾನ ಯು.ಕೆ ಸಂದರ್ಭದಲ್ಲಿ ಸಯ್ಯದುನಾ ಅಮೀರುಲ್ ಮುಮಿನೀನ್ ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್ ಖಲೀಫತುಲ್ ಮಸೀಹ್ ಅಲ್ ಖಾಮಿಸ್(ಅಬಿಅ) ರವರ ವಿಶೇಷ ಸಂಬೋಧನೆ, ದಿನಾಂಕ: 9 ಆಗಸ್ಟ್ 2020, 9 ಝುಹರ್ 1399 ಸೌರಮಾನ ಶಕೆ, ಸ್ಥಳ ಐವಾನೆ ಮಸ್ರೂರ್, ಇಸ್ಲಾಮಾಬಾದ್, ಟೆಲಿಫೋರ್ಡ್ (ಸಿರೆ) ಯು.ಕೆ.***

**(ಭಾಗ–2)**

ಅಹ್ಮದಿಯಾ ರೇಡಿಯೋ Stations:

ಪ್ರಸಕ್ತ ವರ್ಷದ ಎರಡು ಹೊಸ ರೇಡಿಯೋ Station ನೊಂದಿಗೆ ಈಗ ಜಮಾಅತಿನ ಒಟ್ಟು ರೇಡಿಯೋ Station ಗಳ ಸಂಖ್ಯೆ 27 ಆಗಿವೆ. ಅವುಗಳಲ್ಲಿ 17 ಮಾಲಿಯಲ್ಲಿ, ಬಾಕಿ ಬೋರ್‌ಕೆನ ಫಾಸು, ಸಿರಾಲಿಯೋನ್, ತಂಝಾನಿಯಾ ಮತ್ತು ಗೆಂಬಿಯಾದಲ್ಲೂ ಇದೆ. ಮತ್ತು ಇಲ್ಲಿ (ಯು.ಕೆ ಯಲ್ಲಿ) voice of Islam ಕಾರ್ಯ ನಿರ್ವಹಿಸುತ್ತದೆ. ಉತ್ತಮ ರೀತಿಯಲ್ಲಿ ಕಾರ್ಯ ನಡೆಯುತ್ತಿದೆ.

ಪ್ರಸಕ್ತ ವರ್ಷ 2019ರಲ್ಲಿ ಕಾಂಗೋಕನ್‌ಶಾಸಾಕೋ ರೇಡಿಯೋ ಇಸ್ಲಾಮಿಕ್ ಅಹ್ಮದಿಯಾ ಹೆಸರಿನ ಪ್ರಥಮ ರೇಡಿಯೋ Station ಸ್ಥಾಪಿಸುವ ಭಾಗ್ಯ ದೊರೆಯಿತು. ಅಲ್ಲಿಯ "ಮತಾದಿ" ವಲಯದ ಮುಬಲ್ಲಿಗ್ ಬರೆಯುತ್ತಾರೆ. ರೇಡಿಯೋ ಕಾಂಗೊ ಉದ್ಘಾಟನಾ ಸಂದರ್ಭದಲ್ಲಿ ಸ್ಥಳೀಯ ಕ್ಷೇತ್ರದ ದೊಡ್ಡ ಪಾದರಿಗಳಾದ ಇಸ್ಲಾಖ್ ಸಾಹಿಬ್ ಭಾಗವಹಿಸಿದ್ದರು. ಅಲ್ಲಿ ಇಸ್ಲಾಮ್ ಅಹ್ಮದಿಯತ್ತಿನ ನಿಜವಾದ ಶಿಕ್ಷಣಗಳನ್ನು ತಿಳಿದು ಹೇಳಿದರು. ನಾನು ದಶಕಗಳಿಂದ ಇಲ್ಲಿಯ ಮುಸಲ್ಮಾನರಿಂದ ಜಾದೂ, ತಾಯತ ಕಟ್ಟುವುದು, ಅಮಲಿಯಾದತ್ ಇತ್ಯಾದಿಯ ಹೆಸರುಗಳೇ ಇಸ್ಲಾಮ್ ಎಂದು ತಿಳಿದಿದ್ದೆ. ಆ ಕಾರಣ ಇಸ್ಲಾಮ್ ಕಡೆ ನನ್ನ ಲಕ್ಷ್ಯವೇ ಹರಿಯಲಿಲ್ಲ. ಆದರೆ ಇಲ್ಲಿ ಕಾಣುವಂತಹ ಭ್ರಾತೃತ್ವ ಮತ್ತು ಅನುಕಂಪ ಹಾಗೂ ಪ್ರೀತಿ ಸ್ನೇಹ ಮತ್ತು ಸಧ್ಭಾವನೆಗಳ ಶಿಕ್ಷಣ ತಿಳಿದು ನನ್ನ ಹಿಂದಿನ ನಿಲುವನ್ನು ಬದಲಾಯಿಸಿಬಿಟ್ಟೆ. ನನಗೆ ತುಂಬ ಸಂತೋಷವಾಗುತ್ತಿದೆ. ಈಗ ನಮಗೆ ಇಸ್ಲಾಮಿನ ಬಗ್ಗೆ ಇನ್ನೂ ಹೆಚ್ಚಿನ ಮಾಹಿತಿ ದೊರೆಬಹುದಾಗಿದೆ.

ಬೋರ್‌ಕೇನಾ ಫಾಸುವಿನ "ಬಾನ್‌ಫೋರ" ವಲಯದ ಮುಬಲ್ಲಿಗ್ ಬರೆಯುತ್ತಾರೆ. ನಗರದ ಸ್ಥಳೀಯ ರೇಡಿಯೋ ಮೂಲಕ ಜಮಾಅತಿನ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ. ಅದರಲ್ಲಿ ನೇರ ಪ್ರಸಾರವೂ ಒಳಗೊಂಡಿದೆ. ಒಂದು ದಿನ ಒಬ್ಬ ವ್ಯಕ್ತಿ ಫೋನ್ ಮೂಲಕ ತಿಳಿಸಿದ. ನಾನು ಬಾನ್‌ಫೋರ ನಿವಾಸಿಯಾಗಿದ್ದೇನೆ ಮತ್ತು ನಿರಂತರ ಜಮಾಅತಿನ ಪ್ರಚಾರ ಕೇಳುತ್ತಿದ್ದೇನೆ. ಅದರಿಂದ ಈ ಮಾತು ಸ್ಪಷ್ಟವಾಯಿತು. ಅಹ್ಮದಿಯತ್ ನಿಜವಾದ ಇಸ್ಲಾಮ್ ಆಗಿದೆ. ಆದುದರಿಂದ ನಾನು ನಿಮ್ಮನ್ನು ಭೇಟಿಯಾಗ ಬಯಸುತ್ತೇನೆ ಮತ್ತು ಅಹ್ಮದಿಅತ್ತಿನಲ್ಲಿ ಸೇರಬಯಸುತ್ತೇನೆ. ಏಕೆಂದರೆ ಸದ್ಯ ಅಹ್ಮದಿಯಾ ಜಮಾಅತಿನಲ್ಲಿ ಅಲ್ಲದೇ ಎಲ್ಲಿಯೂ ಇಸ್ಲಾಮಿನ ನಿಜವಾದ ಶಿಕ್ಷಣ ಕಂಡುಬರುತ್ತಿಲ್ಲ. ಪ್ರತಿಯೊಬ್ಬರಲ್ಲಿ ಬೇಕಾದಷ್ಟು ಭಿನ್ನಾಭಿಪ್ರಾಯಗಳಿವೆ. ವಿರೋಧಭಾಸಗಳಿವೆ. ಅದರಿಂದ ಹೊರಬರಲು ಸಾಧ್ಯವಿಲ್ಲ. ಆದುದರಿಂದ ಇಂದು ಶಾಂತಿ ಕೇವಲ ಅಹ್ಮದಿಯತ್ತಿನಲ್ಲಿ ಇದೆ.

ಮತ್ತೆ ಕೊಂಗೋಕನ್‌ಶಾಸಾ ದಲ್ಲಿಯ ಮುಬಲ್ಲಿಗ್ ಒಬ್ಬರು ಬರೆಯುತ್ತಾರೆ. ಅಹ್ಮದಿಯಾ ರೇಡಿಯೋ ರಕ್ಷಣಾ ವಿಭಾಗದ ಕಾರ್ಯಕರ್ತರೊಬ್ಬರು ಒಂದು ದಿನ ಜಮಾಅತಿನ ಪುಸ್ತಕ "The truth story of Jesus" ಓದುತ್ತಿದ್ದರು. ಆ ನಡುವೆ ರಿಫಾರ್ಮ್ ಚರ್ಚ್‌ನ ಪಾದರಿಯರು ಅಲ್ಲಿಂದ ಹೋಗುವಾಗ ಅವರ ದೃಷ್ಟಿ ಆ ಪುಸ್ತಕ ಮೇಲೆ ಬಿತ್ತು. ಆಗ ಕೇಳಿದರು, ಇದೇನು ಓದುತ್ತಿದ್ದೀರಿ. ಇಸಾ ಸಾಹಿಬ್ ಅವರಿಗೆ ಪುಸ್ತಕ ತೋರಿಸಿದರು. ಅದರ ಶೀರ್ಷಿಕೆ ನೋಡಿಯೇ ಫಾದರಿ ಸಾಹೇಬರಿಗೆ ಆಸಕ್ತಿ ಮೂಡಿತು. ಅವರು ಅಧ್ಯಯನ ಮಾಡಲು ಆ ಪುಸ್ತಕವನ್ನು ಕೇಳಿಕೊಂಡರು.

ಮರುದಿನ ರೇಡಿಯೊ ನಿಲಯಕ್ಕೆ ಆಗಮಿಸಿ ಈಸಾ(ಅ) ರವರ ಜೀವನದ ಬಗ್ಗೆ ಬಹಳಷ್ಟು ಪ್ರಶ್ನೆಗಳನ್ನು ಕೇಳಿದರು. ಅವರಿಗೆ ಎಲ್ಲ ಪ್ರಶ್ನೆಗಳ ತೃಪ್ತಿಕರ ಉತ್ತರಗಳನ್ನು ನೀಡಿದಾಗ ಹೇಳಿದರು. ಹಝ್ರತ್ ಈಸಾ(ಅ) ರವರ ನಿಜವಾದ ಸ್ಥಾನಮಾನ ಇದೇ ಆಗಿದೆ. ಇದು ಸತ್ಯ ಸಾಕ್ಷ್ಯಗಳಾಗಿವೆ. ಅದು ಸಾರ್ವಜನಿಕರಿಂದ ಮರೆಮಾಚಲ್ಪಟ್ಟಿವೆ. ನಾನು ಇದ್ದ ಜಾಗ ಬಿಡುವುದು ತುಂಬ ಕಠಿಣವಾಗಿದೆ. ನನ್ನಲ್ಲಿ ಅಷ್ಟೊಂದು ಧೈರ್ಯವಿರುತ್ತಿದ್ದರೆ ಈ ಕೂಡಲೇ ಜಮಾಅತಿನಲ್ಲಿ ಸೇರಿ ಪ್ರಚಾರ ಕಾರ್ಯ ಪ್ರಾರಂಭ ಮಾಡುತ್ತಿದ್ದೆ. ಆದರೆ ವಿವಶನಾಗಿದ್ದೇನೆ. ಮತ್ತು ಹೇಳಿದರು. ನನಗಾಗಿ ದುಆ ಮಾಡಿ ಅಲ್ಲಾಹನು ನನಗೆ ಶಕ್ತಿ ನೀಡುವಂತಾಗಲಿ, ಆ ಮೂಲಕ ಲೋಕದೊಂದಿಗೆ ಹೋರಾಡಿ ನಿಜವಾದ ಸಂದೇಶ ಸ್ವೀಕರಿಸುವಂತಾಗಲಿ.

ಅಲ್ಲದೇ ಇತರ ರೇಡಿಯೋ ಕಾರ್ಯಕ್ರಮಗಳಿವೆ. MTA International ನ 24 ಗಂಟೆಗಳ ಪ್ರಸಾರ ಅಲ್ಲದೇ 84 ದೇಶಗಳಲ್ಲಿ ಟಿ.ವಿ ಮತ್ತು ರೇಡಿಯೋ ಚಾನಲ್‌ಗಳ ಮೂಲಕ ಜಮಾಅತಿಗೆ ಇಸ್ಲಾಮಿನ ಶಾಂತಿಪೂರ್ಣ ಸಂದೇಶ ತಲುಪಿಸುವ ಭಾಗ್ಯ ದೊರೆಯುತ್ತಿದೆ. ಪ್ರಸಕ್ತ ವರ್ಷ 11,063 ಟಿ.ವಿ ಕಾರ್ಯಕ್ರಮಗಳ ಮೂಲಕ 6,842 ಗಂಟೆಯ ಸಮಯ ದೊರೆಯಿತು. ಮತ್ತು ರೇಡಿಯೊ ನಿಲಯಗಳಲ್ಲದೇ ವಿವಿಧ ದೇಶಗಳಲ್ಲಿ ರೇಡಿಯೋ ನಿಲಯಗಳಲ್ಲಿ 18,479 ಗಂಟೆ ಒಳಗೊಂಡ 22,167 ಕಾರ್ಯಕ್ರಮಗಳು ಬಿತ್ತರವಾದವು. ಟಿ.ವಿ ಮತ್ತು ರೇಡಿಯೋ ಮೂಲಕ ಅಂದಾಜು 52 ಕೋಟಿ ಜನರವರೆಗೆ ಸಂದೇಶ ತಲುಪಿದೆ.

ಸೆನೆಗಾಲಿನ ಅಮಿರ್ ಸಾಹಿಬ್ ಬರೆಯುತ್ತಾರೆ.

ಅಂಬೂರ್ ನಗರದ ಸ್ಥಳಿಯ ಟಿ.ವಿ ನಿಲಯ ಯೂಟ್ಯೂಬ್‌ನಲ್ಲೂ ಪ್ರಸಾರಗೊಳ್ಳುತ್ತಿದೆ. ಅಲ್ಲಿ ನನ್ನ ಖುತುಬ ಆಲಿಸಲಾಗುತ್ತದೆ. ಇಲ್ಲಿ ಲಂಡನ್‌ನಿಂದ ಒಖಿಂ ಯಲ್ಲಿ ಪ್ರಸಾರಗೊಳ್ಳುತ್ತಿದ್ದು, ಇದರಿಂದ ಪಡೆದು ಆಲಿಸಲಾಗುತ್ತಿದೆ. ಆ ಮೂಲಕ ಒಂದು ವ್ಯಾಪಾರಸ್ಥ ಕುಟುಂಬ ಅಹ್ಮದಿಅತ್‌ಗೆ ಸೇರಲ್ಪಟ್ಟಿದೆ. ಈ ಟಿ.ವಿ ನಿಲಯದ ಮಾಲೀಕರು ಜಲ್ಸ ಸಾಲಾನ ಜರ್ಮನಿಗೆ ಆಗಮಿಸಿ ನನ್ನೊಡನೆ ಭೇಟಿಯೂ ಆಗಿದ್ದರು.

## INTERNATIONAL ASSOCIATION OF AHMADIYYA ARCHITECTS & ENGINEERS:

ಇದು ಸಹ ವಿವಿಧ ಯೋಜನೆಗಳ ಮೇಲೆ ಕಾರ್ಯಪ್ರವೃತ್ತವಾಗಿದೆ. ಒಂದು Water for life ಇದೆ. ಇನ್ನೊಂದು Solar system ಇದೆ. ಮೂರನೆಯದಾಗಿ ಆಫ್ರಿಕಾದ ಬಡ ದೇಶಗಳಲ್ಲಿ Model vilalges (ಮಾದರಿಯ ಗ್ರಾಮಗಳು) ಇವೆ. ನಾಲ್ಕನೆಯದಾಗಿ ನಿರ್ಮಾಣ ಕಾರ್ಯಗಳ ಯೋಜನೆಗಳಾಗಿವೆ. ಇವೆಲ್ಲ ಕಾರ್ಯಗಳನ್ನು ನೆರವೇರಿಸಲು ಯು.ಕೆ., ಜರ್ಮನಿ, ಸ್ವಿಜ್ಜರ್‌ಲ್ಯಾಂಡ್, ಹಾಲೆಂಡ್ ಘಾನಾ, ನೈಜಿರಿಯಾ, ಪಾಕಿಸ್ತಾನ ಮತ್ತು ಇತರ ದೇಶಗಳಿಂದ ಇಂಜಿನಿಯರ್ಸ್ ಮತ್ತು ಆರ್ಕಿಟೆಕ್ಟರ್ಸ್, ವಿದ್ಯುತ್ ಪರಿಣಿತರು, ಪ್ಲಂಬರ್ಸ್ ಮತ್ತು ಇತರ ವಿಭಾಗದ ತಜ್ಞರು ತಮ್ಮ ಸೇವೆಗಳನ್ನು ಪ್ರಸ್ತುತಪಡಿಸುತ್ತಾರೆ. ಅಲ್ಲಾಹನ ಅನುಗ್ರಹದಿಂದ ಇವರು ಲೋಕದಾದ್ಯಂತ ಒಳ್ಳೆಯ ಕಾರ್ಯಗಳನ್ನು ನಿರ್ವಹಿಸುತ್ತಿದ್ದಾರೆ. ಇಲ್ಲಿಯವರೆಗೆ ಅವರ ಮೂಲಕ ಒಟ್ಟು 2,800 ಕ್ಕಿಂತ ಅಧಿಕ ಊರುಗಳಲ್ಲಿ ನೀರಿನ ನಲ್ಲಿಗಳನ್ನು ಜೋಡಿಸಲಾಗಿದೆ. ಆ ಮೂಲಕ ಎರಡು ಲಕ್ಷ 50 ಸಾವಿರಕ್ಕಿಂತ ಹೆಚ್ಚು ಜನರು ಲಾಭಾನ್ವಿತರಾಗುತ್ತಿದ್ದಾರೆ. ಮಾದರಿ ಗ್ರಾಮಗಳ ಬಗ್ಗೆ ಹೇಳುವುದಾದರೆ ಇಲ್ಲಿಯವರೆಗೆ 9 ದೇಶಗಳಲ್ಲಿ 19 ಮಾದರಿಯ ಗ್ರಾಮಗಳನ್ನು ಸ್ಥಾಪಿಸಲಾಗಿದೆ.

ಕಾಂಗ್‌ಳ (ಇಂಡಿಯಾ)ದ ಮುಬಲ್ಲಿಗ್ ಸಾಹಿಬ್ ವಕ್ಫ್‌ಜದೀದ್ ಬರೆಯುತ್ತಾರೆ. ನಮ್ಮಲ್ಲಿ ನೀರಿನ ಅವಶ್ಯಕತೆ ಇತ್ತು. ಬೋರ್ ಹಾಕಿಸಲು ಆಪರೇಟರನ್ನು ಕರೆಸಲಾಯಿತು. ಅವರು ಬರುತ್ತಲೇ ಹೇಳಿದರು. ನಾನು ನಾಲ್ಕು ಮಸೀದಿಗೆ ಹೋಗಿರುತ್ತೇನೆ. ಅಲ್ಲಿ ಎರಡೆರಡು ಬೋರ್ ಹಾಕಿ ನೋಡಿದೆ. ಆದರೆ ಯಶಸ್ಸು ದೊರೆಯಲಿಲ್ಲ. ಆದುದರಿಂದ ನನಗೆ ಹೇಳಲು ಸಾಧ್ಯವಿಲ್ಲ. ನೀರು ಸಿಗುತ್ತದೆಯೋ ಇಲ್ಲವೊ ಎಂದು. ನೀವು ಉಚಿತ ಎಂದು ಭಾವಿಸಿದ ಜಾಗದಲ್ಲಿ ಅಲ್ಲಾಹನ ನಾಮದೊಂದಿಗೆ ಕಾರ್ಯ ಪ್ರಾರಂಭ ಮಾಡಿ, ಜಮಾಅತಿನವರೊಂದಿಗೆ ದುಆ ಮಾಡಲು ಹೇಳಲಾಯಿತು. ಸದಖಾ ಸಹ ಕೊಡಲಾಯಿತು. ಮೂವತ್ತು ಫೀಟ್ (ಅಡಿ) ಯಲ್ಲಿಯೇ ನೀರು ಬರುವ ಲಕ್ಷಣಗಳು ಕಂಡು ಬಂದವು ಮತ್ತು ಹೇಳುತ್ತಾರೆ. ಮೂರು ನೂರು ಅಡಿಗೆ ಕಾರ್ಯ ಅಂತ್ಯಗೊಳಿಸಲಾಯಿತು. ಉತ್ತಮವಾದ ನೀರು ಸಿಕ್ಕಿತು. ಮಿಷನ್ ಆಪರೇಟರ್ ಹೇಳಿದರು. ನಿಮ್ಮ ವಿಧಾನ ನೋಡಿ ನಾನು ಒಪ್ಪಿಕೊಂಡಿದ್ದೇನೆ. ನೀವು ಯಾವ ರೀತಿ ದುಆ ಮತ್ತು ಸದಖಾ ಮಾಡಿ ಈ ಜಾಗದಿಂದ ನೀರು ಬರಿಸಿದ್ದೀರಿ ಎಂದು. ಇದು ಕಲ್ಲು ಪ್ರದೇಶವಾಗಿತ್ತು. ನೀರು ಸಿಗುವುದು ತುಂಬ ಕಷ್ಟವಿತ್ತು. ಆದರೆ ಅಲ್ಲಾಹನ ಅನುಗ್ರಹದಿಂದ ನೀರು ದೊರೆತಿದಷ್ಟೇ ಅಲ್ಲ. ತುಂಬ ಸಿಹಿಯೂ ಆಗಿತ್ತು. ಈಗ ಊರಿನ ಜನರೆಲ್ಲ ಈ ನೀರನ್ನು ಬಳಸುತ್ತಿದ್ದಾರೆ.

ಗನಿಕನಾಕರಿಯ ಮುಬಲ್ಲಿಗ್ ಇನ್‌ಚಾರ್ಜ್ ಬರೆಯುತ್ತಾರೆ. ನಾನು ದೂರದ ಒಂದು ಊರಿಗೆ ಹೋಗಿದ್ದೆ. ಅಲ್ಲಿ ಒಬ್ಬ ಮಹಿಳೆ ನನಗೆ ಹೇಳಿದರು. ನಾನು

*(ಪುಟ ಸಂಖೆ 09 ರಲ್ಲಿ ಮುಂದುವರಿಸಲಾಗಿದೆ)*

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.